
ಜುಲೈ 27, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1995
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಬಿಜೆಪಿ ಶಾಸಕರ 'ಟಾರ್ಗೆಟ್' ಮಾಡಿದೇ ಕಾಂಗ್ರೆಸ್ ಸರ್ಕಾರ?!

# ರೌಡಿ 'ಬಿಕ್ಲು' ಕಗ್ಗೊಲೆ ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಭಾರೀ ತಿಕ್ಲು!



ಭೈರತಿ ಬಸವರಾಜ್ ಪಾತ್ರವೇನು?





## ಗರ್ಭಿಣಿ ಪತ್ನಿಯ ಕೊಂದು ತಾನೂ ನೇಣು ಜೀರಿಕೊಂಡ!

## ಸಿಎಂ ಆಗುವ 'ಡಿಕೆಶಿ' ಕನಸಿಗೆ ಎಳ್ಳುನೀರು?!



## ಸೆಂಟ್ರಲ್ ಜೈಲ್ ಮೇಲೆ NAI ದಾಳಿ! ಉಗ್ರರಿಗೆ 'ಸ್ವರ್ಗ' ಸೃಷ್ಟಿಸಿವರ್ಯಾರು?



## ದೆವ್ವ ಬಿಡಿಸೋದಾಗಿ 28 ಲಕ್ಷ ದೋಚಿದ ಜ್ಯೋತಿಷಿ!

# ಸಿಎಂ ಆಗೋ ಡಿಕೆಶಿ ಕನಸಿಗೆ ಸಿದ್ದು ಎಳ್ಳುನೀರು ಬಿಟ್ರಾ?!

✍ ಬಿ.ಎಂ. ಲವಕುಮಾರ್



2018ರಿಂದಲೂ ಸಿಎಂ ಆಗುವ ಕನಸು ಹೊತ್ತುಕೊಂಡೇ ರಾಜಕೀಯ ಮಾಡಿಕೊಂಡು ಬಂದಿರುವ ಡಿ.ಕೆ. ಶಿವಕುಮಾರ್ ಅವರಿಗೆ ಅದ್ಯಾಕೋ ಗೊತ್ತಿಲ್ಲ ಸಿಎಂ ಆಗುವ ಭಾಗ್ಯ ತಪ್ಪುತ್ತಲೇ ಇದೆ. ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಕ್ಕೆ ಅಧಿಕಾರ ಹಂಚಿಕೆಯಾಗಿ



ಸಿಎಂ ಆಗುತ್ತಾರೆ ಎಂದು ಅವರ ಬೆಂಬಲಿಗರು ಖುಷಿ ಪಡುತ್ತಿರುವ ಹೊತ್ತಿನಲ್ಲಿ ದೆಹಲಿಯಲ್ಲಿ ನಿಂತು ಮುಂದಿನ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಅವರು ಘೋಷಣೆ ಮಾಡಿರುವುದು ಸ್ವತಃ ಡಿ.ಕೆ. ಶಿವಕುಮಾರ್ ಸೇರಿದಂತೆ ಅವರ ಬೆಂಬಲಿಗರ ತಲೆಕೆಡಿಸುವಂತೆ ಮಾಡಿದೆ.


2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿದ ಸ್ಥಾನಗಳನ್ನು ಗಳಿಸುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಪರ ಗಾಳಿ ಬೀಸಿರುವುದನ್ನು ನೋಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಂಭ್ರಮಿಸಿದ್ದರು. ಅಷ್ಟೇ ಅಲ್ಲದೆ, ಈ ಬಾರಿ ನಾನೇ ಮುಖ್ಯಮಂತ್ರಿ ಎಂಬ ವಿಶ್ವಾಸದಲ್ಲಿದ್ದರು. ಅಂತಹದೊಂದು ವಿಶ್ವಾಸ ಬರಲು ಕಾರಣವೂ ಇತ್ತು.



2013ರಲ್ಲಿ ಚುನಾವಣೆ ನಡೆದು ಮುಖ್ಯಮಂತ್ರಿಯಾದ ಸಿದ್ದರಾಮಯ್ಯನವರು ಮಾಧ್ಯಮಗಳ ಮುಂದೆ ಇದೇ ನನ್ನ ಕೊನೆಯ ಚುನಾವಣೆ ಎಂದಿದ್ದರು. ಆ ನಂತರ ಯಶಸ್ವಿಯಾಗಿ ಐದು ವರ್ಷಗಳನ್ನು ಪೂರೈಸಿದ್ದರು. ಅದಾದ ನಂತರ 2018ರ ಚುನಾವಣೆ ವೇಳೆಗೆ ಕಾಂಗ್ರೆಸ್ ಕರ್ನಾಟಕದಲ್ಲಿ ಮಕಾಡೆ ಮಲಗಿತ್ತು. ಆದರೆ ಬಿಜೆಪಿ ಅತಿ ಹೆಚ್ಚಿನ ಸ್ಥಾನ ಪಡೆದರೂ ಸರ್ಕಾರ ರಚನೆ ಮಾಡುವಷ್ಟು ಬಹುಮತ ಪಡೆದಿರಲಿಲ್ಲ.

ಇದೇ ಸಂದರ್ಭ ಏನೇ ಆದರೂ ಬಿಜೆಪಿಗೆ ಅಧಿಕಾರಕ್ಕೆ ಬರಲು ಬಿಡಲೇ ಬಾರದು ಎಂಬ ಹಠಕ್ಕೆ ಬಿದ್ದ ಕಾಂಗ್ರೆಸ್ ನಾಯಕರು ಅರ್ಥಾತ್ ಹೈಕಮಾಂಡ್ ಪ್ರಬಲ ವಿರೋಧಿಗಳಾಗಿದ್ದ ಜೆಡಿಎಸ್ ನಾಯಕರ ಮನೆ ಬಾಗಿಲು ತಟ್ಟಿ ಜೆಡಿಎಸ್ ಜತೆಗೆ ಸರ್ಕಾರ ರಚಿಸಿತ್ತು. ಅವತ್ತು ಆಡಳಿತದಿಂದ ದೂರವಾಗಿ ಕೇವಲ ಶಾಸಕರಾಗಿ ಸಿದ್ದರಾಮಯ್ಯ ಉಳಿದು ಹೋದರು. ಶತ್ರುಗಳ ಶತ್ರು ಮಿತ್ರರು ಎಂಬಂತೆ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಸೇರಿಕೊಂಡು ಕೂಡಾವಳಿ ಸರ್ಕಾರವನ್ನು ಅಸ್ತಿತ್ವಕ್ಕೆ ತಂದಿದ್ದರು.

ಆ ನಂತರ ಏನೇನು ಆಯಿತು ಎಂಬುದು ರಾಜ್ಯದ ಜನತೆಗೆ ಗೊತ್ತೇ ಇದೆ. ಎರಡು ವರ್ಷ ಪೂರೈಸುವ ಹೊತ್ತಿಗೆ ಅತೃಪ್ತ ಶಾಸಕರು ಬಿಜೆಪಿ ಕಡೆಗೆ ವಾಲಿದ್ದರಿಂದ



ಸರ್ಕಾರ ಬಿದ್ದು ಹೋಯಿತು ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂತು. ಈ ಹೊತ್ತಿಗೆ ಕಾಂಗ್ರೆಸ್ ಪಕ್ಷದ ಕಥೆಯೂ ಮನೆಯೊಂದು ಮೂರು ಬಾಗಿಲು ಎಂಬ ಪರಿಸ್ಥಿತಿಗೆ ತಲುಪಿತ್ತು. ಹೀಗಾಗಿ ಮತ್ತೆ ಕಾಂಗ್ರೆಸ್ ನ್ನು ಕಟ್ಟಿ ಅಧಿಕಾರಕ್ಕೆ ಪಣ ತೊಟ್ಟು ನಿಂತವರು ಇದೇ ಡಿ.ಕೆ.ಶಿವಕುಮಾರ್.

ಮೇಕೆದಾಟು ಅಣೆಕಟ್ಟೆ ವಿಚಾರವನ್ನು ಮುಂದಿಟ್ಟುಕೊಂಡು ಹೋರಾಟ ಆರಂಭಿಸಿದ್ದರು. ಅದು ಯಾವುದೇ ಹೋರಾಟದಿಂದ ಆಗುವಂತಹದಲ್ಲ ಎಂಬುದು ಕಾಂಗ್ರೆಸ್‌ಗೆ ಗೊತ್ತಿತ್ತು. ಆದರೆ ಅವತ್ತಿನ ಹೋರಾಟಕ್ಕೊಂದು ವೇದಿಕೆ ಬೇಕಾಗಿತ್ತು. ಅಷ್ಟೇ ಅಲ್ಲದೆ ಪಕ್ಷದಲ್ಲಿ ಮೌನಕ್ಕೆ ಜಾರಿ ಹೋಗಿದ್ದ ತಮ್ಮ ಪಾಡಿಗೆ ತಾವಿದ್ದ ನಾಯಕರನ್ನು ಒಂದೆಡೆ ಸೇರಿಸುವ ಅಗತ್ಯತೆಯಿತ್ತು. ಅದೆಲ್ಲದಕ್ಕೆ ಮೇಕೆದಾಟು ಪಾದಯಾತ್ರೆ ಸಾಕ್ಷಿಯಾಯಿತು.

ಈ ಬಾರಿ ಅಧಿಕಾರಕ್ಕೆ ಬಂದರೆ ನಾನೇ ಸಿಎಂ ಆಗುತ್ತೇನೆ ಎಂಬ ವಿಶ್ವಾಸ ಅವತ್ತು ಡಿ.ಕೆ.ಶಿವಕುಮಾರ್ ಅವರಲ್ಲಿ ಬಲವಾಗಿತ್ತು. ಹೀಗಾಗಿಯೇ ಒಕ್ಕಲಿಗರು, ಲಿಂಗಾಯಿತರು, ಹಿಂದುಳಿದ, ಅಲ್ಪಸಂಖ್ಯಾತರನ್ನು ತನ್ನೆಡೆಗೆ ಸೆಳೆಯುವ ಪ್ರಯತ್ನ ಮಾಡಿದರು. ಅವತ್ತಿನ ಬಿಜೆಪಿ ಸರ್ಕಾರ ಪರಮ ಭ್ರಷ್ಟ ಸರ್ಕಾರವೆಂದು ಬಿಂಬಿಸುವಲ್ಲಿಯೂ ಯಶಸ್ವಿಯಾದರು. ಇದೆಲ್ಲದರ ಪರಿಣಾಮ ರಾಜ್ಯದಲ್ಲಿ 2023ರ ಚುನಾವಣೆ ಹೊತ್ತಿಗೆ ಕಾಂಗ್ರೆಸ್ ಪರ ಗಾಳಿ ಜೋರಾಗಿ ಬೀಸಲಾರಂಭಿಸಿತು.

ರಾಜ್ಯ ಕಾಂಗ್ರೆಸ್ ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಜನರಲ್ಲಿ ಮನೆ ಮಾಡಿತ್ತಾದರೂ ಅದೆಲ್ಲವನ್ನು ಬದಿಗೆ ತಳ್ಳಿ ನಮ್ಮಲ್ಲಿ ಡಿಕೆಶಿ, ಸಿದ್ದರಾಮಯ್ಯ ಎನ್ನುವ ಯಾವುದೇ ಪ್ರತ್ಯೇಕ ಬಣವಿಲ್ಲ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ ಎಂಬುದನ್ನು ತೋರಿಸುವ ಪ್ರಯತ್ನವನ್ನು ಮಾಡಿದ್ದರು. ಅದರಲ್ಲಿ ಸಕ್ಸಸ್ ಆಗಿದ್ದರು. ಇನ್ನೊಂದೆಡೆ ದೇವೇಗೌಡರ ಕುಟುಂಬದತ್ತ ಒಲವು ಹೊಂದಿದ್ದ ಒಕ್ಕಲಿಗರನ್ನು ತಮ್ಮ ಕಡೆಗೆ ಸೆಳೆಯುವಲ್ಲಿಯೂ ಯಶಸ್ವಿಯಾದರು.

ಇದೆಲ್ಲದರ ನಡುವೆ 2022ರಲ್ಲಿಯೇ ಮುಂದಿನ ವಿಧಾನಸಭಾ ಚುನಾವಣೆ 2023ರಲ್ಲಿ ಬಹುಮತ ಪಡೆದರೆ ನಾನೇ ಸಿಎಂ ಎಂಬ ಹೇಳಿಕೆಯನ್ನು ಅದಾಗಲೇ ಡಿ.ಕೆ.ಶಿವಕುಮಾರ್ ತೇಲಿ ಬಿಟ್ಟಾಗಿತ್ತು. ಎಸ್.ಎಂ.ಕೃಷ್ಣ ಬಳಿಕ ಮುಖ್ಯಮಂತ್ರಿಯಾಗಲು ನನಗೆ ಅವಕಾಶ ಮಾಡಿಕೊಡಿ ಎಂದು ಒಕ್ಕಲಿಗರ ಮುಂದೆ ಮನವಿ ಮಾಡಿಕೊಂಡಿದ್ದರು. ಒಕ್ಕಲಿಗರು ನಮ್ಮ ಸಮುದಾಯದ ನಾಯಕ ಮುಖ್ಯಮಂತ್ರಿಯಾಗಲಿ ಎಂಬ ಉದ್ದೇಶದಿಂದ ಬೆಂಬಲಿಸಿದ್ದರು.

ಹಾಗೆ ನೋಡಿದರೆ 2023ರ ಚುನಾವಣೆಗೆ ಮುನ್ನವೇ ಡಿ.ಕೆ. ಶಿವಕುಮಾರ್ ಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ.. ಅವರಿಗೂ ಸಿಎಂ ಸ್ಥಾನ ಅಂಥ ಬಂದರೆ ತಮಗೆ ಸಿದ್ದರಾಮಯ್ಯ ಅವರು ಬಲವಾದ ಪ್ರತಿಸ್ಪರ್ಧಿಯಾಗುತ್ತಾರೆ ಎಂಬುದು ಚೆನ್ನಾಗಿಯೇ ಗೊತ್ತಿತ್ತು. ಆದರೂ ಸಿದ್ದರಾಮಯ್ಯ ಅವರ ಹಿಂದಿನ ಹೇಳಿಕೆ ಡಿಕೆಶಿ ಅವರ ಸಿಎಂ ಕನಸಿಗೆ ಇಂಬು ನೀಡಿತ್ತು ಎಂದರೆ ತಪ್ಪಾಗಲಾರದು.



ಇಷ್ಟಕ್ಕೂ ಸಿದ್ದರಾಮಯ್ಯ ಅವರ ಆ ಹೇಳಿಕೆ ಏನು ಎಂಬುದರ ಬಗ್ಗೆ ಮೆಲುಕು ಹಾಕಿದರೆ 2013ಕ್ಕೆ ಹೋಗಬೇಕಾಗುತ್ತದೆ. ಅವತ್ತು ಚುನಾವಣೆಯಲ್ಲಿ ಕಾಂಗ್ರೆಸ್




ಗೆಲುವು ಸಾಧಿಸಿ ಮುಖ್ಯಮಂತ್ರಿಯಾದಾಗ ಸಿದ್ದರಾಮಯ್ಯರವರು ಇದೇ ನನ್ನ ಕೊನೆಯ ಚುನಾವಣೆ ಎಂದಿದ್ದರು. ಅದಾದ ಬಳಿಕ 2018ರಲ್ಲಿ ಚುನಾವಣೆ ನಡೆದಾಗ ತಾವು ಹಿಂದೆ ಹೇಳಿದ್ದ ಮಾತನ್ನು ಮರೆತು ಬಿಟ್ಟರಲ್ಲದೆ, ತಮ್ಮದೇ ನೇತೃತ್ವದಲ್ಲಿ ಚುನಾವಣೆಗೆ ಹೋಗುವುದರೊಂದಿಗೆ ಮತ್ತೊಮ್ಮೆ ಸಿಎಂ ಆಗುವ ಕನಸು ಹೊತ್ತಿದ್ದರು.

ಆ ವೇಳೆಗೆ ಸಿದ್ದರಾಮಯ್ಯ ಅವರಿಗೆ ಪ್ರತಿಸ್ಪರ್ಧಿಯಾಗಿ ಅವತ್ತು ಇಂಧನ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ಹುಟ್ಟಿಕೊಂಡಿದ್ದರು. ನಾನು ಕೂಡ ಸಿಎಂ ಹುದ್ದೆ ಆಕಾಂಕ್ಷಿ ಎಂಬುದನ್ನು ಸಮಯ ಸಿಕ್ಕಾಗ ಹೇಳುವ ಪ್ರಯತ್ನ ಮಾಡಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ 2018ರ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯದ ಮದ್ದೂರಿನಲ್ಲಿ ಅವತ್ತಿನ ಕಾಂಗ್ರೆಸ್ ಅಭ್ಯರ್ಥಿ ಮಧುಮಾದೇಗೌಡರ ಪರ ನಡೆದ ರೋಡ್ ಶೋ ವೇಳೆ ಜೆಡಿಎಸ್ ನ ಭದ್ರಕೋಟೆಯಲ್ಲಿ ನಿಂತು ತಾನು ಕೂಡ ಸಿಎಂ ಹುದ್ದೆ ಆಕಾಂಕ್ಷಿ ಎಂದು ಘೋಷಿಸಿದ್ದರು.

ಅವತ್ತು ಡಿಕೆಶಿ ಅವರ ಮಾತು ಹೇಗಿತ್ತೆಂದರೆ? ಕುಮಾರಣ್ಣ ಮುಖ್ಯಮಂತ್ರಿ ಆಗ್ತಾರೆ ಓಟ್ ಹಾಕಿ ಅಂತಾರೆ. ಹಾಗಾದ್ರೆ ನಾನೇನಿಲ್ವಾ? ನನಗೇನು ಸಿಎಂ ಆಗೋ ಸಾಮರ್ಥ್ಯವಿಲ್ಲವೇ? ಎಂದು ಸುದ್ದಿಗಾರರನ್ನು ಪ್ರಶ್ನಿಸುವ ಮೂಲಕ ತಮ್ಮ ಒಳಗಿನ ಬಯಕೆಯನ್ನು ಹೊರಹಾಕುವುದರೊಂದಿಗೆ ಕಾಂಗ್ರೆಸ್ ನಾಯಕರಿಗೆ ತನ್ನ ಬಯಕೆ ಏನು ಎಂಬುದನ್ನು ಹೇಳುವ ಕೆಲಸ ಮಾಡಿದ್ದರು.

ಇದಾದ ನಂತರದ ಐದು ವರ್ಷದಲ್ಲಿ ರಾಜಕೀಯವಾಗಿ ರಾಜ್ಯದಲ್ಲಿ ಮತ್ತು ಕಾಂಗ್ರೆಸ್‌ನಲ್ಲಿ ಏನೇನು ಬೆಳವಣಿಗೆ ಆಯಿತು ಎಂಬುದನ್ನು ರಾಜ್ಯದ ಜನತೆ ನೋಡಿದ್ದಾರೆ. ಕಳೆದ 2018ರ ಚುನಾವಣೆಯ ಸೋಲಿನ ಬಳಿಕ ಕಾಂಗ್ರೆಸ್‌ನ ಸಾರಥ್ಯ ವಹಿಸಿಕೊಂಡಿರುವ ಡಿ.ಕೆ.ಶಿವಕುಮಾರ್ ಮುಂದಿನ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಗೆಲ್ಲಿಸಿ ತಾವು ಮುಖ್ಯಮಂತ್ರಿಯಾಗಬೇಕೆಂಬ ಹಠಕ್ಕೆ ಬಿದ್ದರಲ್ಲದೆ ಅದರಲ್ಲಿಯೂ ಯಶಸ್ವಿಯೂ ಆದರು.

2023ರಲ್ಲಿ ಕಾಂಗ್ರೆಸ್ ಬಹುಮತ ಪಡೆದ ನಂತರ ಸರ್ಕಾರ ರಚನೆ ಮಾಡುವಾಗ ಸಿಎಂ ಯಾರಾಗಬೇಕು ಎಂಬ ವಿಚಾರ ಬಂದಾಗ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ನಡುವೆ ಜಟಾಪಟಿ ನಡೆದಿತ್ತು. ಸಿದ್ದರಾಮಯ್ಯ ಅವರು ಸಿಎಂ ಸ್ಥಾನವನ್ನು ಡಿ.ಕೆ.ಶಿವಕುಮಾರ್ ಅವರಿಗೆ ಬಿಟ್ಟುಕೊಡಲು ತಯಾರಿರಲಿಲ್ಲ, ಆದರೆ ಡಿ.ಕೆ. ಶಿವಕುಮಾರ್ ಕೂಡ ತನಗೆ ಸಿಎಂ ಸ್ಥಾನ ಬೇಕೆಂದು ಹಠಕ್ಕೆ ಬಿದ್ದಿದ್ದರು.

ಹೈಕಮಾಂಡ್ ಇಬ್ಬರು ನಾಯಕರಲ್ಲಿ ಒಮ್ಮತ ಮೂಡುವಂತೆ ಮಾಡಿ ಸಿದ್ದರಾಮಯ್ಯ ಅವರಿಗೆ ಸಿಎಂ, ಡಿ.ಕೆ.ಶಿವಕುಮಾರ್ ಅವರಿಗೆ ಡಿಸಿಎಂ ಸ್ಥಾನವನ್ನು ದಯಪಾಲಿಸಿತ್ತು. ಆದರೆ ಇವತ್ತಿಗೂ ರಾಜಕೀಯ ಪಡಸಾಲೆ ಮತ್ತು ಜನವಲಯದಲ್ಲಿ ಎರಡೂವರೆ ವರ್ಷಗಳ ಅಧಿಕಾರದ ಹಂಚಿಕೆಯ ಒಪ್ಪಂದ ನಡೆದಿದೆ ಎಂಬ ಮಾತುಗಳು ಕೇಳಿ ಬರುತ್ತಲೇ ಇದೆ.

ಇಷ್ಟಕ್ಕೂ ಸರ್ಕಾರ ಅಸ್ತಿತ್ವಕ್ಕೆ ಬಂದಲ್ಲಿಂದ ಇಲ್ಲಿವರೆಗೆ ಸಿಎಂ ಸ್ಥಾನಕ್ಕೆ ಸಂಬಂಧಿಸಿದಂತೆ ಹೇಳಿಕೆಗಳು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಬೆಂಬಲಿಗರಿಂದ ತರಾವರಿ ರೀತಿಯಲ್ಲಿ ಹೊರ ಬರುತ್ತಲೇ ಇದೆ. ಜತೆಗೆ ಇತ್ತೀಚೆಗೆ ತಾರಕಕ್ಕೂ ಹೋಗಿದೆ. ಆದರೆ ದೆಹಲಿಯಲ್ಲಿ ಮಾಧ್ಯಮ

☞13

# ರೌಡಿ ಬಿಕ್ಲು ಶಿವ ಭೀಕರ ಮರ್ಡರ್... ಶಾಸಕ ಭೈರತಿ ಬಸವರಾಜ್ ಪಾತ್ರವೇನು?


ಶಿವಕುಮಾರ್ ಅಲಿಯಾಸ್ ಬಿಕ್ಲು ಶಿವ

**'ರಾಜಧಾನಿಯ ರಕ್ತ ಚರಿತ್ರೆ' ಅಂತೇನಾದ್ರೂ ಸಿನಿಮಾ ತೆಗೆದರೆ, ಅದೆಷ್ಟು ಪಾರ್ಟ್ಸ್ ಆದಾವೋ ಗೊತ್ತಿಲ್ಲ! ಇಲ್ಲಿ ಕೊಲೆಗಳು ಪ್ರಾಣಿಗಳಿಗಿಂತ ಸೋವಿಯಾಗಿ ನಡೆಯುತ್ತಿವೆ! ಇದಕ್ಕೆ ಅಂತ್ಯ ಅನ್ನೋದೆ ಇಲ್ವಾ? ಕಳೆದ ಮಂಗಳವಾರ ರಾತ್ರಿ ಬೆಂಗಳೂರಿನ ಹಲಸೂರು ಕೆರೆ ಬಳಿ ರೌಡಿಶೀಟರ್ ಬಿಕ್ಲು ಶಿವನ ತಲೆ ನಜ್ಜು ಗುಜ್ಜಾಗಿದೆ! ಶಿವಕುಮಾರ್ ಅಲಿಯಾಸ್‌ಬಿಕ್ಲು ಶಿವನನ್ನ ದುಷ್ಕರ್ಮಿಗಳು ಭೀಕರವಾಗಿ ಕೊಚ್ಚಿ ಕೊಲೆ ಮಾಡಿದ್ದು, ಈ ಘಟನೆ ಇಡೀ ನಗರವನ್ನು ಬೆಚ್ಚಿ ಬೀಳಿಸಿದೆ! ಅಂದು ರಾತ್ರಿ 8.30.ರ ಹೊತ್ತಿಗೆ ಎಲ್ಲರೂ ತಮ್ಮ ತಮ್ಮ ಕೆಲಸ ಮುಗಿಸಿ ಸುಸ್ತಾಗಿ ಮನೆ ದಾರಿ ಹಿಡಿದಿದ್ದ ಸಮಯದಲ್ಲಿ ಬಿಕ್ಲು ತನ್ನ ಮನೆಯ ಹತ್ತಿರ ಆರಾಮವಾಗಿ ನಿಂತಿದ್ದ.ನೋಡ ನೋಡುತ್ತಿದ್ದಂತೆ ಪ್ರಶಾಂತವಾಗಿದ್ದ ಹಲಸೂರು ಕೆರೆಯ ಬಳಿ ನೆತ್ತರ ಕೋಡಿ ಹರಿದಿದೆ! ಹಲಸೂರಿನ ವಾರ್ ಮೆಮೋರಿಯಲ್ ಸರ್ಕಲ್, ಈ ಡೆಡ್ಲಿ ಮರ್ಡರ್‌ಗೆ ಸಾಕ್ಷಿಯಾಗಿದೆ! ಭಾರತೀನಗರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ಕೊಂಡು ತನಿಖೆ ನಡೆಸುತ್ತಿದ್ದಾರೆ. ಈ ಕೊಲೆಗೆ ಇನ್ನೂ ನಿಖರವಾದ ಕಾರಣ ಪತ್ತೆ ಪತ್ತೆಯಾಗಿಲ್ಲ. ಮೆಲ್ನೋಟಕ್ಕೆ ಹಳೆ ವೈಷ್ಯಮದ ಹಿನ್ನೆಲೆಯಲ್ಲಿ ಕೊಲೆಯಾಗಿದೆ ಎನ್ನಿಸುತ್ತಿದೆ. ಒಂದಂತೂ ಸತ್ಯ.... ರೌಡಿಸಂನಲ್ಲಿ ಓನ್ಲಿ ಎಂಟ್ರಿ, ನೋ ಎಕ್ಸಿಟ್!! ಇದಕ್ಕೆ ರೌಡಿಶೀಟರ್ ಬಿಕ್ಲು ಶಿವನ ಮರ್ಡರ್ ಮತ್ತೊಂದು ಸಾಕ್ಷಿ!!!**


ಶಾಸಕ ಭೈರತಿ ಬಸವರಾಜ್

ರಾಜಧಾನಿ ಬೆಂಗಳೂರಿನಲ್ಲಿ ಇನ್ನೊಬ್ಬ ರೌಡಿಯ ಕಗ್ಗೊಲೆ ನಡೆದಿದೆ! ಕೊಲೆಯ ಭೀಕರತೆ ನೋಡಿ ಜನ ಅನ್ನ ತಿನ್ನಲಾಗದೆ ವಾಕರಿಕೆ ಮಾಡಿಕೊಳ್ಳುತ್ತಿದ್ದಾರೆ! ಸತ್ತ ವ್ಯಕ್ತಿಯ ತಲೆ ನಜ್ಜು ಗುಜ್ಜಾಗಿದ್ದು ಆತನ ಕುಟುಂಬದವರೇ ಗುರ್ತು ಹಿಡಿಯಲು ಪರದಾಡಿದ್ದಾರೆ! 15/07/2025 ಮಂಗಳವಾರ ರಾತ್ರಿ ಹಲಸೂರು ಕೆರೆ ಹತ್ತಿರ ನಾಲ್ಕಾರು ಮಂದಿ ದುಷ್ಕರ್ಮಿಗಳು ಕಾರಿನಲ್ಲಿ ಬಂದು, ಮನೆ ಹತ್ತಿರ ನಿಂತಿದ್ದ ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವನನ್ನು ಬರ್ಬರವಾಗಿ ಕತ್ತರಿಸಿ ಕೊಲೆ ಮಾಡಿದ್ದಾರೆ! ಈ ಕೊಲೆಯ ಹಿನ್ನಲೆಯಲ್ಲಿ ಹೆಣ್ಣೂರು ಪೊಲೀಸ್ ಠಾಣೆಯ ರೌಡಿ ಶೀಟರ್ ಜಗದೀಶ್ ಅಲಿಯಾಸ್ ಜಗ್ಗ ಹಾಗೂ ಇತರರ ಜೊತೆಗೆ, ಬಿಜೆಪಿ ಶಾಸಕ ಭೈರತಿ ಬಸವರಾಜ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ!

**ಭಾರತಿನಗರ ಪೊಲೀಸ್**

ರೌಡಿ ಬಿಕ್ಲು ಶಿವನ ಕೊಲೆ ನಡೆದಂಥ ಸ್ಥಳ ಭಾರತಿ ನಗರದ ಪೊಲೀಸ್‌ಸ್ಟೇಷನ್ ವ್ಯಾಪ್ತಿಗೆ ಬರುವುದರಿಂದ ಅಲ್ಲಿ ದೂರು ದಾಖಲಾಗಿದೆ. ಬಿಕ್ಲು ಶಿವನ ತಾಯಿ ವಿಜಯಲಕ್ಷ್ಮಿ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಕ್ಲುತಾಯಿ ವಿಜಯಲಕ್ಷ್ಮಿ ನೀಡಿರುವ ದೂರಿನಲ್ಲಿ, ಎಂಟರಿಂದ ಒಂಬತ್ತು ಜನರು ತಮ್ಮ ಮಗನ ಮೇಲೆ ಕಬ್ಬಿಣದ ರಾಡ್ ಮತ್ತು ಮಚ್ಚಿನಿಂದ ಹಲ್ಲೆ ನಡೆಸುತ್ತಿರುವುದನ್ನು ನೋಡಿರುವುದಾಗಿ ತಿಳಿಸಿದ್ದಾರೆ. ಅಟ್ಯಾಕ್ ನಡೆದ ಸಂದರ್ಭದಲ್ಲಿ ಅಲ್ಲಿದ್ದ ಬಿಕ್ಲು ಶಿವನ ಸ್ನೇಹಿತರು ಮಧ್ಯಪ್ರವೇಶಿಸಲು ಪ್ರಯತ್ನಿಸಿದಾಗ, ಅವರನ್ನೂ ಕಬ್ಬಿಣದ ರಾಡ್‌ನಿಂದ ಥಳಿಸಲಾಗಿದೆಯಂತೆ. ನಾನು ಕಿರುಚುತ್ತಿದ್ದಂತೆ, ಸುತ್ತಮುತ್ತ ಜನರು ಸೇರಿದರು. ಅಪರಿಚಿತ ವ್ಯಕ್ತಿಗಳು ನನ್ನ ಮಗನನ್ನು ಕೊಂದು ಬಿಳಿ ಸ್ಕಾರ್ಪಿಯೋ ವಾಹನ ಮತ್ತು ದ್ವಿಚಕ್ರ ವಾಹನದಲ್ಲಿ ಸ್ಥಳದಿಂದ ಪರಾರಿಯಾಗಿದ್ದಾರೆ. ಆರೋಪಿಗಳನ್ನು ಗುರುತಿಸಬಲ್ಲೆ ಎಂದು ವಿಜಯಲಕ್ಷ್ಮಿ ತಮ್ಮ ದೂರಿನಲ್ಲಿ ತಿಳಿಸಿದ್ದಾರೆನ್ನಲಾಗಿದೆ.

**ಬಿಜೆಪಿಯನ್ನು ಟಾರ್ಗೆಟ್ ಮಾಡಿತೇ ಕಾಂಗ್ರೆಸ್ ಸರ್ಕಾರ?!**

ಕಳೆದ ಫೆಬ್ರವರಿ 11 ರಂದು, ಜಗದೀಶ್ ಮತ್ತು ಕಿರಣ್ ಕಿತ್ತಿಗನೂರಿನಲ್ಲಿರುವ ಶಿವಪ್ರಕಾಶನ (ಬಿಕ್ಲು) ಆಸ್ತಿಯನ್ನು ಅತಿಕ್ರಮಣ ಪ್ರವೇಶ ಮಾಡಿ ಅಲ್ಲಿದ್ದ ಇಬ್ಬರು ಮಹಿಳಾ ಭದ್ರತಾ ಸಿಬ್ಬಂದಿಯನ್ನು ಹೊರಹಾಕಿದ್ದರು ಎಂದು ತಾಯಿ ವಿಜಯಲಕ್ಷ್ಮಿ ಆರೋಪಿಸಿದ್ದಾರೆ. ಅಲ್ಲದೇ ಮೇಲ್ಕಂಡ ಆರೋಪಿಗಳು ಬಿಕ್ಲು ಶಿವನಿಗೆ ಫೋನ್ ಕರೆ ಮಾಡಿ ಬೆದರಿಕೆ ಹಾಕುತ್ತಿದ್ದರು ಎಂದು ಸಹ ಆರೋಪಿಸಿದ್ದಾರೆ. ಡಿಸಿಪಿ ಡಿ. ದೇವರಾಜ್ ಹಾಗೂ ಜಂಟಿ ಆಯುಕ್ತ ರಮೇಶ್ ಬಾನೋತ್ ಸೇರಿದಂತೆ ಉನ್ನತ ಪೊಲೀಸ್‌ಅಧಿಕಾರಿಗಳ ತಂಡ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ.


ಭೀಕರ ಕೊಲೆ!

**2006 ರಲ್ಲೇ ರೌಡಿ ಶೀಟರ್**

ಕೊಲೆಯಾದ ಶಿವಕುಮಾರ್ ಬಿಕ್ಲುಶಿವನ ಮೇಲೆ ದೊಡ್ಡಕ್ರಿಮಿನಲ್ ಇತಿಹಾಸವೇ ಇದ್ದು, ಆತನ ವಿರುದ್ಧ ವಿವಿಧ ಪೊಲೀಸ್‌ಠಾಣೆಗಳಲ್ಲಿ ಒಟ್ಟು ಹನ್ನೊಂದು ಪ್ರಕರಣಗಳು ದಾಖಲಾಗಿವೆ. 2006 ರಲ್ಲೇ ಅವನ ವಿರುದ್ಧ ರೌಡಿ ಶೀಟ್ ತೆರೆಯಲಾಗಿತ್ತು ಎಂಬ ಮಾಹಿತಿ ಇದೆ. ರೌಡಿ ಜಗದೀಶ್ ಅಲಿಯಾಸ್ ಜಗ್ಗ ಬಿಕ್ಲು ಶಿವನ ಕೊಲೆಯ ಪ್ರಮುಖ ಆರೋಪಿಯಾಗಿದ್ದು, ಅವನ ಜೊತೆಗೆ ಕಿರಣ್, ವಿಮಲ್, ಪ್ರದೀಪ್ ಮತ್ತು ಅನಿಲ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ವಿಚಿತ್ರವೇನು ಅಂದರೆ, ಮಾಜಿ ಸಚಿವ, ಹಾಲಿ ಶಾಸಕ ಭೈರತಿ ಬಸವರಾಜ್‌ರನ್ನು ಎಫ್‌ಐಆರ್‌ನಲ್ಲಿ 5ನೇ ಆರೋಪಿಯನ್ನಾಗಿ ಸೇರಿಸಲಾಗಿದೆ! ಪೊಲೀಸರು ರೌಡಿ ಜಗ್ಗ ಮತ್ತಿತರೆ ಆರೋಪಿಗಳು ಭೈರತಿ ಬಸವರಾಜರ ಭಂಟರು ಎಂದೇ ಭಾವಿಸಿರುವಂತಿದೆ!


ಜಗದೀಶ ಅಲಿಯಾಸ್ ಜಗ್ಗ

ಮೊನ್ನೆ ಇನ್ಸ್‌ಪೆಕ್ಟರ್ ಗೋವಿಂದರಾಜು ಹೆಣ್ಣೂರು ಸಮೀಪದ ಭೈರತಿಯಲ್ಲಿರುವ ಶಾಸಕ ಭೈರತಿ ಬಸವರಾಜ್ ಮನೆಗೆ ತೆರಳಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಕೊಟ್ಟಿದ್ದಾರೆ ಎನ್ನಲಾಗಿದೆ. ಆಗ ಮನೆಯಲ್ಲಿ ಭೈರತಿ ಪುತ್ರ ನೀರಜ್ ಇದ್ದು ಇನ್ಸ್‌ಪೆಕ್ಟರ್ ಗೋವಿಂದರಾಜ್ ಆತನ ಕೈಗೆ ನೋಟೀಸ್ ನೀಡಿ ಎರಡು ದಿನ ಗಳ ಒಳಗೆ ವಿಚಾರಣೆಗೆ ಆಗಮಿಸುವಂತೆ ನಿಮ್ಮ ತಂದೆಗೆ ತಿಳಿಸಿ ಎಂದು ಹೇಳಿ ಹೋಗಿದ್ದಾರಂತೆ!

**ಕೊಲೆ ಕೇಸ್‌ಗೆ ಬಿಗ್ ಟ್ವಿಸ್ಟ್!**

ಈ ಕೊಲೆಗೂ ತನಗೂ ಸಂಬಂಧವಿಲ್ಲ, ರಾಜಕೀಯ ದುರುದ್ದೇಶದಿಂದ ಆರೋಪ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಲಾಗಿದೆ ಎಂದು ಶಾಸಕ ಭೈರತಿ ಬಸವರಾಜ್ ಅವರು ಮಧ್ಯಮಗಳಿಗೆ ತಿಳಿಸಿದ್ದಾರೆ. ಇದರ ನಡುವೆಯೇ ರೌಡಿಶೀಟರ್ ಬಿಕ್ಲು ಶಿವನ ಕೊಲೆ ಕೇಸ್‌ಗೆ ಬಿಗ್ ಟ್ವಿಸ್ಟ್ ಸಿಕ್ಕಿದೆ! ಜುಲೈ 16ರಂದು ಕೊಲೆಯಾದ ಬಿಕ್ಲು ಶಿವನ ತಾಯಿ ವಿಜಯಲಕ್ಷ್ಮಿ ಅವರು ದೂರು ನೀಡಿದ್ದು, ಆ ದೂರಿನ ಅನ್ವಯ ಭೈರತಿ ಬಸವರಾಜ್ ಸೇರಿದಂತೆ ರೌಡಿ ಜಗದೀಶ, ಕಿರಣ್ ಮತ್ತಿತರರ ವಿರುದ್ಧ ಮರ್ಡರ್ ಕೇಸ್‌ದಾಖಲಾಗಿತ್ತು. ಆದರೆ ಇದೀಗ ಅಂದು ದೂರು ಕೊಟ್ಟಿದ್ದ ತಾಯಿ ವಿಜಯಲಕ್ಷ್ಮಿ, ನಾನು ಭೈರತಿ ಬಸವರಾಜ್ ಅವರ ಹೆಸರು ಹೇಳಿಯೇ ಇಲ್ಲಾ, ಅವರ ವಿರುದ್ಧ ಯಾವುದೇ ದೂರು ಕೊಟ್ಟಿಲ್ಲ, ಪೊಲೀಸರೇ ಹೆಸರು ಹಾಕಿಕೊಂಡಿದ್ದಾರೆ ಎಂದು ಹೇಳಿದ್ದಾರೆ! ಇದೀಗ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಜನತೆ ಪೊಲೀಸರ ಮೇಲೆ ಅನುಮಾನ ಪಡುವಂತಾಗಿದೆ!! ಅಲ್ಲದೆ, ಬಿಕ್ಲು ಶಿವನ ಕೊಲೆಯಲ್ಲಿ ಬಿಜೆಪಿ ಶಾಸಕ ಭೈರತಿ ಬಸವರಾಜ್ ಹೆಸರು ಸೇರಿಸಿರುವುದರ ಹಿಂದೆ ರಾಜಕೀಯ ದುರುದ್ದೇಶವಿದೆ ಎಂದು ಆರೋಪಿಸಿದ್ದ ಬಿಜೆಪಿ ಮುಖಂಡರು ಇದೀಗ ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದಾರೆ! ಭೈರತಿ ಬಸವರಾಜ್ ಅವರ ಹೆಸರನ್ನು ದುರುದ್ದೇಶ ಪೂರ್ವಕವಾಗಿ ಎಫ್‌ಐಆರ್‌ನಲ್ಲಿ ಸೇರಿಸಲಾಗಿರುವುದು ನಿಜವೇ? ಹಾಗಾದ್ರೆ, ಭಾರತಿನಗರ ಪೊಲೀಸ್ ಅಧಿಕಾರಿಗಳಿಗೆ ಭೈರತಿ...ಹೆಸರು ಸೇರಿಸಲು ಹೇಳಿದ್ದವರು ಯಾರೂ?! ಜಂಟಿ ಪೊಲೀಸ್ ಆಯುಕ್ತ ರಮೇಶ್ ಬಾನುತ್ ಹಾಗೂ ಡಿಸಿಪಿ ಡಿ. ದೇವರಾಜ್, ಎಸಿಪಿ ಗೀತಾ ಮೇಡಂ ಅವರೇ ಈಗ ಉತ್ತರಿಸಬೇಕಾದ ಅನಿವಾರ್ಯತೆ ಎದುರಾಗಿದೆ!

ಅಂದಹಾಗೆ,ಇದೀಗ ರೌಡಿ ಬಿಕ್ಲು ಶಿವನ ಜೊತೆ

☞ 5



ಸ್ಪಾಟ್ ಮಹಜರ್

# ಬುರುಡೆ ಕೇಸು ಎಸ್ಐಟಿ ತನಿಖೆಗೆ!

ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಮಹತ್ವದ ತೀರ್ಮಾನವೊಂದನ್ನು ಕೈಗೆತ್ತಿಕೊಂಡಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಆಸುಪಾಸಿನಲ್ಲಿ ನೂರಾರು ಶವಗಳನ್ನು ಹೂತು ಹಾಕಿದ್ದೇನೆ ಎಂದು ಹೇಳಿಕೊಂಡಂತಹ ಅಜ್ಞಾತ ವ್ಯಕ್ತಿಯೊಬ್ಬ ಬೆಳ್ತಂಗಡಿ ನ್ಯಾಯಾಧೀಶರ ಮುಂದೆ ದಾಖಲಿಸಿದ್ದ


ಡಾ. ಪ್ರಣವ್ ಮೊಹಂತಿ


ಎಂ.ಎನ್. ಅನುಚೇತ್


ಸೌಮ್ಯಲತಾ


ಜಿತೇಂದ್ರಕುಮಾರ್ ದಯಾಮ

ಹೇಳಿಕೆಯ ಆಧಾರದಲ್ಲಿ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಕ್ರಿಮಿನಲ್ ಮೊಕದ್ದಮೆಯ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ ವರ್ಗಾಯಿಸಿ ಸರಕಾರ ಆದೇಶಿಸಿದೆ. ಈ ತಂಡದ ಮುಖ್ಯಸ್ಥರಾಗಿ ಆಂತರಿಕ ಭದ್ರತಾ ಪಡೆಯ ಡಿಜಿಪಿ ಡಾ. ಪ್ರಣವ್ ಮೊಹಂತಿ ಅವರನ್ನು ನೇಮಿಸಿದೆ. ಅಲ್ಲದೇ ಈ ಹಿಂದೆ ಪುತ್ತೂರು ಎಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸಿ ದಕ್ಷ ಅಧಿಕಾರಿ ಎಂದು ಗುರುತಿಸಲ್ಪಟ್ಟಿದ್ದಂತಹ ಎಂ.ಎನ್. ಅನುಚೇತ್ ಹಾಗೂ ಬೆಂಗಳೂರು ಸಿಎಆರ್ ಎಸ್ಪಿ ಸೌಮ್ಯಲತ, ಆಂತರಿಕ ಭದ್ರತಾ ಪಡೆಯ ಎಸ್ಪಿ ಜಿತೇಂದ್ರ ಕುಮಾರ್ ದಯಾಮ ಅವರನ್ನು ಈ ಪಡೆಗೆ ನಿಯೋಜಿಸಲಾಗಿದೆ. ಈ ಪಡೆಯು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ತನಿಖೆ ನಡೆಸಿ ತನಿಖಾ ಪ್ರಗತಿಯನ್ನು ಆಯಾ ಕಾಲಕ್ಕೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ವಿಶೇಷ ತನಿಖಾ ತಂಡವು ಸದ್ಯಕ್ಕೆ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಹಾಗೂ ಇದರ ಸಂಬಂಧ ರಾಜ್ಯದ ಇತರ ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಎಲ್ಲಾ ಪ್ರಕರಣಗಳ ಸಮಗ್ರ ತನಿಖೆಯನ್ನು ನಡೆಸಿ ತನಿಖಾ ವರದಿಯನ್ನು ಅತೀ ಶೀಘ್ರದಲ್ಲಿ ಆರಕ್ಷಕ ಮಹಾ ನಿರೀಕ್ಷಕರಿಗೆ ಒಪ್ಪಿಸಲು ನಿರ್ದೇಶಿಸಿ ಆದೇಶವಾಗಿಸಿದೆ.

ಅಜ್ಞಾತ ವ್ಯಕ್ತಿಯೊಬ್ಬ 1995ರಿಂದ 2014ರ ತನಕ ಧರ್ಮಸ್ಥಳ ಕ್ಷೇತ್ರದಲ್ಲಿ ನೈರ್ಮಲ್ಯ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ನೂರಾರು ಹೆಣಗಳನ್ನು ಸಂಸ್ಥೆಯ ಮೇಲ್ವಿಚಾರಕರ ಸೂಚನೆಯಂತೆ ಧರ್ಮಸ್ಥಳ ಗ್ರಾಮದ ಕಂದಾಯ ಇಲಾಖೆಗೆ ಸೇರಿದಂತಹ ಜಾಗದಲ್ಲಿ ಹೂತಿದ್ದೇನೆ ಎಂದು ಹೇಳಿಕೆ ನೀಡಿದ್ದ. ಆತ ನೀಡಿದ್ದ ಹೇಳಿಕೆಯಂತೆ ಬೆಂಗಳೂರಿನ ಸುಪ್ರೀಮ್ ಕೋರ್ಟ್‌ನ ಹಿರಿಯ ವಕೀಲ ಕೆ.ವಿ. ಧನಂಜಯ ಅವರ ಸಹಾಯಕ ವಕೀಲರಾದ ಓಜಸ್ವೀ ಗೌಡ ಮತ್ತು ಸಚಿನ್ ದೇಶಪಾಂಡೆ ಅವರು ಕೆಲವು ದಿನಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿ ಕೆ. ಅರುಣ್ ಅವರನ್ನು ಭೇಟಿಯಾಗಿ ದೂರು ನೀಡಿದ್ದರು. ಎಸ್ಪಿ ಅವರ ಸೂಚನೆಯಂತೆ ವಕೀಲರು ಧರ್ಮಸ್ಥಳ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದರು. ಪೊಲೀಸರು ಬಿಎನ್‌ಎಸ್ ಸೆಕ್ಷನ್ 211/1 ರಂತೆ ಕೇಸು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಈ ಸಂಬಂಧ ಮಾಹಿತಿ ನೀಡಿದಂತಹ ಅಜ್ಞಾತ ವ್ಯಕ್ತಿ ತನ್ನ ವಕೀಲರೊಂದಿಗೆ ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರಾಗಿ ಸುಮಾರು 1.20 ನಿಮಿಷಗಳ ಕಾಲ ತನ್ನ ಬಿಎನ್‌ಎಸ್‌ಎಸ್ 183ಅಡಿಯಲ್ಲಿ ಹೇಳಿಕೆ ದಾಖಲಿಸಿದ್ದ. ಈ ವಿಚಾರಗಳು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದ್ದಂತೆಯೇ ರಾಜ್ಯ ಮಹಿಳಾ ಆಯೋಗ ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ರಾಜ್ಯ ಸರಕಾರಕ್ಕೆ ಒತ್ತಡ ಹೇರಿತ್ತು. ಇದರನ್ವಯ ಸರಕಾರ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಈ ತಂಡವು ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವಂತಹ ಪ್ರಕರಣದ ತನಿಖೆಯನ್ನು ಮೊದಲಿಗೆ ಕೈಗೆತ್ತಿಕೊಂಡು ತನಿಖೆ ನಡೆಸಲಿದೆ. ಒಟ್ಟಾರೆಯಾಗಿ ಈ ಬೆಳವಣಿಗೆ ರಾಷ್ಟ್ರಮಟ್ಟದಲ್ಲಿ ಸಂಚಲನ ಸೃಷ್ಟಿಸಿದೆ. ☯

# ಧರ್ಮಸ್ಥಳದ ರಹಸ್ಯ ಸಮಾಧಿ ಹಿಂದಿದೆಯಾ ಕುತಂತ್ರ?!



**ದಕ್ಷಿಣ ಕನ್ನಡ**

✍ ಮೋಹನ್ ಬೋಳಂಗಡಿ

ಧರ್ಮಸ್ಥಳ ಎನ್ನುವುದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಒಂದು ಗ್ರಾಮ. ಇಲ್ಲಿರುವ ಶ್ರೀ ಮಂಜುನಾಥ ದೇವಸಾನ ಮತ್ತು ಧರ್ಮದೈವಗಳ ಕಾರಣದಿಂದ ದೇಶಾದ್ಯಂತ ಪವಿತ್ರ ಕ್ಷೇತ್ರ ಎಂದು ಹೆಸರುವಾಸಿಯಾಗಿದೆ. ಈ ಗ್ರಾಮದಲ್ಲಿ ನೂರಾರು ಎಕರೆ ಸರಕಾರಿ ಭೂಮಿಗಳಿವೆ. 500ಕ್ಕೂ ಹೆಚ್ಚು ಕುಟುಂಬಗಳು ಇವೆ ಇಂತಹ ಗ್ರಾಮದಲ್ಲಿ ನೂರಾರು ಮೃತದೇಹಗಳನ್ನು ಹೂತಿದ್ದೇನೆ ಎಂದು ಹೇಳಿಕೊಂಡ ಅಜ್ಞಾತ ವ್ಯಕ್ತಿಯೊಬ್ಬ ಪ್ರತ್ಯಕ್ಷನಾಗಿದ್ದಾನೆ. ಆತ ತಾನು ಹೂತಿಟ್ಟಿದ್ದ ಮೃತದೇಹವೊಂದರ ತಲೆಬುರುಡೆಯನ್ನು ಹಿಡಿದುಕೊಂಡೇ ಬೆಳ್ತಂಗಡಿ ನ್ಯಾಯಾಲಯಕ್ಕೆ ವಕೀಲರ ಬೆಂಗಾವಲಿನೊಂದಿಗೆ ಹಾಜರಾಗಿದ್ದಾನೆ. ಇಡೀ ಪ್ರಕರಣದ ಬಗ್ಗೆ ಕೇಸು ದಾಖಲಿಸಿಕೊಂಡಿರುವ ಧರ್ಮಸ್ಥಳ ಪೊಲೀಸರು ಜಿಲ್ಲಾ ಎಸ್ಪಿ ಕೆ.ಅರುಣ್ ಅವರ ನೇರ ಮಾರ್ಗದರ್ಶನದಲ್ಲಿ ತನಿಖೆ ನಡೆಸುತ್ತಿರುವಂತೆಯೇ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ತರಹೇವಾರಿ ಕಥೆಗಳು ಪುಂಖಾನುಪುಂಖವಾಗಿ ಹೊರ ಬರುತ್ತಿದೆ. ಹಲವು ಮಂದಿ ವಾಸ್ತವ ಸ್ಥಿತಿಗತಿಗಳ ಅರಿವಿಲ್ಲದೆ ತಮಗೆ ತೋಚಿದಂತೆಯೇ ಕಥೆಗಳನ್ನು ಹೆಣೆಯುತ್ತಿದ್ದಾರೆ. ಇದನ್ನೆಲ್ಲಾ ನೋಡುತ್ತಿರುವಂತಹ, ಗಮನಿಸುತ್ತಿರುವಂತಹ ಬೆಳ್ತಂಗಡಿ ತಾಲೂಕಿನ ಸಾರ್ವಜನಿಕರು ಎಲ್ಲಿಂದ ನಗುವುದು ಎಂದು ಅರ್ಥವಾಗದೇ ತಲೆ ಕೆರೆದುಕೊಳ್ಳುತ್ತಿದ್ದಾರೆ.


ಅನನ್ಯ ಭಟ್‌ಳ ತಾಯಿ ಸುಜಾತ ಭಟ್

## ಎಲ್ಲಿಂದ ಆರಂಭ?

ಧರ್ಮಸ್ಥಳ ಗ್ರಾಮದ ಪಾಂಗಾಳದ ಚಂದಪ್ಪ ಗೌಡ-ಕುಸುಮಾವತಿ ದಂಪತಿಯ ಮಗಳು, ಉಜಿರೆ ಶ್ರೀ ಮಂಜುನಾಥೇಶ್ವರ ಕಾಲೇಜಿನ ಕಾಮರ್ಸ್ ವಿಭಾಗದ ಪಿಯು ವಿದ್ಯಾರ್ಥಿನಿ ಸೌಜನ್ಯ ಅತ್ಯಾಚಾರಕ್ಕೊಳಗಾಗಿ ಹತ್ಯೆಯಾದ ನಂತರ ಆ ಪ್ರಕರಣದಲ್ಲಿ ಆರೋಪಿ ಕಾರ್ಕಳ ಕುಕ್ಕುಂದೂರಿನ ಸಂತೋಷ್‌ರಾವ್‌ನನ್ನು ಪೊಲೀಸರು ಬಂಧಿಸಿ ಆತನ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಕೆಯಾದ ನಂತರ ಆ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಸಾಕ್ಷ್ಯಾಧಾರಗಳ ಕೊರತೆಯಿಂದ ಆತ ನಿರ್ದೋಷಿ ಎಂದು ಘೋಷಿಸಲ್ಪಟ್ಟ ನಂತರ ಈ ಎಲ್ಲಾ ನಾಟಕಗಳು ಆರಂಭವಾಗಿತ್ತು. ಅದರ ಮುಂದುವರಿದ ಭಾಗವೇ ಬುರುಡೆ ಪುರಾಣ. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ 19 ವರ್ಷಗಳ ಕಾಲ ಅಂದರೆ 1995ರಿಂದ 2014ರವರೆಗೆ ನೈರ್ಮಲ್ಯ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಇದೀಗ ಪ್ರತ್ಯಕ್ಷವಾಗಿ ಧರ್ಮಸ್ಥಳದ ಕಾಡಿನಲ್ಲಿ ಹೂತಿಡಲಾದಂತಹ ನೂರಾರು ಮೃತದೇಹಗಳನ್ನು ಹೊರ ತೆಗೆಯುವ ಸಲುವಾಗಿ ಪ್ರತ್ಯಕ್ಷ ಸಾಕ್ಷಿ ನುಡಿಯುತ್ತೇನೆಂದು ಹೇಳಿ ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಧೀಶರ ಮುಂದೆ ಬಿಎನ್‌ಎಸ್‌ಎಸ್-183 ಅಡಿಯಲ್ಲಿ ಹೇಳಿಕೆ ದಾಖಲಿಸಿದ್ದಾನೆ. ಈ ಹೇಳಿಕೆಯ ಆಧಾರದಲ್ಲಿ ಬೆಳ್ತಂಗಡಿ ಸರ್ಕಲ್ ಇನ್ಸ್‌ಪೆಕ್ಟರ್ ನಾಗೇಶ್ ಕದ್ರಿ, ಬೆಳ್ತಂಗಡಿ ಇನ್ಸ್‌ಪೆಕ್ಟರ್ ಸುಬ್ಬಪೂರಮಠ್, ಧರ್ಮಸ್ಥಳ ಸಬ್ ಇನ್ಸ್‌ಪೆಕ್ಟರ್ ಸಮರ್ಥ್ ಆರ್. ಗಾಣಿಗೇರ್‌ರವರು ಆತನನ್ನು ವಿಚಾರಣೆ ಗೊಳಪಡಿಸಿ ವಿಸ್ತತವಾದ ಹೇಳಿಕೆಯನ್ನು ದಾಖಲಿಸಿ ಮುಂದಿನ ವಿಚಾರಣೆಗೆ ಹಾಜರಾಗಬೇಕು ಎಂದು ನೋಟೀಸು ಕೊಟ್ಟು ಕಳುಹಿಸಿದ್ದಾರೆ.

## ಪ್ರತ್ಯಕ್ಷಳಾದ ಅನನ್ಯ ತಾಯಿ!!

ಈ ಘಟನೆ ನಡೆದು ಕೆಲವೇ ದಿನಗಳ ಅಂತರದಲ್ಲಿ

☞ 5

## ಯಾರು ಈ ಅನನ್ಯ ಭಟ್?

2003ರ ಮಣಿಪಾಲ ಕೆಎಂಸಿ ಕಾಲೇಜಿನ ಪ್ರಥಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿ ಅನನ್ಯ ಭಟ್. ಆಕೆಯ ತಾಯಿ ಸುಜಾತ ಭಟ್ ಸಿಬಿಐನ ಕಲ್ಕತ್ತಾ ಬ್ರಾಂಚ್‌ನಲ್ಲಿ ಸ್ಟೆನೋಗ್ರಾಫರ್ ಆಗಿದ್ದವರು. ಇವರ ಕುಟುಂಬ ಮೂಲತಃ ಮಣಿಪಾಲ ಸಮೀಪದ ಪರೀಕ ಎಂಬಲ್ಲಿಯವರು. ಇವರಿಗೆ ಇಬ್ಬರು ಸಹೋದರರು ಇದ್ದರು. ಸುಜಾತ ಭಟ್ ಮದುವೆಯಾದ ನಂತರ ಮನೆಯವರೊಂದಿಗೆ ಸಂಪರ್ಕದಲ್ಲಿ ಇರಲಿಲ್ಲ. ಅವರು ಸಿಬಿಐನ ಕೊಲ್ಕತ್ತಾ ಬ್ರಾಂಚ್‌ನಲ್ಲಿ ಕೆಲಸ ಮಾಡುತ್ತಿದ್ದರು. ಇವರ ಪಿತ್ರಾರ್ಜಿತ ಆಸ್ತಿಯ ಪಕ್ಕದಲ್ಲಿಯೇ ಹೊಟೇಲ್ ಉದ್ಯಮಿ ಪರೀಕ ನಾರಾಯಣರಾವ್ ಅವರ ಸ್ವಯಾರ್ಜಿತ ಆಸ್ತಿ ಇತ್ತು. ಅವರಿಗೂ ಇಬ್ಬರು ಮಕ್ಕಳಿದ್ದರು. ನಾರಾಯಣರಾವ್ ಅವರು ಹೊಟೇಲ್ ಉದ್ಯಮಿಯಾಗಿ ಕೋಟ್ಯಂತರ ರೂ. ಮೌಲ್ಯದ ಆಸ್ತಿಪಾಸ್ತಿ ಸಂಪಾದಿಸಿದ್ದರು. ಆ ಆಸ್ತಿಯ ಮೂರನೇ ಎರಡು ಭಾಗವನ್ನು ತನ್ನ ಮಕ್ಕಳಿಗೆ ಹಂಚಿಕೊಟ್ಟು ಒಂದು ಭಾಗವನ್ನು ತನ್ನ ವಶದಲ್ಲಿ ಇಟ್ಟುಕೊಂಡಿದ್ದರು. ದಿನನಿತ್ಯದ ಖರ್ಚಿಗೆಂದು ತನಗೆ ಮತ್ತು ತನ್ನ ಪತ್ನಿಯ ಹೆಸರಿನಲ್ಲಿ ತಲಾ ಒಂದೊಂದು ಕೋಟಿ ರೂಪಾಯಿ ನಿರಖು ಠೇವಣಿ ಇರಿಸಿ ಅದರ ಬಡ್ಡಿಯಿಂದ ಜೀವನ ಸಾಗಿಸುತ್ತಿದ್ದರು. ತನ್ನ ಸ್ವಯಾರ್ಜಿತ ಆಸ್ತಿಯನ್ನು ಯಾವುದಾದರೂ ಧಾರ್ಮಿಕ ಸಂಸ್ಥೆಗೆ ದಾನ ಮಾಡಬೇಕು ಎಂದು ಆಶಿಸಿ ಅವರು ಮೂರು ಸಂಸ್ಥೆಗಳ ಪ್ರಾಮಾಣಿಕತೆಯನ್ನು ಗುರುತಿಸಿದ್ದರು. ಅದರಲ್ಲಿ ಅವರು ಆಯ್ಕೆ ಮಾಡಿದ್ದು ಶ್ರೀ ಕ್ಷೇತ್ರ ಧರ್ಮಸ್ಥಳವನ್ನು. ಅವರ ಈ ನಿರ್ಧಾರದ ಬಗ್ಗೆ ಉಡುಪಿ ಮತ್ತು ಶೃಂಗೇರಿ ಮಠಾಧೀಶರುಗಳಿಗೆ ಅಸಮಾಧಾನವಾಗಿದ್ದರೂ ಪ್ರಶ್ನಿಸುವಂತಿರಲಿಲ್ಲ. ನಾರಾಯಣರಾವ್ ಅವರು ತನ್ನ ಇಂಗಿತವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರೊಂದಿಗೆ ಪ್ರಸ್ತಾಪಿಸಿದಾಗ ಅವರು ಆ ಸ್ಥಳದಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸುವ ಭರವಸೆ ನೀಡಿದರು. ಆದರೆ ಆ ಕ್ಯಾಂಪಸ್‌ಗೆ ವಿಶಾಲವಾದ ಸ್ಥಳಾವಕಾಶ ಬೇಕಾಗಿರುವುದರಿಂದ ನಾರಾಯಣರಾವ್ ಅವರಲ್ಲಿ ಇರುವಂತಹ ಸ್ಥಳ ಸಾಲುವುದಿಲ್ಲ ಎಂಬ ಅಭಿಪ್ರಾಯ ಪಡಲಾಯಿತು. ಆ ಸಂದರ್ಭದಲ್ಲಿ ನಾರಾಯಣರಾವ್ ಅವರು ಆ ಸ್ಥಳಕ್ಕೆ ಹೊಂದಿಕೊಂಡಂತಿದ್ದ ನಾಲ್ವರ ಒಡೆತನದ ಸ್ಥಳವನ್ನು ಖರೀದಿಸಿ ಒಟ್ಟು ಸ್ಥಳವನ್ನು ಧರ್ಮಸ್ಥಳಕ್ಕೆ ದಾನವಾಗಿ ಕೊಟ್ಟರು. ಇದು ಸುಮಾರು 30 ವರ್ಷಗಳ ಹಿಂದೆ ನಡೆದಂತಹ ವ್ಯವಹಾರ. ನಾರಾಯಣರಾವ್ ಅವರು ಖರೀದಿಸಿದಂತಹ ನಾಲ್ವರ ಸ್ಥಳಗಳ ಪೈಕಿ ಒಂದು ಸ್ಥಳ ಇದೀಗ ಆರೋಪ ಮಾಡುತ್ತಿರುವಂತಹ ಸುಜಾತ ಭಟ್ ಅವರ ತಂದೆಗೆ ಸೇರಿದ್ದು. ಆ ಸ್ಥಳವನ್ನು ಮಾರಾಟ ಮಾಡಿ ಬಂದ ಹಣವನ್ನು ಸಹೋದರರಿಬ್ಬರು ಹಂಚಿಕೊಂಡು ಸುಜಾತ ಭಟ್ ಅವರಿಗೆ ಪಾಲು ಕೊಟ್ಟಿರಲಿಲ್ಲ. ಅದಕ್ಕಾಗಿ ಸುಜಾತ ಭಟ್ ಅವರು ತನ್ನ ಸಹೋದರರ ಮೇಲೆ ಉಡುಪಿ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಿದ್ದು, ಅದು ವಿಚಾರಣೆಯ ಹಂತದಲ್ಲಿದೆ. ಇದೀಗ ಸುಜಾತ ಭಟ್ ತನ್ನ ಮಗಳು ಧರ್ಮಸ್ಥಳದಲ್ಲಿ ಕಾಣೆಯಾಗಿದ್ದಾಳೆ ಎಂದು 22 ವರ್ಷಗಳ ನಂತರ ದೂರು ನೀಡಿದ್ದಾರೆ. ಕೆಎಂಸಿ ಆಸ್ಪತ್ರೆಯ ಆಡಳಿತ ವರ್ಗ ಆಗಲೀ ಆಕೆ ಉಳಕೊಂಡಿದ್ದಂತಹ ಹಾಸ್ಟೆಲ್‌ನ ವಾರ್ಡನ್ ಆಗಲಿ ಆಕೆ ನಾಪತ್ತೆ ಆಗಿದ್ದಾಳೆ ಎಂದು ಆ ಸಂದರ್ಭದಲ್ಲಿ ದೂರು ನೀಡಿಲ್ಲ. ಈ ಎಲ್ಲಾ ವಿಚಾರಗಳು ತನಿಖೆಯಿಂದಷ್ಟೇ ಬೆಳಕಿಗೆ ಬರಬೇಕಿದೆ. ☯

4 ☞



ಸುಜಾತ ಭಟ್ ಎಂಬ ವೃದ್ಧೆಯೊಬ್ಬರು ಬೆಂಗಳೂರಿನ ವಕೀಲ ಮಂಜುನಾಥ್ ಎಂಬವರೊಂದಿಗೆ ಖಾಸಗಿ ಕಾರಿನಲ್ಲಿ ಮಂಗಳೂರಿನ ಜಿಲ್ಲಾ ಎಸ್ಪಿ ಕಚೇರಿಗೆ ಆಗಮಿಸಿ ಎಸ್ಪಿ ಅರುಣ್ ಅವರಿಗೆ ತನ್ನ ಮಗಳು ಅನನ್ಯ ಭಟ್ 22 ವರ್ಷಗಳ ಹಿಂದೆ ಅಂದರೆ 2003ರಲ್ಲಿ ಧರ್ಮಸ್ಥಳಕ್ಕೆ ಸ್ನೇಹಿತೆಯರೊಂದಿಗೆ ಬಂದಿದ್ದ ಸಂದರ್ಭದಲ್ಲಿ ಕಾಣೆಯಾಗಿದ್ದು, ಈ ಮಾಹಿತಿ ತಿಳಿದು ಕೊಲ್ಕತ್ತಾದ ಸಿಬಿಐ ಕಚೇರಿಯಲ್ಲಿ ಸ್ಟೆನೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದ ತಾನು ಬೆಳ್ತಂಗಡಿಗೆ ಬಂದು ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಪೊಲೀಸರು ದೂರು ಸ್ವೀಕರಿಸಲಿಲ್ಲ, ತಾನು ಧರ್ಮಸ್ಥಳಕ್ಕೆ ಹೋದಾಗ ತನ್ನ ಮೇಲೆ ಹಲ್ಲೆ ಮಾಡಿ ಕೊಠಡಿಯೊಂದರಲ್ಲಿ ಕೂಡಿ ಹಾಕಿ ಬೆದರಿಸಲಾಯಿತು. ತಾನು ಪ್ರಜ್ಞೆ ಕಳೆದುಕೊಂಡ ಸಂದರ್ಭದಲ್ಲಿ ನನ್ನನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸುಮಾರು 4 ತಿಂಗಳ ಕಾಲ ಕೋಮಾದಲ್ಲಿದ್ದು, ಚೇತರಿಸಿಕೊಂಡಿದ್ದೇನೆ. ಇದೀಗ ಧರ್ಮಸ್ಥಳ ಗ್ರಾಮದಲ್ಲಿ ಹೂತಿಡಲಾಗಿದ್ದಂತಹ ಮೃತದೇಹಗಳ ಪೈಕಿ ತನ್ನ ಮಗಳು ಅನನ್ಯಭಟ್ ಅವಳ ಎಲುಬುಗಳು ಸಿಗುವ ಸಾಧ್ಯತೆ ಇರುವುದರಿಂದ ಆ ಬಗ್ಗೆ ತನಿಖೆ ನಡೆಸಬೇಕು. ತನ್ನ ಮಗಳು ಕಾಣೆಯಾದ ಬಗ್ಗೆ ಈವರೆಗೆ ದೂರು ಕೊಟ್ಟಿಲ್ಲ, ಇದೀಗ ದೂರು ನೀಡುತ್ತಿದ್ದು, ಕೇಸು ದಾಖಲಿಸಿಕೊಂಡು ತನಿಖೆ ನಡೆಸಬೇಕೆಂದು ಕೋರಿಕೊಂಡಿದ್ದರು. ಅವರ ಅಹವಾಲನ್ನು ಸಾವಧಾನದಿಂದ ಕೇಳಿದಂತಹ ಎಸ್ಪಿ ಕೆ. ಅರುಣ್ ಅವರು ಸುಜಾತ ಭಟ್ ಅವರನ್ನು ಧರ್ಮಸ್ಥಳ ಪೊಲೀಸ್ ಠಾಣೆಗೆ ಕಳುಹಿಸಿ ದೂರು ದಾಲಿಸುವಂತೆ ಸೂಚಿಸಿದ್ದರು. ಅದರಂತೆ ಧರ್ಮಸ್ಥಳ ಠಾಣೆಗೆ ದೂರು ನೀಡಲಾಗಿದ್ದು, ಅನನ್ಯ ಭಟ್ 2003ರಲ್ಲಿ ಧರ್ಮಸ್ಥಳದಲ್ಲಿ ಕಾಣೆಯಾಗಿದ್ದಾಳೆ ಎಂದು ಕೇಸು ದಾಖಲಾಗಿದೆ.

**ಮತ್ತೆ ಬಂದ ಅಜ್ಞಾತ ವ್ಯಕ್ತಿ !!**

ಅನನ್ಯಭಟ್ ಅವರ ತಾಯಿ ಸುಜಾತ ಭಟ್ ಧರ್ಮಸ್ಥಳ ಠಾಣೆಯಲ್ಲಿ ದೂರು ದಾಖಲಿಸಿ ಹೋದ ಮರುದಿನವೇ ಕೆಲವು ದಿನಗಳ ಹಿಂದೆ ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 183ಬಿಎನ್ಎಸ್ಎಸ್ ಅಡಿಯಲ್ಲಿ ಹೇಳಿಕೆ ದಾಖಲಿಸಿದ್ದ ಅಜ್ಞಾತ ವ್ಯಕ್ತಿ ಖಾಸಗಿ ಕಾರಿನಲ್ಲಿ ವಕೀಲರ ಜೊತೆಗೂಡಿ ಧರ್ಮಸ್ಥಳ-ಉಜಿರೆ ರಸ್ತೆಗೆ ಬಂದಿದ್ದ. ಆತ ತಾನು ಬೆಳ್ತಂಗಡಿ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದ ತಲೆಬುರುಡೆಯನ್ನು ಎಲ್ಲಿಂದ ತೆಗೆದಿದ್ದೇನೆ ಎಂದು ಹೇಳಿದ್ದಾನೋ, ಆ ಸ್ಥಳದ ಮಹಜರಿಗಾಗಿ ಬಂದಿರುವುದಾಗಿ ಆತನ ಪರ ವಕೀಲರು ಹೇಳಿದ್ದರು. ಆದರೆ ಈ ತಲೆಬುರುಡೆಯ ಬಗ್ಗೆ ಬೆಳ್ತಂಗಡಿ ಠಾಣಾ ಎಸ್ಐ ಅವರು ತನಿಖೆ ನಡೆಸುತ್ತಿದ್ದು, ಸ್ಥಳ ಮಹಜರಿಗೆ ಸಂಬಂಧಪಟ್ಟಂತೆ ಅಜ್ಞಾತ ವ್ಯಕ್ತಿಗೆ ನೋಟೀಸು ನೀಡಿರಲಿಲ್ಲ ಮತ್ತು ಆತನ ರಕ್ಷಣೆಯ ಹೊಣೆ ಹೊತ್ತುಕೊಂಡಿದ್ದ ವಕೀಲರಿಗೂ ಮಾಹಿತಿ ನೀಡಿರಲಿಲ್ಲ ಆದ್ದರಿಂದ ಪೊಲೀಸರು ಅಜ್ಞಾತ ವ್ಯಕ್ತಿ ಮತ್ತು ವಕೀಲರು ಬಂದಿದ್ದಂತಹ ಸ್ಥಳಕ್ಕೆ

☞ 7



ಎಸ್ಪಿ ಕೆ. ಅರುಣ್

# ಒಂದೇ ಕಾರು ಎರಡು ಘಟನೆ

ಧರ್ಮಸ್ಥಳದ ಕಾಡಿನ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಘಟನೆಗಳು ನಡೆದಿದೆ. ಆದರೆ ಆ ಎರಡೂ ಘಟನೆಗಳಲ್ಲಿ ಒಬ್ಬನದೇ ಒಂದೆ ಕಾರು ಉಪಯೋಗ ಆಗಿದೆ. ಬೆಂಗಳೂರಿನ ಹಿರಿಯ ವಕೀಲರೊಬ್ಬರ ಸಹಾಯಕ ವಕೀಲರು ಎರಡೂ ಘಟನೆಗಳಲ್ಲಿ ಪಾತ್ರ ವಹಿಸಿದ್ದಾರೆ. ಮೊದಲನೇ ಘಟನೆ ಅಂದರೆ ಧರ್ಮಸ್ಥಳದಲ್ಲಿ 22 ವರ್ಷಗಳ ಹಿಂದೆ ನಾಪತ್ತೆಯಾಗಿದ್ದಾಳೆ ಎನ್ನಲಾದ ಮಣಿಪಾಲ ಕೆಎಂಸಿ ವಿದ್ಯಾಲಯದ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿನಿ ಅನನ್ಯಭಟ್ ಅವರ ಬೆಂಗಳೂರಿನಲ್ಲಿ ವಾಸವಿರುವ ತಾಯಿ ಸುಜಾತ ಭಟ್ ಅವರು ಬೆಂಗಳೂರಿನಿಂದ ವಕೀಲರೊಂದಿಗೆ ಮಂಗಳೂರಿನಲ್ಲಿರುವ ಜಿಲ್ಲಾ ಎಸ್ಪಿ ಕಚೇರಿಗೆ ಬಂದಿದ್ದರು. ಅವರು ಬಂದ ಕಾರು ಹ್ಯೂಂಡೈ ಸಂಸ್ಥೆಯ ಕ್ರೆಟ್ಟಾ, ಅದರ ರಿಜಿಸ್ಟ್ರೇಷನ್ ನಂಬರನ್ನು ನೋಡಿದರೆ ಪುತ್ತೂರು ಆರ್.ಟಿ.ಒ. ಕಚೇರಿಯಲ್ಲಿ ದಾಖಲಾಗಿದೆ. ಅದರ ಮಾಲೀಕ ಉಜಿರೆ ಸಮೀಪದ ಲಾಯಿಲಾದ ವೆಂಕಟೇಶ್. ಮೂಲತಃ ಶಿಲ್ಪಿಯಾಗಿದ್ದು ಮಹೇಶ್ ಶೆಟ್ಟಿ ತಿಮರೋಡಿ ತನ್ನ ಮನೆಯ ಬಳಿ ನಿರ್ಮಿಸುತ್ತಿರುವ ಹದಿನೆಂಟು ಸಾವಿರ ಚ.ಅಡಿ ವಿಸ್ತೀರ್ಣದ ಮನೆಯ ಕಲ್ಲಿನ ಕೆಲಸಗಳ ಕಾಂಟ್ರಾಕ್ಟ್ ನಡೆಸುತ್ತಿದ್ದಾನೆ. ಆತನ ಕಾರನ್ನೇ ಮಹೇಶ್ ತಿಮರೋಡಿ ಪಡೆದು ಬೆಂಗಳೂರಿಗೆ ಕಳುಹಿಸಿ ಸುಜಾತ ಭಟ್ ಮತ್ತು ವಕೀಲರನ್ನು ಕರೆಯಿಸಿಕೊಂಡು ದೂರು ಕೊಡಿಸಿದ್ದಾರೆ. ಅವರನ್ನು ಮತ್ತೆ ಅದೇ ಕಾರಿನಲ್ಲಿ ಬೆಂಗಳೂರಿಗೆ ಕಳುಹಿಸಿ ಅದೇ ಕಾರಿನಲ್ಲಿ ಬುರುಡೆ ತೋರಿಸಿಕೊಡುತ್ತೇನೆಂದು ಹೇಳಿರುವ ಅಜ್ಞಾತ ವ್ಯಕ್ತಿ ಮತ್ತು ಆತನ ಇಬ್ಬರು ವಕೀಲರು ಉಜಿರೆಗೆ ಬಂದು ಬುರುಡೆ ಸಿಕ್ಕಿದ ಸ್ಥಳವನ್ನು ಮಹಜರು ಮಾಡಲೇಬೇಕೆಂದು ಪೊಲೀಸರ ಮೇಲೆ ಒತ್ತಡ ಹೇರಿದ್ದರು. ಇದನ್ನು ಗಮನಿಸುವಾಗ ಬುರುಡೆ ಪ್ರಕರಣ ಮತ್ತು ಅನನ್ಯ ಭಟ್ ನಾಪತ್ತೆ ಪ್ರಕರಣದ ಸ್ಕ್ರಿಪ್ಟ್ ಒಂದೇ ಕಡೆ ತಯಾರಾಗಿದೆ. ಒಂದೇ ಸಂಸ್ಥೆಗೆ ಸೇರಿದಂತಹ ಒಟ್ಟು ಮೂವರು ವಕೀಲರು ಎರಡೂ ಪ್ರಕರಣಗಳಲ್ಲಿ ಕಾಣಿಸಿಕೊಂಡಿದ್ದಾರೆ. ತಿಮರೋಡಿಯ ಮನೆಯಲ್ಲಿ ತಯಾರಾದಂತಹ ಧರ್ಮಸ್ಥಳ ವಿರುದ್ಧದ ಷಡ್ಯಂತ್ರದಲ್ಲಿ ಯಾರ‍್ಯಾರು ಭಾಗಿಗಳಾಗಿದ್ದಾರೆ ಎಂಬುದನ್ನು ಪೊಲೀಸರು ಖಚಿತಪಡಿಸಿಕೊಳ್ಳಬೇಕಾದರೆ ಬುರುಡೆ ತಂದುಕೊಟ್ಟಿರುವಂತಹ ಅಜ್ಞಾತ ವ್ಯಕ್ತಿಯನ್ನು ಮಂಪರು ಪರೀಕ್ಷೆಗೆ ಗುರಿಪಡಿಸಬೇಕಿದೆ! ☯



3 ☞

ಭೈರತಿ ಬಸವರಾಜ್ ಇರುವ ವಿಡಿಯೋಗಳು ಮತ್ತು ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿವೆ! ರೌಡಿ ಜಗ್ಗ ಭೈರತಿ ಬಸವರಾಜ್ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ, ಕೇಕ್ ಕಟ್ ಮಾಡಿಸಿ ಸನ್ಮಾನ ಮಾಡಿರುವ ವಿಡಿಯೋ ಅವು. ಜಗ್ಗನ ಮೊಬೈಲ್ ಕಾಲ್ ಹಿಸ್ಟರಿಯಲ್ಲಿ ಭೈರತಿ ಬಸವರಾಜ್, ಜಗ್ಗನನ್ನ ಸಂಪರ್ಕ ಮಾಡಿರುವುದು ಗೊತ್ತಾಗಿದೆಯಂತೆ.

ಈ ಹಿಂದೆ ಭೈರತಿ ಬಸವರಾಜ್ ಸಚಿವರಾಗಿದ್ದಾಗ ಹೆಣ್ಣೂರು ಪೊಲೀಸ್ ಠಾಣೆಯಲ್ಲಿದ್ದ ರೌಡಿ ಪಟ್ಟಿಯಿಂದ ಜಗದೀಶ್‌ನ ಹೆಸರನ್ನು ತೆಗೆಸಿದ್ದರು ಎನ್ನಲಾಗಿದೆ! ಇವೇ ಮುಂತಾದ ಸುಳಿವುಗಳ ಆಧಾರದ ಮೇಲೆ ಶಾಸಕರಿಗೂ, ಆರೋಪಿಗಳಿಗೂ ಏನಾದರೂ ಸಂಬಂಧವಿದೆಯಾ? ಎಂದು ಅನುಮನಿಸಿ ಮತ್ತಷ್ಟು ಸಾಕ್ಷ್ಯ ಸಂಗ್ರಹಿಸುತ್ತಿದ್ದಾರೆ, ಪೊಲೀಸರು! ಪೊಲೀಸರು ಈಗ ಬಂಧಿಸಿರುವ ಐವರು ಆರೋಪಿಗಳನ್ನ ಕೋರ್ಟ್ ಮುಂದೆ ಹಾಜರುಪಡಿಸಿ, ವಿಚಾರಣೆಯ ಸಲುವಾಗಿ 10 ದಿನಗಳ ಕಾಲ ಪೊಲೀಸ್ ಕಸ್ಟಡಿ ಪಡೆದುಕೊಳ್ಳಲಾಗಿದೆ. ಒಟ್ಟಾರೆ, ರೌಡಿ ಬಿಕ್ಲು ಶಿವನ ಕೊಲೆ ಕೇಸ್ ಬೆಂಗಳೂರು ಅಂಡರ್ ವರ್ಲ್ಡ್‌ನಲ್ಲಿ ಹಾಗೂ ರಾಜಕೀಯ ವಲಯದಲ್ಲಿ ಹಲವರಿಗೆ ತಿಕ್ಲು ಹಿಡಿಸಿರುವುದಂತು ಸುಳ್ಳಲ್ಲ!!

ಅಂದಹಾಗೆ, ಬಿಕ್ಲು ಮರ್ಡರ್ ಕೇಸ್‌ನಲ್ಲಿ ತಾನೂ ಆರೋಪಿ ಅಂತ ಗೊತ್ತಾದ ಕೂಡಲೇ ಶಾಸಕ ಭೈರತಿ ಬಸವರಾಜ್ ಅವರು ಎಫ್ಐಆರ್ ರದ್ದು ಕೋರಿ ಹೈಕೋರ್ಟ್ ಮೊರೆ ಹೋಗಿದ್ರು. ಇದಕ್ಕೆ ಸರ್ಕಾರಿ ವಕೀಲರು ಆಕ್ಷೇಪ ವ್ಯಕ್ತಪಡಿಸಿದಾಗ, ಮಾನ್ಯ ನ್ಯಾಯಾಲಯ, ಭೈರತಿ ಅವರಿಗೆ ವಿಚಾರಣೆ ಎದುರಿಸಲು ಸೂಚಿಸಿದ್ದು, ಅದರಂತೆ, ಭೈರತಿ ಅವರು ಶನಿವಾರ ಭಾರತಿನಗರ ಪೊಲೀಸ್ ಠಾಣೆಗೆ ತೆರಳಿ ಸುಮಾರು ಮೂರು ಗಂಟೆಗಳ ಕಾಲ ವಿಚಾರಣೆ ಎದುರಿಸಿದ್ದಾರೆ. ತನಿಖೆ ಮುಂದುವರೆದಿದೆ... ☯



ಹೆ॥ಪೊ॥ಕ॥ ರಮೇಶ್ ಬಾನೋತ್



ಡಿಸಿಪಿ ಡಿ. ದೇವರಾಜ್



ಕಿರಣ್ ಮತ್ತು ಸಹಚರರು

# ಕಿರಣ್ ಪತ್ನಿಯ ಹೆಬಿಯಸ್ ಕಾರ್ಪಸ್ ವಜಾ!



ರೌಡಿ ಬಿಕ್ಲು ಶಿವನ ಹತ್ಯೆ ಪ್ರಕರಣದಲ್ಲಿ ಓರ್ವ ಆರೋಪಿಯಾಗಿರುವ ಕಿರಣ್ ಎಂಬುವನ ಪತ್ನಿ ಶಿರ್ಲಿನ್ಯ ಅಂಥೋನಿ ತನ್ನ ಗಂಡನನ್ನು ಅಕ್ರಮವಾಗಿ ಬಂಧಿಸಲಾಗಿದೆ. ಹೈಕೋರ್ಟ್‌ಗೆ ಹೇಬಿಯಸ್ ಕಾರ್ಪಸ್‌ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿದೆ. ಅರ್ಜಿದಾರರ ಪರ ವಾದ ಮಂಡಿಸಿದ ವಕೀಲರು, ಜುಲೈ 16ರ ಬೆಳಗ್ಗೆ ಪೊಲೀಸರು ಬಂದು ಕಿರಣ್ ಬಗ್ಗೆ ವಿಚಾರಿಸಿದ್ದಾರೆ.

ತಕ್ಷಣ ಕಿರಣ್ ಪೊಲೀಸ್‌ಠಾಣೆಗೆ ತೆರಳಿದ್ದ. ನಂತರ ಈ ಬಗ್ಗೆ ಮಾಹಿತಿಯಿಲ್ಲ ಎಂದು ದೂರಿದ್ದಾರೆ. ಸರ್ಕಾರದ ಪರ ಎಸ್ಪಿಪಿ ಬಿ.ಎ. ಬೆಳ್ಳಿಯಪ್ಪವಾದಿಸಿ ಪೊಲೀಸರು ಕಾನೂನು ಪ್ರಕಾರವೇ ಬಂಧಿಸಿದ್ದಾರೆ ಎಂದು ಹೇಳಿಕೆ ನೀಡಿದ್ದು, ಮಾನ್ಯ ಹೈಕೋರ್ಟ್ ಸರ್ಕಾರಿ ವಕೀಲರ ಹೇಳಿಕೆಯನ್ನು ದಾಖಲಿಸಿಕೊಂಡು, ಆರೋಪಿ ಕಿರಣ್ ಪತ್ನಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದೆ!

ಅಂದಹಾಗೆ, ಶಿವಪ್ರಕಾಶ್ ಬಿಕ್ಲು ಶಿವ ಮರ್ಡರ್ ಪ್ರಕರಣ ಸಂಬಂದ ಐವರು ಆರೋಪಿಗಳು ಭಾರತಿನಗರ ಪೊಲೀಸ್ ಠಾಣೆಗೆ ಬಂದು ತಾವೇ ಕೊಲೆ ಮಾಡಿದ್ದಾಗಿ ಹೇಳಿ ಸರೆಂಡರ್ ಆಗಿದ್ದಾರೆ! ಕಿರಣ್, ವಿಮಲ್, ಇನ್ನಿಬ್ಬರು ಶರಣಾಗಿದ್ದು ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ಪೊಲೀಸರ ವಶದಲ್ಲಿರುವ ಆರೋಪಿ ಕಿರಣ್ ಹಾಗೂ ಪ್ರಕರಣದ ಎ1 ಆರೋಪಿ ಜಗದೀಶ್ ಜಗ್ಗ ಬಾವ ಬಾಮೈದರಾಗಿದ್ದಾರೆ!! ಪೊಲೀಸರ ವಿಚಾರಣೆ ವೇಳೆ ನನಗೂ ಬಿಕ್ಲು ಶಿವನಿಗೂ ವೈಷಮ್ಯವಿತ್ತು,

ಅವನನ್ನು ಕೊಲೆ ಮಾಡುವಾಗ ವಿಡಿಯೋದಲ್ಲಿರುವುದು ನಾನು ಮಾತ್ರ. ಪ್ರಕರಣದಲ್ಲಿ ನನ್ನ ಭಾವ ಪ್ರಕರಣದ ಎ1 ಆರೋಪಿ ಜಗ್ಗ ಜಗದೀಶನ ಪಾತ್ರ ಇಲ್ಲ! ನನ್ನ ಮತ್ತು ಬಿಕ್ಲು ಶಿವನ ಮಧ್ಯೆ ಇದ್ದ ಮನಸ್ತಾಪವೇ ಈ ಕೊಲೆಗೆ ಕಾರಣ..... ನಾನೇ ಈ ಕೊಲೆ ಮಾಡಿದ್ದಿನಿ ಎಂದು ಆರೋಪಿ ಕಿರಣ್ ಹೇಳಿದ್ದಾನೆಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ! ಸದ್ಯ ಕೊಲೆ ಮಾಡುವ ದೃಶ್ಯವಿರೋ ವೀಡಿಯೋದಲ್ಲಿರುವ ಆರೋಪಿಗಳನ್ನು ತೀವ್ರ ವಿಚಾರಣೆಗೊಳಪಡಿಸಿರುವ ಪೊಲೀಸರು ಮಾಹಿತಿಗಳನ್ನ ಕಲೆ ಹಾಕುತ್ತಿದ್ದಾರೆ! ☯



ಬಿಕ್ಲು ಶಿವನ ತಾಯಿ ವಿಜಯಲಕ್ಷ್ಮಿ

# ಗರ್ಭಿಣಿ ಪತ್ನಿಯನ್ನು ಕೊಂದು ನೇಣು ಹಾಕಿಕೊಂಡ ಪತಿ


ತಿಮ್ಮಪ್ಪ ರಾಮಮೂಲ್ಯ ಹಾಗೂ ಜಯಂತಿ

ಅವರಿಬ್ಬರಿಗೆ ಮದುವೆಯಾಗಿ ಬರೋಬ್ಬರಿ 16 ವರ್ಷಗಳಾಗಿತ್ತು. ಆದರೆ ಸಂತಾನ ಭಾಗ್ಯ ಇರಲಿಲ್ಲ. ಹಲವು ಕಡೆಗಳಲ್ಲಿ ಔಷಧೋಪಚಾರ ಮಾಡಿದ್ದರು. ದೇವರು ದಿಂಡರು ಎಂದು ಹರಕೆ ಹೊತ್ತುಕೊಂಡಿದ್ದರು.ಅವರ ಪಾಲಿಗೆ ಪ್ರಸಕ್ತ ವರ್ಷ ಚೇತೋಹಾರಿಯಾಗಿತ್ತು. ಆಕೆ ಗರ್ಭಿಣಿಯಾಗಿದ್ದಳು. ಕುಟುಂಬಿಕರೆಲ್ಲರೂ ಸಂತೋಷಪಟ್ಟಿದ್ದರು. ಮೊದಲ ಮಗುವಿನ ನಿರೀಕ್ಷೆಯಲ್ಲಿ ಭರ್ಜರಿ ಸೀಮಂತ ಕಾರ್ಯಕ್ರಮ ಮಾಡಬೇಕು ಎಂದು ದಿನ ನಿಗದಿಪಡಿಸಿದ್ದರು. ಸೀಮಂತಕ್ಕಾಗಿ ಸೀರೆ ಮತ್ತು ಇತರ ವಸ್ತುಗಳನ್ನು ಖರೀದಿಸಿದ್ದರು. ಆದರೆ ಆ ಮನೆಯ ಸಂತೋಷ ಕ್ಷುಲ್ಲಕ ಕಾರಣಕ್ಕೆ ಕಮರಿ ಹೋಗಿತ್ತು. ಯಾವುದೋ ಕಾರಣದಿಂದ ಕೋಪಗೊಂಡ ಪತಿ ಪತ್ನಿಯ ಮೇಲೆ ಕೈ ಮಾಡಿದ್ದಾನೆ. ಗರ್ಭಿಣಿ ಆಗಿದ್ದ ಆಕೆ ಹೊಡೆತ ತಾಳಲಾರದೆ ಬಿದ್ದಾಗ ಹೆದರಿ ಆಕೆಯ ಮುಖಕ್ಕೆ ತಲೆದಿಂಬಿನಿಂದ ಒತ್ತಿ ಕೊಲೆ ಮಾಡಿದ್ದಾನೆ. ಕೋಪ ಸಹಜ ಸ್ಥಿತಿಗೆ ಬಂದಾಗ ಪರಿಸ್ಥಿತಿ ಕೈಮೀರಿತ್ತು. ಆತ ಮನೆಯ ಹಿಂಬದಿಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇಂತಹ ಘಟನೆ ನಡೆದದ್ದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ನಾವೂರ ಗ್ರಾಮದ ಬಡಗುಂಡಿ ಕಿಲ್ತೋಡಿ ಎಂಬಲ್ಲಿ.


ಕೊಲೆಯಾದ ಜಯಂತಿ

**ಮಂಗಳೂರು**

✍ ಮೋಹನ್ ಬೋಳಂಗಡಿ

ಬಂಟ್ವಾಳ ತಾಲೂಕಿನ ಕಾರಣಿಕ ಕಲ್ಲುರ್ಟಿ ದೈವಸ್ಥಾನ ಅಂದರೆ ಪಣೋಲಿಬೈಲು ಕ್ಷೇತ್ರ. ಸಜಿಪ ಮೂಡ ಗ್ರಾಮದಲ್ಲಿದೆ. ಮುಜರಾಯಿ ಇಲಾಖೆಗೆ ಸೇರಿದ ಏಕೈಕ ದೈವಸ್ಥಾನ ಇದು. ಇಲ್ಲಿನ ಪೂಜೆಯ ಕೈಂಕರ್ಯ ಇರುವುದು ಕುಲಾಲ ಸಮುದಾಯದವರಲ್ಲಿ. ಮುಜರಾಯಿ ಇಲಾಖೆಗೆ ಸೇರುವ ಮೊದಲು ಬಂಟ ಮನೆತನದವರು ಆಡಳಿತ ನಡೆಸುತ್ತಿದ್ದರೆ ಕುಲಾಲ ಸಮುದಾಯದವರು ಚಾಕರಿ ಮಾಡುತ್ತಿದ್ದರು. ಈ ದೈವಸ್ಥಾನಕ್ಕೆ ಲಕ್ಷಾಂತರ ರೂ. ಆದಾಯ ಇದೆ. ವಾರದಲ್ಲಿ ನಾಲ್ಕು ದಿನ ಕೋಲ ಸೇವೆಗಳು ನಡೆಯುತ್ತವೆ. ದಿನವೊಂದಕ್ಕೆ ನಾಲ್ಕು ಕೋಲ ಸೇವೆ ನಡೆಯುತ್ತದೆ. ವಾರದಲ್ಲಿ ನಾಲ್ಕು ದಿನ ಅಗೇಲು ಸೇವೆ ಇದೆ. ದಿನವೊಂದಕ್ಕೆ ಮೂರು ಸಾವಿರಕ್ಕೂ ಹೆಚ್ಚು ಅಗೇಲು ಸೇವೆ ನಡೆಯುತ್ತದೆ. ಐದು ಸಾವಿರಕ್ಕೂ ಹೆಚ್ಚು ಅಗೇಲು ಸೇವೆ ನಡೆದ ದಾಖಲೆ ಇದೆ. ಕಲ್ಲುರ್ಟಿ ದೈವ ಈ ಸ್ಥಳದಲ್ಲಿ ದೈವತ್ವಕ್ಕೆ ಹೋಗಿದ್ದು ಎನ್ನುವಂತಹ ನಂಬಿಕೆ ಇದೆ. ಯಾವುದಾದರೂ ಹರಕೆ ಹೇಳಿದರೆ ಅದು ಈಡೇರುತ್ತದೆ ಎಂಬ ವಿಶ್ವಾಸ ಇದೆ. ಇಂತಹ ಕಾರಣಿಕ ದೈವಸ್ಥಾನದ ಚಾಕರಿ ಕೆಲಸ ಮಾಡುತ್ತಿರುವಂತಹ ಮನೆಯವರೇ ಈ ಸ್ಟೋರಿಯ ವಿಲನ್ ತಿಮ್ಮಪ್ಪ ರಾಮ ಮೂಲ್ಯ. (52). ಪಣೋಲಿಬೈಲಿನ ಪಕ್ಕದಲ್ಲಿರುವಂತಹ ಮಿತ್ತಕೋಡಿಯ ನಿವಾಸಿ. ಇವರ ಅಣ್ಣ ನಾರಾಯಣ ಮೂಲ್ಯ ದೈವಸ್ಥಾನದಲ್ಲಿ ಎರಡನೇ ಮೂಲ್ಯಣ್ಣನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಮಿತ್ತಕೋಡಿಯಲ್ಲಿ ಅಂಗಡಿ ಹೊಂದಿದ್ದರು. ಆ ಅಂಗಡಿಯಲ್ಲಿ ಅವರ ತಮ್ಮ ತಿಮ್ಮಪ್ಪ ರಾಮಮೂಲ್ಯ ಅವರು ಟೈಲರಿಂಗ್ ಕೆಲಸ ಮಾಡುತ್ತಿದ್ದರು. ಇವರು 16 ವರ್ಷಗಳ ಹಿಂದೆ ನಾವೂರ ಬಡಗುಂಡಿಯ ಜಯಂತಿ (45) ಅವರನ್ನು ವಿವಾಹವಾಗಿದ್ದರು. ಅವರಿಬ್ಬರು ಮಿತ್ತಕೋಡಿಯಲ್ಲೇ ಸಂಸಾರ ಮಾಡುತ್ತಿದ್ದರು. ಆದರೆ ಕೆಲವು ವರ್ಷಗಳ ಹಿಂದೆ ಜಯಂತಿ ಅವರ ತಂಗಿಗೆ ಮದುವೆಯಾಗಿತ್ತು. ಅವರನ್ನು ಪರಂಗಿಪೇಟೆಗೆ ಮದುವೆ ಮಾಡಿಕೊಡಲಾಗಿತ್ತು. ತದನಂತರ ಜಯಂತಿಯವರು ತನ್ನ ತಾಯಿ ಮನೆಯಲ್ಲಿ ಬಂದು ನೆಲೆಸಿದ್ದರು. ಹೆತ್ತವರು ಕೆಲವು ವರ್ಷಗಳ ಹಿಂದೆ ಮೃತಪಟ್ಟಿದ್ದರು. ಜಯಂತಿ ಅವರ ಗಂಡ ತಿಮ್ಮಪ್ಪ ರಾಮ ಮೂಲ್ಯ ಮಿತ್ತಕೋಡಿಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದು, ದಿನನಿತ್ಯ ರಾತ್ರಿ ವೇಳೆ ಸುಮಾರು 15 ಕಿ.ಮೀ. ದೂರದ ಬಡಗುಂಡಿಯ ಮನೆಗೆ ಹೋಗುತ್ತಿದ್ದರು. ಅವರಿಗೆ ಯಾವುದೇ ದುರಾಭ್ಯಾಸಗಳಿರಲಿಲ್ಲ. ಅಪರೂಪಕ್ಕೆ ಕೋಳಿ ಅಂಕಕ್ಕೆ ಹೋಗಿ ಜೂಜು ಕಟ್ಟುವಂತಹ ಹವ್ಯಾಸ ಇತ್ತೇ ಹೊರತು ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ. ಜಯಂತಿಯವರು ಸಹ ಮನೆಯಲ್ಲಿ ಬೀಡಿ ಕಟ್ಟುತ್ತಿದ್ದು, ಅಕ್ಕಪಕ್ಕದವರೊಂದಿಗೆ ಒಳ್ಳೆಯ ಸಂಬಂಧ ಹೊಂದಿದ್ದರು. ಇಂತಹ ಕುಟುಂಬದಲ್ಲಿ ಬಿರುಗಾಳಿ ಯಾಕೆ ಸೃಷ್ಟಿಯಾಯಿತು ಎಂಬುದಕ್ಕೆ ಕಾರಣಗಳು ಸಿಗುತ್ತಿಲ್ಲ.


ಘಟನೆ ನಡೆದ ಮನೆಯಲ್ಲಿ ಪೊಲೀಸ್ ಅಧಿಕಾರಿಗಳು


ನೇಣಿನ ಕುಣಿಕೆಯಲ್ಲಿ ತಿಮ್ಮಪ್ಪ ರಾಮಮೂಲ್ಯ

### ಗರ್ಭಿಣಿಯಾಗಿದ್ದರು

ಜಯಂತಿಯವರಿಗೆ ಮದುವೆಯಾಗಿ 16 ವರ್ಷಗಳಾದರೂ ಸಂತಾನ ಭಾಗ್ಯ ಒದಗಿ ಬಂದಿರಲಿಲ್ಲ. ಅದಕ್ಕಾಗಿ ಸಾಕಷ್ಟು ಹರಕೆ ಕಟ್ಟಿಕೊಂಡಿದ್ದರು. ಇತ್ತೀಚೆಗೆ ಅವರು ಗರ್ಭವತಿ ಆಗಿದ್ದರು. ಗರ್ಭಕ್ಕೆ ಏಳು ತಿಂಗಳಾಗುವಾಗ ಸೀಮಂತ ಮಾಡುವ ಕ್ರಮ ಇರುವುದರಿಂದ ಜುಲೈ 2 ತಾರೀಕಿಗೆ ದಿನ ನಿಗದಿ ಮಾಡಲಾಗಿತ್ತು. ಸೀಮಂತಕ್ಕೆ ಸಂಬಂಧಿಸಿದಂತೆ ಸೀರೆ, ಮತ್ತಿತರ ವಸ್ತುಗಳನ್ನು ಖರೀದಿಸಲಾಗಿತ್ತು. ಸೀಮಂತದ ದಿನ ಸಾಕಷ್ಟು ಖರ್ಚು ಇದೆ ಎಂದು ಜಯಂತಿಯವರು ತಾನು ಸದಸ್ಯೆಯಾಗಿದ್ದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 50,000 ರೂ. ಸಾಲ ಪಡೆದುಕೊಂಡಿದ್ದರು. ಆ ಮೊತ್ತ ಜೂನ್ 18ರಂದು ಸಿಕ್ಕಿತ್ತು. ಆವತ್ತು ಗಂಡ ಹೆಂಡಿರಿಬ್ಬರು ಬಂಟ್ವಾಳಕ್ಕೆ ಹೋಗಿ ಆ ಹಣವನ್ನು ಪಡೆದುಕೊಂಡು ಕೆಲವೊಂದು ವಸ್ತುಗಳನ್ನು ಖರೀದಿಸಿ ರಾತ್ರಿ ಪದಾರ್ಥಕ್ಕೆಂದು ಕೋಳಿ ಮಾಂಸವನ್ನು ತಂದಿದ್ದರು. ತದನಂತರ ಆ ಮನೆಯಲ್ಲಿ ಏನಾಯಿತು ಎನ್ನುವುದು ಯಾರಿಗೂ ಗೊತ್ತಿಲ್ಲ.

### ಮನೆಯೊಳಗಿತ್ತು ಮೃತದೇಹಗಳು

ಮರುದಿನ ಅಂದರೆ ಜೂನ್ 19ರಂದು ಬೆಳಗ್ಗೆ ನೆರೆಮನೆಯ ಕ್ರಿಶ್ಚಿಯನ್ ಸಮುದಾಯದ ಮಹಿಳೆಯೊಬ್ಬರು ತನ್ನ ಮಕ್ಕಳನ್ನು ಶಾಲೆಗೆ ಬಿಡಲು ಹೋಗಿ ವಾಪಾಸು ಬರುತ್ತಿದ್ದಾಗ ಜಯಂತಿಯವರನ್ನು ಕರೆದರು. ಅಕ್ಕಪಕ್ಕದ ಮನೆಯವರೆಲ್ಲರೂ ಅವರ ಮನೆಯ ಎದುರಿನಿಂದ ಹೋಗುವ ಸಂದರ್ಭದಲ್ಲಿ ಕರೆದು ಮಾತನಾಡಿಸುವುದು ವಾಡಿಕೆಯಾಗಿತ್ತು. ಅಲ್ಲದೇ ಗರ್ಭಿಣಿಯಾಗಿದ್ದಂತಹ ಜಯಂತಿಯವರ ಯೋಗಕ್ಷೇಮ ಕೇಳುವುದು ಅವರ ಕರ್ತವ್ಯವಾಗಿತ್ತು. ಅದರಂತೆ ಆ ಮಹಿಳೆ ಕರೆದಾಗ ಮನೆಯಿಂದ ಪ್ರತಿಕ್ರಿಯೆ ಬರಲಿಲ್ಲ. ಅವರು ತನ್ನ ಅತ್ತೆ ಲಿಲ್ಲಿವಾಸ್ ಅವರಲ್ಲಿ ವಿಚಾರಿಸಿದರು. ಗರ್ಭಿಣಿಯ ಆರೋಗ್ಯದಲ್ಲಿ ಏನಾದರೂ ಏರುಪೇರಾಗಿರಬಹುದೇ ಎಂದು ಲಿಲ್ಲಿಯವರು ಧಾವಿಸಿ ಬಂದರು. ಮನೆ ಬಾಗಿಲಿಗೆ ಚಿಲಕ ಹಾಕಿರಲಿಲ್ಲ. ಬಾಗಿಲು ತಳ್ಳಿ ಒಳಗೆ ಹೋದಾಗ ಅಡುಗೆ ಮನೆಯಲ್ಲಿ ತಿಮ್ಮಪ್ಪ ಅವರ ದೇಹ ನೇಣು ಬಿಗಿದ ಸ್ಥಿತಿಯಲ್ಲಿ ಕಂಡು ಬಂತು. ಒಳಗಡೆ ಹೋಗಿ ನೋಡಿದರೆ ಮಲಗುವ ಕೋಣೆಯಲ್ಲಿ ಜಯಂತಿಯವರ ದೇಹ ನಿಶ್ಚಲವಾಗಿ ಬಿದ್ದಿತ್ತು. ಈ ಸನ್ನಿವೇಶವನ್ನು ನೋಡಿದ ಲಿಲ್ಲಿವಾಸ್ ಅವರು ಬೆದರಿ ಹೊರಗೆ ಓಡಿ ಬಂದಿದ್ದು ಬೊಬ್ಬೆ ಹಾಕಿ ಅಕ್ಕಪಕ್ಕದವರನ್ನು ಕರೆದರು. ತಕ್ಷಣ ಬಂಟ್ವಾಳ ಗ್ರಾಮಾಂತರ ಪೊಲೀಸರಿಗೆ ಮಾಹಿತಿ ನೀಡಲಾಯಿತು. ಪೊಲೀಸರು ಬಂದು ಪರಿಶೀಲನೆ ಮಾಡಿದಾಗ ಜಯಂತಿ ಅವರನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಬೆಳಕಿಗೆ ಬಂತು. ತಿಮ್ಮಪ್ಪ ಅವರು ನೇಣು ಬಿಗಿದುಕೊಂಡಿದ್ದರಿಂದಲೇ ಮೃತಪಟ್ಟಿರುವುದು ಖಚಿತವಾಗಿತ್ತು.



### ಯಾಕಾಗಿರಬಹುದು?

ಜಯಂತಿ ಮತ್ತು ತಿಮ್ಮಪ್ಪ ಅವರ ದಾಂಪತ್ಯ ಜೀವನ ಚೆನ್ನಾಗಿಯೇ ಇತ್ತು. ಅಕ್ಕಪಕ್ಕದವರೊಂದಿಗೆ ಒಳ್ಳೆಯ ಸಂಬಂಧ ಇತ್ತು. ತಿಮ್ಮಪ್ಪ ಅವರಿಗೆ ದುರಭ್ಯಾಸಗಳಿರಲಿಲ್ಲ. ಬಡತನ ಇದ್ದರೂ ಹೊಟ್ಟೆಬಟ್ಟೆಗೇನೂ ಕೊರತೆ ಇರಲಿಲ್ಲ. ಆದರೂ ಅವರ ಮಧ್ಯೆ ಯಾಕೆ ವೈಮನಸ್ಸು ಮೂಡಿತು ಎಂಬುದಕ್ಕೆ ನಿಖರ ಕಾರಣಗಳು ಗೊತ್ತಾಗಿಲ್ಲ. ಜಯಂತಿಯವರು ತಾನು ಸದಸ್ಯೆಯಾಗಿದ್ದಂತಹ ಸಂಘದಿಂದ 50,000 ರೂ. ಸಾಲ ಪಡೆದುಕೊಂಡಿದ್ದರು. ಸೀಮಂತ ಖರ್ಚಿಗೆ ಬೇಕೆಂದು ತೆಗೆದಿರಿಸಿದ್ದರು. ಈ ಹಣವನ್ನು ಯಾವುದೋ ಕಾರಣಕ್ಕೆ ತಿಮ್ಮಪ್ಪ ಅವರು ಕೇಳಿರಬೇಕು ಜಯಂತಿ ಅವರು ಕೊಡಲು ನಿರಾಕರಿಸಿರಬೇಕು. ಇದರಿಂದ ಕೋಪಗೊಂಡ ತಿಮ್ಮಪ್ಪ ಅವರು ಜಯಂತಿ ಅವರ ಮೇಲೆ ಹಲ್ಲೆ ನಡೆಸಿದ ಸಂದರ್ಭದಲ್ಲಿ ತುಂಬು ಗರ್ಭಿಣಿಯಾಗಿದ್ದರಿಂದ ಅವರು ಕುಸಿದು ಬಿದ್ದಿದ್ದರು. ಇದನ್ನು ಕಂಡು ಹೆದರಿದ ತಿಮ್ಮಪ್ಪ ತಲೆದಿಂಬಿನಿಂದ ಅವರ ಉಸಿರುಗಟ್ಟಿಸಿ ಹತ್ಯೆ ಮಾಡಿ ಭಯದಿಂದ ನೇಣು ಹಾಕಿಕೊಂಡಿರಬೇಕು ಎಂದು ಅಂದಾಜಿಸಲಾಗಿದೆ. ಈ ಕಾರಣಗಳನ್ನು ಬಿಟ್ಟರೆ ಬೇರೆ ಕಾರಣಗಳು ಈ ಪ್ರಕರಣದಲ್ಲಿ ಕಂಡು ಬರುತ್ತಿಲ್ಲ. ಇಡೀ ಘಟನೆಯ ಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಎರಡು ಪ್ರತ್ಯೇಕ ದೂರುಗಳು ದಾಖಲಾಗಿವೆ. ಜಯಂತಿಯವರ ತಂಗಿ ಕೊಟ್ಟ ದೂರಿನಂತೆ ತಿಮ್ಮಪ್ಪ ಮೂಲ್ಯ ಅವರ ಮೇಲೆ ಕೊಲೆ ಪ್ರಕರಣ ದಾಖಲಾಗಿದ್ದರೆ, ಅವರ ಅಣ್ಣ ನಾರಾಯಣ ಅವರ ದೂರಿನಂತೆ ಆತ್ಮಹತ್ಯೆ ಪ್ರಕರಣ ದಾಖಲಾಗಿದೆ. ಎರಡೂ ದೇಹಗಳ ಮರಣೋತ್ತರ ಪರೀಕ್ಷೆ ದೇರಳಕಟ್ಟೆ ಖಾಸಗಿ ಆಸ್ಪತ್ರೆಯಲ್ಲಿ ನಡೆದಿದ್ದು, ಒಟ್ಟಿಗೆ ಅವರಿಬ್ಬರ ಅಂತ್ಯಕ್ರಿಯೆಯನ್ನು ನಡೆಸಲಾಗಿದೆ.

# ಬಾಗಲಕೋಟೆ: ದೆವ್ವ ಬಿಡಿಸುವದಾಗಿ ಅಂತ ಹೇಳಿ ಜ್ಯೋತಿಷಿಯಿಂದ ಮಹಿಳೆಗೆ 28 ಲಕ್ಷ ಪಂಗನಾಮ!

ಬಾಗಲಕೋಟೆ

✍ ಮಂಜುನಾಥ ಈಶ್ವರ ಕರೋಳಿ

ಜನ ಮರಳೋ ಜಾತ್ರೆ ಮರಳೋ ಎಂಬ ವಾಡಿಕೆ ಗಾದೆಯಂತೆ ಇದು ಕಂಪ್ಯೂಟರ್ ಯುಗ ನಮ್ಮ ಜನ ಜಾಣರೋ ದಡ್ಡರೋ ಎಂಬ ಇಂದಿಗೂ ಕಾಡುವಂತಹ ಪ್ರಶೆಗಳು ಇನ್ನು ನಿಗೂಢವಾಗಿವೆ. ಇಲ್ಲಿ ಕೆಲವರು ನಕಲಿ ಜ್ಯೋತಿಷಗಳು ವಾಮಾಚಾರಿಗಳು ಅಲ್ಲಲ್ಲಿಗೆ ತಮ್ಮ ಕೇಂದ್ರಗಳನ್ನು ತೆರೆದು ಇಂದಿನ ಕಲಿಯುಗದಲ್ಲಿ ಎಂತಹ ಬುದ್ಧಿವಂತ ಜಾಣರನ್ನು ದಡ್ಡರನ್ನಾಗಿಸುತ್ತಿದ್ದಾರೆ. ನಿಮಗೆ ಆ ದೋಷ ಇದೆ, ಈ ದೋಷ ಇದೆ, ಶನಿ ನಿಮ್ಮ ಹಿಂದೆ ಬಿದ್ದಿದ್ದಾನೆ, ನೀವು ಆ ಹೋಮ ಹಾಕಿಸಬೇಕು, ಈ ಪೂಜೆ ಮಾಡಬೇಕು ಅಂತ ಹತ್ತು ಹಲವಾರು ವಿಷಯಗಳನ್ನು ಅವರ ತಲೆಯಲ್ಲಿ ತುಂಬಿ ಈ ಕಳ್ಳ ಜ್ಯೋತಿಷಿಗಳು ಸಲೀಸಾಗಿ ಹಣ ಮಾಡಿಕೊಂಡು ಐಷಾರಾಮಿ ಜೀವನ ಮಾಡುತ್ತಿದ್ದು, ಹಣ ಕಳೆದುಕೊಂಡವರ ಪರಿಸ್ಥಿತಿ ಆ ಕಡೆ ಪರಿಹಾರನೂ ಇಲ್ಲಿ ಹಣವೂ ಇಲ್ಲ ಅಂತ ಮತ್ತಷ್ಟು ಮಾನಸಿಕ ಸ್ಥಿತಿಗೆ ಜಾರುವ ಪರಿಸ್ಥಿತಿ ಈ ನಮ್ಮ ಜನಗಳಿಗೆ ಬಂದಿದೆ.



ಎಸ್ಪಿ ಅಮರ್‌ನಾಥ್ ರೆಡ್ಡಿ



ಅ॥ ಎಸ್ಪಿ ಪ್ರಸನ್ನ ದೇಸಾಯಿ

ಅದೇ ರೀತಿಯಲ್ಲಿ ಇಲ್ಲೊಬ್ಬಳು ಜ್ಯೋತಿಷಿ ತನ್ನದೇ ಆದ ಒಂದು ಜ್ಯೋತಿಷಿ ಕೇಂದ್ರ ಇಟ್ಟುಕೊಂಡಿದ್ದು, ಆಕೆ ಕಡೆ ಒಬ್ಬ ಮಹಿಳೆ ತಮ್ಮ ಮಗುವಿಗೆ ಪದೇ ಪದೇ ಜ್ವರ ಬರುತ್ತಿದ್ದು ನಮ್ಮ ಮಗುವಿಗೆ ಏನಾಗಿದೆ, ಅದಕ್ಕೆ ಪರಿಹಾರ ಮಾಡಿಕೊಡಿ ಅಂತಾ ಹೇಳಿದಾಗ ಆಗ ಆ ಜ್ಯೋತಿಷಿ ನಿಮ್ಮ ಮಗುವಿಗೆ ದೆವ್ವ ತಗುಲಿದೆ ಎಂದು ಹೇಳಿ ಅವಕ್ಕೆ ಹೋಮ ಹವನಗಳ ಹೆಸರಿನಲ್ಲಿ ಆ ಮಗುವಿನ ತಾಯಿಗೆ ಲಕ್ಷಾಂತರ ರೂಪಾಯಿ ಹಣ ವಂಚಿಸಿದ ಘಟನೆ ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ತೇರದಾಳದಲ್ಲಿ ನಡಿದಿದ್ದರ ಬಗ್ಗೆ ವರದಿಯಾಗಿದೆ.

ಬಾಗಲಕೋಟ ಜಿಲ್ಲೆಯ ರಬಕವಿ-ಬನಹಟ್ಟಿ ತಾಲ್ಲೂಕಿನ ತೇರದಾಳ ಪಟ್ಟಣದ ನಿವಾಸಿಯಾದ ಲಕ್ಷ್ಮಿ ಲಾಗಲೋಟಿ ಎಂಬುವರು ತೇರದಾಳದಲ್ಲಿರುವ ಖಾಸಗಿ ಸಹಕಾರಿ ಬ್ಯಾಂಕ್‌ವೊಂದರಲ್ಲಿ ಉದ್ಯೋಗಿಯಾಗಿದ್ದು, ಲಕ್ಷ್ಮಿ ಅವರಿಗೆ ಎರಡು ವರ್ಷದ ಮಗುವಿದ್ದು, ಈಗ ಕೆಲವು ದಿನಗಳಿಂದ ಮೆಲೀಂದ ಮೇಲೆ ಆ ಮಗುವಿಗೆ ಅನ್ಯಾರೋಗ್ಯ ಎದುರಿಸುತ್ತಿದ್ದು ಪದೇ ಪದೇ ಜ್ವರ ಬರುವುದು ಕಂಡು ಬರುತ್ತಿತ್ತು. ಆಗ ಲಕ್ಷ್ಮಿಯವರು ತಮಗೆ ತಿಳಿದಿರುವ ವೈದ್ಯರ ಬಳಿ ಚಿಕಿತ್ಸೆ ಕೊಡಿಸುತ್ತಿದ್ದರು. ಅದು ಮತ್ತೇ ಜ್ವರ ಕಾಣಿಸಿಕೊಳ್ಳಲು ಪ್ರಾರಂಭಿಸುತ್ತಿದ್ದು ಇದರಿಂದ ಲಕ್ಷ್ಮಿಯವರು ತುಂಬಾ ಚಿಂತಾಮಗ್ನರಾಗಿ ತಮ್ಮ ಮಗುವಿಗೆ ಎಷ್ಟು ಬಾರಿ ಆಸ್ಪತ್ರೆಗೆ ತೊರಿಸಿದರೂ ಕಡಿಮೆಯಾಗುತ್ತಿಲ್ಲವಲ್ಲ, ಯಾಕೆ ಹೀಗಾಗುತ್ತಿದೆ, ಇದಕ್ಕೆ ಪರಿಹಾರ ಏನು ಎಂಬ ಚಿಂತೆಯಲ್ಲಿರುವಾಗ ಆಗ ಲಕ್ಷ್ಮಿಯವರಿಗೆ ಮಹಾರಾಷ್ಟ್ರ ಮೂಲದ ಸೀಮಾ ಶಾಂಭವಿ ಶೆಟ್ಟಿ ಎಂಬ ಜ್ಯೋತಿಷಿಯ ಪರಿಚಯವಾಗಿದ್ದು ತೇರದಾಳದ ಲಕ್ಷ್ಮಿ ತಮ್ಮ ಮಗುವಿನ ಅನಾರೋಗ್ಯದ ಬಗ್ಗೆ ಅಳಲು ತೊಡಿಕೊಂಡಿದ್ದಾರೆ. ಆಗ ಆ ಜ್ಯೋತಿಷಿ ಲಕ್ಷ್ಮಿಯವರ ಮಗುವನ್ನು ನೋಡಿ ನಿಮ್ಮ ಮಗುವಿಗೆ ಎಷ್ಟು ಬಾರಿ ಆಸ್ಪತ್ರೆಗೆ ತೊರಿಸಿದರೆ ಕಡಿಮೆಯಾಗುವ ಖಾಯಿಲೆ ಅಲ್ಲ, ಇದು ಬೇರೆ ರೀತಿ ಇದೆ ಅಂದಿದ್ದಾಳೆ. ಆಗ ಆ ಮಗುವಿನ ತಾಯಿ ಲಕ್ಷ್ಮಿ ಆ ಸಮಸ್ಯೆ ಏನು, ಅದಕ್ಕೆ ಪರಿಹಾರವೇನು ಅಂದಾಗ ಅವಾಗ ಆ ಜ್ಯೋತಿಷಿ ಹೇಳಿದ್ದು ನಿಮ್ಮ ಮಗುವಿನ ದೇಹದಲ್ಲಿ ದೆವ್ವ ಸೇರಿಕೊಂಡಿದೆ. ಅದೇ ಕಾರಣಕ್ಕೆ ನಿಮ್ಮ ಮಗು ಅನಾರೊಗ್ಯಕ್ಕೆ ತುತ್ತಾಗುತ್ತಿದ್ದು, ಇದಕ್ಕೆ ಹೋಮ ಹವನ ವಿಶೇಷ ಪೂಜೆ ಮಾಡಬೇಕು ಎಂದಿದ್ದಾಳೆ. ಆಗ ಲಕ್ಷ್ಮಿಯವರು ನಮ್ಮ ಮಗು ಮೊದಲಿನಂತೆಯಾದರೆ ಸಾಕು. ಅದಕ್ಕೆ ಯಾವ ಪೂಜೆ ಬೇಕಾದರೂ ಮಾಡಿ, ಎಷ್ಟು ಖರ್ಚಾದರೂ ಪರವಾಗಿಲ್ಲ ಎಂದು ಹೇಳಿದ ತಕ್ಷಣ ಆಗ ಆ ಜ್ಯೋತಿಷಿ ಸ್ವಲ್ಪ ದಿನಗಳ ನಂತರ ತೇರದಾಳದ ಲಕ್ಷ್ಮಿಯವರಿಗೆ ದೂರವಾಣಿ ಕರೆಮಾಡಿ ನಿಮ್ಮ ಮಗುವಿನ ಹೆಸರಲ್ಲಿ ಪೂಜೆ ನವಗ್ರಹ ಪೂಜೆ ಹವನದಂತಹ ಎಲ್ಲ ಕ್ರಮಬದ್ಧವಾಗಿ ಮಾಡಿದ್ದೇನೆ ಅಂತಾ ಹೇಳಿದ್ದಾಳೆ. ನಂತರ ಅವರಿಗೆ ಪೂಜೆ ಮಾಡಿದ ವಿಡಿಯೋ ಕಳಿಸಿ ಹಣ ನೀಡುವಂತೆ ಜ್ಯೋತಿಷಿ ಶಾಂಭವಿ ಕೇಳಿದ್ದಾಳೆ. ಇದನ್ನು ನಂಬಿದ ಲಕ್ಷ್ಮಿಯವರು ಆ ಜ್ಯೋತಿಷಿಗೆ ಹಣ ಕೊಟ್ಟಿದ್ದು, ಆ ಜ್ಯೋತಿಷಿ ಹಣ



ಜ್ಯೋತಿಷಿ ಸೀಮಾ ಶಾಂಭವಿ ಶೆಟ್ಟಿ

ಕೇಳಿದಾಗಲೆಲ್ಲ ಫೋನ್‌ಪೇ, ಆರ್‌ಟಿಜಿಎಸ್ ಮೂಲಕ ಬರೋಬ್ಬರಿ 28 ಲಕ್ಷ ಹಣ ವರ್ಗಾವಣೆ ಮಾಡಿದ್ದಾರೆ. ಲಕ್ಷ್ಮಿಯವರ ತಮ್ಮ ಬಳಿಯಿದ್ದ ಚಿನ್ನ, ತಮ್ಮ ತಾಯಿಯ ಠೇವಣಿ ಹಣವನ್ನು ಸೀಮಾ ಶಾಂಭವಿಗೆ ನೀಡಿ ತಮ್ಮ ಕೈ ಬರಿಗೈ ಮಾಡಿಕೊಂಡು ಮೋಸ ಹೋಗಿದ್ದಾರೆ. ಅದೇ ರೀತಿ ಆ ಜ್ಯೋತಿಷಿ ಸೀಮಾ ಶಾಂಭವಿ ಸಿಕ್ಕು ಬಲಿಕಾ ಬಕ್ರಾ ಅಂದುಕೊಂಡು ಅವರ ಬಳಿ ಇದ್ದ ಹಣವನ್ನೆಲ್ಲ ಪೀಕಿದ್ದಳು. ತದನಂತರ ಜ್ಯೋತಿಷಿಯ ವಿರುದ್ಧ ಅಂದರೆ ಈ ಘಟನೆಗೆ ಸಂಬಂಧವಾಗಿ ಬಾಗಲಕೋಟೆ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ☯

## ಯಾರೂ ಮೋಸ ಹೋಗದಿರಿ...

ಲಕ್ಷ್ಮಿಯವರು ವಿದ್ಯಾವಂತರು ತಿಳಿದವರು, ಯಾಕೆ ಇಂತಹ ಕಪಟ ಜ್ಯೋತಿಷಿಯ ಮೊರೆ ಹೋದರೋ? ಅವರು ಕಳೆದುಕೊಂಡ ಹಣದಲ್ಲಿಯೇ ತಮ್ಮ ಮಗುವನ್ನು ಒಳ್ಳೆಯ ಆಸ್ಪತ್ರೆಗೆ ತೋರಿಸಿ ಗುಣಪಡಿಸಬಹುದಿತ್ತೇನೋ ಎಂಬುದು ಪ್ರಜ್ಞಾವಂತರ ಅನಿಸಿಕೆ. ಏನೇ ಆಗಲಿ ಇಂತಹ ಸುಳ್ಳು ಜ್ಯೋತಿಷಿಗಳನ್ನು ನಂಬಿ ಯಾರು ಮೋಸ ಹೋಗಬೇಡಿ. ಇಂದಿನ ಯುಗ ತಂತ್ರಜ್ಞಾನದ ಕಾಲ ಏನೇ ಸಮಸ್ಯೆಯಿರಲಿ ಅದನ್ನು ಆಲೋಚಿಸಿ, ಅದಕ್ಕೆ ಪರಿಹಾರ ಕೊಂಡುಕೊಳ್ಳುವ ಜ್ಞಾನ ಇದ್ದರೂ ಇಂತಹವರ ಬಳಿ ಹೋಗುವುದು ನಮ್ಮಷ್ಟು ದಡ್ಡರು ಯಾರೂ ಇಲ್ಲ, ಏನೇ ಆಗಲಿ ಲಕ್ಷ್ಮಿ ಅವರಿಗೆ ಆದ ಮೋಸಕ್ಕೆ ನ್ಯಾಯ ಸಿಗಲಿ, ಅವರ ಹಣ ಅವರಿಗೆ ವಾಪಸ್ ದೊರೆಯಲಿ. ಯಾರೂ ಸಹ ಈ ಕಳ್ಳ ಜ್ಯೋತಿಷಿಗಳ ಮೊರೆ ಹೋಗಿ ಮೋಸ ಹೋಗದಿರಲಿ ಎಂಬುದು'ಪೊಲೀಸ್ ನ್ಯೂಸ್'ನ ಆಶಯವಾಗಿದೆ. ☯

# ಧರ್ಮಸ್ಥಳದ ರಹಸ್ಯ ಸಮಾಧಿ ಹಿಂದಿದೆಯಾ ಕುತಂತ್ರ?!

5 ☞

ಬಂದಿರಲೇ ಇಲ್ಲ, ಅದರ ಅಗತ್ಯವೂ ಇರಲಿಲ್ಲ. ಏಕೆಂದರೆ ಯಾವುದೇ ಜಾಗದ ಮಹಜರು ಮಾಡಬೇಕಿದ್ದರೂ, ಸಿಕ್ಕಿರುವ ತಲೆ ಬುರುಡೆಯ ಉಳಿದ ಅವಶೇಷಗಳನ್ನು ಪತ್ತೆ ಹಚ್ಚಬೇಕಿದ್ದರೂ ಸಹಾಯಕ ಆಯುಕ್ತರ ಉಪಸ್ಥಿತಿ ಅತ್ಯಗತ್ಯ. ಭೂಮಿಯ ಅಡಿಯಲ್ಲಿ ಹುಗಿದಿರುವಂತಹ ಯಾವುದೇ ಸೊತ್ತುಗಳನ್ನು ಅದು ಮೃತದೇಹವಾಗಲೀ ಅಥವಾ ಇನ್ನಿತರ ಸೊತ್ತುಗಳೇ ಆಗಿರಲಿ, ಅದು ಸರಕಾರಿ ಸುಪರ್ದಿಗೆ ಸೇರಿರುವುದರಿಂದ ಅದನ್ನು ಮೇಲೆತ್ತಲು ಸಂಬಂಧಪಟ್ಟ ಅಧಿಕಾರಿಗಳು ಉಪವಿಭಾಗ ಅಧಿಕಾರಿಗಳಿಗೆ ಅಂದರೆ ಸಹಾಯಕ ಆಯುಕ್ತರಿಗೆ ಕೋರಿಕೆ ಪತ್ರ ನೀಡಬೇಕು. ಅವರು ತನ್ನ ಕರ್ತವ್ಯದ ಅವಧಿಯಲ್ಲಿ ಸಮಯಾವಕಾಶವನ್ನು ನೋಡಿಕೊಂಡು ಸಮಯ ನಿಗದಿಪಡಿಸಬೇಕು. ಆ ಸಂದರ್ಭದಲ್ಲಿ ಉಪಸ್ಥಿತರಿರುವಂತೆ ಸ್ಥಳೀಯ ಸರಕಾರಿ ವೈದ್ಯಾಧಿಕಾರಿಗಳು ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಅವರೆಲ್ಲರೂ ಸ್ಥಳಕ್ಕೆ ಬಂದ ನಂತರ ಅಜ್ಞಾತ ವ್ಯಕ್ತಿ ತೋರಿಸಿದಂತಹ ಸ್ಥಳದಲ್ಲಿ ನೆಲವನ್ನು ಅಗೆಯಬೇಕು. ಏನಾದರೂ ಮೂಳೆಗಳು, ಅಸ್ಥಿಪಂಜರ ಮತ್ತು ಇತರೆ ಸೊತ್ತುಗಳು ಸಿಕ್ಕಿದರೆ ಅದನ್ನು ಮಹಜರು ಮೂಲಕ ಸ್ವಾಧೀನಪಡಿಸಿಕೊಳ್ಳಬೇಕು. ಇಷ್ಟೆಲ್ಲ ಪ್ರಕ್ರಿಯೆಗಳು ಇರುವಂತಹ ಸಂದರ್ಭದಲ್ಲಿ ಏಕಾಏಕಿ ಅಜ್ಞಾತ ವ್ಯಕ್ತಿಯನ್ನು ಆತನಿಗೆ ಪ್ರೊಟೆಕ್ಷನ್ ನೀಡಿದಂತಹ ವಕೀಲರು ನಿರ್ದಿಷ್ಟ ಪ್ರದೇಶಕ್ಕೆ ಏಕಾಏಕಿ ಯಾವುದೇ ಸೂಚನೆ ಇಲ್ಲದೆ ಕರೆದುಕೊಂಡು ಬಂದಾಗ ಪೊಲೀಸರು ಯಾವುದೇ ಪ್ರಕ್ರಿಯೆ ನಡೆಸದೇ ವಾಪಾಸು ಕಳಿಸಿದ್ದಾರೆ.



### ನ್ಯಾಯಾಲಯಕ್ಕೆ ಅರ್ಜಿ

ಈ ಬುರುಡೆ ಪ್ರಕರಣದ ತನಿಖೆಯನ್ನು ಧರ್ಮಸ್ಥಳ ಸಬ್ ಇನ್ಸ್‌ಪೆಕ್ಟರ್ ಸಮರ್ಥ್ ಆರ್. ಗಾಣಿಗೇರ್ ನಡೆಸುತ್ತಿದ್ದಾರೆ. ಬುರುಡೆ ಹಿಡಿದುಕೊಂಡು ಬಂದು ನ್ಯಾಯಾಧೀಶರ ಎದುರು 183 ಹೇಳಿಕೆಯನ್ನು ದಾಖಲಿಸಿರುವ ಅಜ್ಞಾತ ವ್ಯಕ್ತಿಯ ಬಗ್ಗೆ ಈ ಹಿಂದೆ ಬೆಳ್ತಂಗಡಿ ಠಾಣೆಯಲ್ಲಿ ಯಾವುದಾದರೂ ದೂರುಗಳು ದಾಖಲಾಗಿದೆಯೋ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಪ್ರಕರಣದ ಸತ್ಯಾಸತ್ಯತೆಯನ್ನು ಬಯಲಿಗೆಳೆಯಬೇಕಾದರೆ ಮತ್ತು ಪಾರದರ್ಶಕ ತನಿಖೆ ಅಗತ್ಯ ಇರುವುದರಿಂದ ಬುರುಡೆ ತಂದು ಒಪ್ಪಿಸಿರುವ ಅಜ್ಞಾತ ವ್ಯಕ್ತಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸುವ ಅಗತ್ಯತೆ ಇದೆ ಎಂದು ಭಾವಿಸಿರುವ ತನಿಖಾಧಿಕಾರಿಗಳು ಈಗಾಗಲೇ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿದ್ದು, ಕೆಲವೇ ದಿನಗಳಲ್ಲಿ ಅನುಮತಿ ಸಿಗುವ ನಿರೀಕ್ಷೆ ಇದೆ. ಈ ಮಧ್ಯೆ ಬುರುಡೆ ದಾಸನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ವಕೀಲರ ತಂಡದ ಹಿರಿಯ ವಕೀಲರು ಈ ಪ್ರಕರಣದ ಅಮೂಲಾಗ್ರ ತನಿಖೆಗೆ ಕೋರಿಕೆ ಸಲ್ಲಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯವು ಈ ಮನವಿಯ ಬಗ್ಗೆ ಇಲಾಖೆಯಿಂದ ವಿವರಣೆ ಕೇಳಿದೆ. ಆದರೆ ಬುರುಡೆ ತಂದೊಪ್ಪಿಸಿದ ಅಜ್ಞಾತ ವ್ಯಕ್ತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ವಕೀಲರು ಈ ಬಗ್ಗೆ ತನಿಖಾಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡಿಲ್ಲ, ಇದು ಸಂಶಯಕ್ಕೆ ಎಡೆಮಾಡಿದೆ.

ಧರ್ಮಸ್ಥಳದ ಕಾಡಿನಲ್ಲಿ ಹೂತು ಹಾಕಿರುವ ಮೃತದೇಹಗಳ ಬಗ್ಗೆ ತನಿಖೆ ನಡೆಸಬೇಕೆಂದು ಪೊಲೀಸರ ಮೇಲೆ ಒತ್ತಡ ಹೇರುತ್ತಿರುವ ತಂಡವೇ ಅನನ್ಯಭಟ್ ಪ್ರಕರಣವನ್ನೂ ತನಿಖೆ ನಡೆಸಬೇಕು ಎಂದು ಒತ್ತಾಯಿಸುತ್ತಿದೆ. ಈ ಎಲ್ಲಾ ಘಟನೆಗಳಿಗೆ ಸೌಜನ್ಯ ಪ್ರಕರಣದ ಬಗ್ಗೆ ಹೋರಾಟ ನಡೆಸುತ್ತಿರುವ ತಂಡವೇ ಕಾರಣ ಎನ್ನುವುದು ಸ್ಪಷ್ಟವಾಗುತ್ತಿದೆ. ☯

# ಎಂಎಂ ಹಿಲ್ಸ್: ಐದು ಹುಲಿಗಳ ಮಾರಣ ಹೋಮ! ಬೇಜವಾಬ್ದಾರಿ ಡಿಸಿಎಫ್ ಚಕ್ರಪಾಣಿ ಸಸ್ಪೆಂಡ್!!






ಡಿಸಿಎಫ್ ಚಕ್ರಪಾಣಿ

**ಜೂನ್** 26, 2025ರಂದು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ತಮಿಳು ದನಗಾಯಿಗಳು ಮಾಡಿದ್ದ ವಿಷಪ್ರಾಶನದಿಂದ ಒಂಬತ್ತು ವರ್ಷದ ತಾಯಿ ಹುಲಿ ಮತ್ತು ಅದರ ನಾಲ್ಕು ಮರಿಗಳು ಸಾವನ್ನಪ್ಪಿದ್ದವು. ಅರಣ್ಯ ಸಚಿವ ಈಶ್ವರ್ ಖಂಡ್ರೆ ಈ ಪ್ರಕರಣದ ಬಗ್ಗೆ ಇಲಾಖಾ ತನಿಖೆಗೆ ಆದೇಶಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪ ಆರೋಪದ ಮೇಲೆ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ವೈ.ಚಕ್ರಪಾಣಿ ಅವರನ್ನು ಅಮಾನತುಗೊಳಿಸಿ ರಾಜ್ಯ ಸರ್ಕಾರ ಕಳೆದ ಸೋಮವಾರ ಆದೇಶ ಹೊರಡಿಸಿದೆ!

ಈ ಘಟನೆಯ ತನಿಖೆಗಾಗಿ ರಚಿಸಲಾದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಕುಮಾರ್ ಪುಷ್ಕರ್ ನೇತೃತ್ವದ ಉನ್ನತ ಮಟ್ಟದ ತನಿಖಾ ಸಮಿತಿ ತನಿಖೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಸದರಿ ವರದಿಯನ್ನು ಆಧರಿಸಿ ಈಶ್ವರ್ ಖಂಡ್ರೆ ಅವರು ಬೇಜವಾಬ್ದಾರಿ ಡಿಸಿಎಫ್ ವೈ. ಚಕ್ರಪಾಣಿ ಮತ್ತು ಇತರ ಮೂವರು ಅಧಿಕಾರಿಗಳನ್ನು ಅಮಾನತುಗೊಳಿಸಿದ್ದಾರೆ. ಗಮನಿಯ ಸಂಗತಿ ಏನೆಂದರೆ, ಕಳೆದ ಮೂರು ತಿಂಗಳಿನಿಂದ, ಮುಂಚೂಣಿಯ ಗುತ್ತಿಗೆ ಸಿಬ್ಬಂದಿಗೆ ಅವರ ವೇತನ ಅಥವಾ ಭತ್ಯೆಯನ್ನು ಪಾವತಿಸಲಾಗಿಲ್ಲ! ಇದರಿಂದ ಸಿಬ್ಬಂದಿ ತೊಂದರೆಯಲ್ಲಿ ಸಿಲುಕಿದ್ದು, ಸರಿಯಾಗಿ ಕರ್ತವ್ಯ ನಿಭಾಯಿಸಿಲ್ಲ. ಅವರಿಗೆ ವೇತನ ನೀಡದಿದ್ದುದು ಮೇಲಧಿಕಾರಿಗಳ ತಪ್ಪು. ಇದು 'ಗಸ್ತು' ಚಟುವಟಿಕೆಗಳಿಗೆ ಅಡ್ಡಿಯಾಗಿದೆ ಎಂದು ತನಿಖಾ ವರದಿಯಲ್ಲಿ ಹೇಳಲಾಗಿದೆ! ಹೀಗಾಗಿ, ಡಿಸಿಎಫ್ ಚಕ್ರಪಾಣಿ ಸೇರಿ ಮೂವರು ಮುಟ್ಠಾಳರ ತಲೆದಂಡವಾಗಿದೆ. ಈ ಸಂದರ್ಭದಲ್ಲಿ ಸ್ವಲ್ಪ ಫ್ಲಾಷ್ ಬ್ಯಾಕ್ ಹೇಳಬೇಕಿದೆ....



ಅರಣ್ಯ ಮಂತ್ರಿ ಈಶ್ವರ ಖಂಡ್ರೆ

## ಐದು ಹುಲಿಗಳ ಮಾರಣ ಹೋಮ ನಡೆದದ್ದು

ಹುಲಿ ನಮ್ಮ ರಾಷ್ಟ್ರೀಯ ಪ್ರಾಣಿ. ಮಿಗಿಲಾಗಿ, ಮಲೆ ಮಹದೇಶ್ವರರ ಹೊತ್ತುಕೊಂಡು ಮೆರೆಸೋ ವಾಹನ! ಪವಿತ್ರ ಮಾದಪ್ಪನ ಸನ್ನಿಧಿಯಲ್ಲೇ ಐದು ಹುಲಿಗಳ ಮಾರಣ ಹೋಮ ನಡೆದಿದೆ ಎಂದರೆ...?! ಕೊಂದವರಿಗೆ ತಕ್ಕ ಶಾಸ್ತಿ ಆಗಲೇಬೇಕಲ್ಲವೇ. ಸದ್ಯ, ಜಿಲ್ಲಾಡಳಿತ ಹುಲಿಗಳನ್ನು ಕೊಂದಿರುವ ಕಡು ಪಾಪಿಗಳನ್ನು ಪತ್ತೆಹಚ್ಚಿ ಬಂಧಿಸಿ ಜೈಲಿಗೆ ನೂಕಿದೆ ನಿಜ. ಆದರೆ, ಇಂಥ ಘಟನೆ ಮತ್ತೆ ಘಟಿಸಲಾರದು ಅಂತ ಗ್ಯಾರೆಂಟಿ ಏನು?!

ಮೊದಲು ಈ ಅರಣ್ಯ ಪ್ರದೇಶದ ಹಳ್ಳಿಗಳಲ್ಲಿ ಅಕ್ರಮವಾಗಿ ನೆಲೆಸಿರುವ ತಮಿಳರನ್ನು ಇಲ್ಲಿಂದ ಒದ್ದೋಡಿಸಬೇಕಿದೆ! ಹಾಳು ರಾಜಕಾರಣಿಗಳು ತಮ್ಮ ವೋಟ್ ಬ್ಯಾಂಕ್‌ಗಾಗಿ ಎಲ್ಲಿಂದಲೋ ಬಂದವರಿಗೆ ವೋಟರ್ ಐಡಿ, ಆಧಾರ್ ಕಾರ್ಡ್ ಕೊಟ್ಟು ಪೋಷಿಸಿಕೊಂಡಿದೆ! ಆದರಿವರು ಊಟ ವಸತಿ ಕೊಟ್ಟಿರುವ ಕರುನಾಡಿಗೆ ನಿಯತ್ತಾಗಿಲ್ಲ! ಸರ್ಕಾರಿ ಸವಲತ್ತು ಸಂಪತ್ತಿಗಾಗಿ ಇಲ್ಲಿ ಸೇರಿಕೊಂಡು ಸರ್ಕಾರಿ ಭೂಮಿಯಲ್ಲಿ ಮನೆ, ಹೊಲ ಗದ್ದೆ ಮಾಡಿಕೊಂಡು ಹಾಯಾಗಿ ನೆಲೆಸಿದ್ದಾರೆ! ಈ ಜನ ತಮಿಳುನಾಡಿನಲ್ಲಿರೋ ತಮ್ಮೂರಿಗೆ ಆಗಾಗ ಹೋಗಿ ಬರುತ್ತಾರಲ್ಲ, ಬರುವಾಗ ಅಲ್ಲಿ ಮೇವಿಲ್ಲದೆ ಪರದಾಡುವ ನೂರಾರು ಹಸುಗಳನ್ನು ಇಲ್ಲಿಗೆ ಹೊಡಕೊಂಡು ಬಂದು ಇಲ್ಲಿ ಸರ್ಕಾರಿ ಅರಣ್ಯದಲ್ಲಿ ಮೇಯಿಸುತ್ತಾರೆ. ಹಣಕ್ಕೆ ಹಣವೂ ಸಿಗುತ್ತದೆ, ಸಗಣಿ ವ್ಯಾಪಾರವೂ ವೃದ್ಧಿಯಾಗುತ್ತದೆ... ಹೇಗಿದೆ ನೋಡಿ ಲಾಭ! ಮೊದಲು ಈ ತಮಿಳರನ್ನು ಇಲ್ಲಿಂದ ಓಡಿಸಬೇಕು... ಒಂದು ಹಸುವನ್ನು ಕೊಂದಿತು ಎಂಬ ಕೋಪಕ್ಕೆ ನಾಲ್ಕು ಮರಿಗಳ ತಾಯಿ ಹುಲಿಯನ್ನು ಮರಿಗಳ ಸಮೇತ ಕೊಂದಿದ್ದಾರಲ್ಲ... ಇವರು ಮನುಷ್ಯರ?!



ಹುಲಿ ಕೊಂದ ಆರೋಪಿಗಳು

ಚಾಮರಾಜ ನಗರ ಜಿಲ್ಲೆ, ಹನೂರು ತಾಲ್ಲೂಕು ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವಲಯದ ಮೀಣ್ಯಂ ಉಪ ವಲಯದಲ್ಲಿ ಕಾಡಿನಲ್ಲಿ ತಮ್ಮ ಪಾಡಿಗೆ ಸಂಚರಿಸುತ್ತಿದ್ದ ತಾಯಿ ಹುಲಿ, ಐದು ಮರಿ ಹುಲಿಗಳ ಸಾವಿಗೆ ಕಾರಣಗಳೇನು? ಎಂದು ಹುಡುಕಿದಾಗ, ಹುಲಿಗಳಿಗೆ ವಿಷ ಪ್ರಾಷಾನವಾಗಿರೋ ಅಂಶ ಪತ್ತೆಯಾಯ್ತು! ಹುಲಿ ಕೊಂದು ತಿಂದು ಬಿಟ್ಟಿದ್ದ ದನದ ಮಾಂಸಕ್ಕೆ ತಮಿಳು ದನಗಾಯಿಗಳು ವಿಷ ಮಿಕ್ಸ್ ಮಾಡಿದ್ರು! ಮತ್ತೆ ಬಂದು ಉಳಿದ ಮಾಂಸ ಭಕ್ಷಿಸಿದ ತಾಯಿ ಮತ್ತು ಮಕ್ಕಳು ಸಾವನ್ನಪ್ಪಿದವು!! ಈ ದನಗಾಯಿಗಳನ್ನು ಗಮನಿಸಬೇಕಾದ ಅರಣ್ಯಾಧಿಕಾರಿಗಳು, ಗಸ್ತು ಸಿಬ್ಬಂದಿಗಳು ಎಲ್ಲಿ ಸತ್ತು ಮಲಗಿದ್ರು?! ದೊಡ್ಡ ದೊಡ್ಡವರೇನೋ ಎಲ್ಲೋ ತಿಂದು ತೇಗುತ್ತಾ ಬಿದ್ದಿದ್ರು. ಅದೇ ಅರಣ್ಯ ಇಲಾಖೆಯ ಕೆಳಹಂತದ ನೌಕರರಿಗೆ ವೇತನವೇ ಪಾವತಿಯಾಗಿರಲಿಲ್ಲ! ಇವರಿಗೆ ಕೊಡಬೇಕಾದ ಎರಡು ಕೋಟಿ ರೂಪಾಯಿಗಳನ್ನು ಅರಣ್ಯ ಇಲಾಖೆ ಬಾಕಿ ಉಳಿಸಿಕೊಂಡಿದೆಯಂತೆ! ಗುತ್ತಿಗೆದಾರ, ಇಲಾಖೆ ಇನ್ನು ಹಣ ಬಿಡುಗಡೆ ಮಾಡಿಲ್ಲ ತನ್ನ ಕೈಯ್ಯಲ್ಲಿ ಹಣವಿಲ್ಲ ಅಂತೇಳಿ ಸಹಜವಾಗಿಯೇ ಕೈ ಚಲ್ಲಿದ್ದಾನೆ! ವೇತನ ಬಾರದಿರುವುದರಿಂದ ಆಕ್ರೋಶಗೊಂಡ ವಾಚರ್ಸ್ ಮೂರು ತಿಂಗಳ ಹಿಂದೆ ಹೋಗಿ ಸ್ಥಳೀಯ ಅರಣ್ಯಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಮಾಡಿದ್ದರಂತೆ. ಊಟ ಮಾಡಲು ಸಹ ಹಣವಿಲ್ಲವೆಂದು ಅಲವತ್ತುಕೊಂಡಿದ್ದರಂತೆ! ಆದರೂ ಅರಣ್ಯ ಇಲಾಖೆ ಸಮಸ್ಯೆ ನಿವಾರಣೆಗೆ



☞ 11

# ಹಲ್ಲಿಲ್ಲದ ಹಾವಾದ ಹುಲಿ ಯೋಜನೆ! ವಿಶೇಷ ಕಾರ್ಯಪಡೆ ಆಟಕ್ಕುಂಟು ಲೆಕ್ಕಕ್ಕಿಲ್ಲ!!

**ಕ**ರ್ನಾಟಕದಲ್ಲಿ ಹುಲಿಗಳ ನಿರ್ವಹಣೆಗೆ ಓರ್ವ ನಿರ್ದೇಶಕರಿದ್ದರೂ ಅವರ ಹುದ್ದೆ ಹಲ್ಲಿಲ್ಲದ ಹಾವಾಗಿದೆ! ವನ್ಯಜೀವಿ ಸಂರಕ್ಷಣೆಗೆಂದೇ ವಿಶೇಷ ಕಾರ್ಯಪಡೆ ರಚಿಸಿದ್ದರೂ ಅದನ್ನು ಮುಚ್ಚುವ ಹಂತಕ್ಕೆ ತರಲಾಗಿದೆ! ಕರ್ನಾಟಕದಲ್ಲಿ ಹುಲಿ ಯೋಜನೆ ಸ್ಥಿತಿಗತಿ ಜತೆಗೆ ಹಿರಿಯ ಅಧಿಕಾರಿಗಳಾದ ಎ.ಸಿ.ಲಕ್ಷ್ಮಣ, ಬಿ.ಕೆ. ಸಿಂಗ್ ಅಂಥವರ ಸೇವೆ ಸ್ಮರಣೀಯ. ಕರ್ನಾಟಕದಲ್ಲಿ ಹುಲಿ ಯೋಜನೆ ಸ್ಥಿತಿಗತಿ ಜತೆಗೆ ಹಿರಿಯ ಅಧಿಕಾರಿಗಳಾದ ಎ.ಸಿ.ಲಕ್ಷ್ಮಣ, ಬಿ.ಕೆ. ಸಿಂಗ್ ಅಂಥವರ ಸೇವೆ ಸ್ಮರಣೀಯ.

ಹುಲಿಗಳ ಸಂರಕ್ಷಣೆಗೆಂದು ಪ್ರತೀ ರಾಜ್ಯಕ್ಕೆ ಪ್ರತ್ಯೇಕ ಹುಲಿ ಯೋಜನೆ, ಅದಕ್ಕೊಬ್ಬರು ಹಿರಿಯ ಐಎಫ್ಎಸ್ ಅಧಿಕಾರಿ. ನಿರ್ದೇಶಕರ ಹೆಸರಿನಲ್ಲಿ (ಎಫ್‌ಡಿಪಿಟಿ) ಅವರಿಗೊಂದು ಕಚೇರಿ, ವಾಹನ, ಇದಕ್ಕಾಗಿ ಸಿಬ್ಬಂದಿ, ಸೇವಕರು. ಮತ್ತೊಂದು ಕಡೆ ಹುಲಿ ಸಹಿತ ವನ್ಯಜೀವಿಗಳ ಬೇಟೆ, ಸಂಘರ್ಷ ತಡೆಗೆ ವಿಶೇಷ ಕಾರ್ಯಪಡೆ (ಎಸ್‌ಟಿಪಿಎಫ್). ಈ ಸೇವೆಗೆ ಅಧಿಕಾರಿಗಳು, ಸಿಬ್ಬಂದಿಗಳ ನೇಮಕ, ವಾಹನಗಳ ನಿಯೋಜನೆ, ಕಚೇರಿ ಸ್ಥಾಪನೆ ಸಹಿತ ಕೋಟಿಗಟ್ಟಲೇ ಖರ್ಚು. ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯಡಿ ನಿರ್ವಹಣೆ ಮಾಡಿ ಹಣ ವೆಚ್ಚ ಮಾಡಿದರೂ ಅದರ ಸ್ಥಿತಿಯನ್ನು ಕೇಳಬೇಡಿ. ಕರ್ನಾಟಕದ ಹುಲಿ ಯೋಜನೆ ನಿರ್ದೇಶಕರ ಹುದ್ದೆ ಹಲ್ಲಿಲ್ಲದ ಹಾವಾಗಿ, ಬರೀ ಉತ್ಸವ ಮೂರ್ತಿಯಂತಾಗಿ ವರ್ಷಗಳೇ ಕಳೆಯಿತು. ವಿಶೇಷ ಕಾರ್ಯಪಡೆ ಅಧಿಕಾರಿಗಳು, ಸಿಬ್ಬಂದಿಗಳು ಕೆಲಸವೇ ಇಲ್ಲದ ಹುದ್ದೆಗೆ ಪ್ರತಿಷ್ಠಾಪನೆಗೊಂಡು ವರ್ಷಗಳಾಗುತ್ತ ಬಂದು. ಇದನ್ನು ಮಾಡಿದ ಉದ್ದೇಶವಾದರೂ ಏನು ಎನ್ನುವ ಪ್ರಶ್ನೆಗೆ ಉತ್ತರ ಮಾತ್ರ ಇಲ್ಲ.

ಭಾರತದಲ್ಲೇ ಅತಿ ಹೆಚ್ಚು ಹುಲಿಗಳ ಟಾಪ್ ಮೂರು ರಾಜ್ಯಗಳ ಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳನ್ನು ಉಳಿಸಿಕೊಂಡು ಬಂದಿರುವ, ಶ್ರೀಗಂಧದ ನಾಡು ಎಂದು ಕರೆಯಿಸಿಕೊಳ್ಳುವ, ಅತ್ಯುತ್ತಮ ಅರಣ್ಯ ನಿರ್ವಹಣೆಯಿಂದ ಗಮನ ಸೆಳೆದಿದ್ದ ಕರ್ನಾಟಕ ಅರಣ್ಯ ಇಲಾಖೆ ಗೌರವವೇ ಮಣ್ಣುಪಾಲಾಗುವಂತಹ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಅದರಲ್ಲೂ ಇತ್ತೀಚಿನ ಮಾನವ ವನ್ಯಜೀವಿ ಸಂಘರ್ಷದ ಪ್ರಕರಣಗಳು ಹೆಚ್ಚಿವೆ. ಹುಲಿಯಂತಹ ದೊಡ್ಡ ಪ್ರಾಣಿಗೆ ವಿಷವಿಕ್ಕುವುದು ಮರುಕಳಿಸುತ್ತಲೇ ಇದೆ. ಚಾಮರಾಜನಗರ ಜಿಲ್ಲೆಯ ಮಲೈಮಹದೇಶ್ವರ ವನ್ಯಜೀವಿ ಧಾಮ ವ್ಯಾಪ್ತಿಯಲ್ಲಿ ನಾಲ್ಕು ಮರಿಗಳು ಸೇರಿ ಐದು ಹುಲಿಗಳು ಏಕಕಾಲಕ್ಕೆ ಜೀವ ಕಳೆದುಕೊಂಡಿರುವ ಬರೀ ಕರ್ನಾಟಕ ಮಾತ್ರವಲ್ಲ, ಭಾರತದ ಹುಲಿ ಸಂರಕ್ಷಣಾ ಇತಿಹಾಸದಲ್ಲೇ ಮೊದಲು. ಪರಿಸ್ಥಿತಿ ಹೀಗಿರುವಾಗ ಹುಲಿ ಸಂರಕ್ಷಣೆಗೆಂದೇ ಕರ್ನಾಟಕ ಸರ್ಕಾರ ಕೋಟ್ಯಂತರ ಖರ್ಚು ಮಾಡಿ ಅಧಿಕಾರಿಗಳು, ಸಿಬ್ಬಂದಿ ನಿಯೋಜಿಸಿ ಸೇವೆ ನೀಡುವಾಗ ಅದು ಬರೀ ಲೆಕ್ಕಕ್ಕೆ ಸೀಮಿತ ಎನ್ನುವಂತಾದರೆ ರೂಪಿಸಿದ ಆಶಯವಾದರೂ ಎನ್ನುವ ಪ್ರಶ್ನೆ ಎದುರಾಗಲಿದೆ. ಜನರ ತೆರಿಗೆ ಹಣ ಈ ರೀತಿ ಪೋಲಾಗುವುದು ಕೂಡ ಚರ್ಚೆಯನ್ನು ಹುಟ್ಟು ಹಾಕಿದೆ.

ಕರ್ನಾಟಕದಲ್ಲಿ ಮೂರು ದಶಕದ ಹಿಂದೆಯೇ ಹುಲಿ ಯೋಜನೆಗೆ ಪ್ರತ್ಯೇಕ ಹುದ್ದೆಯನ್ನು ಸೃಜಿಸಲಾಗಿದೆ. ಹುಲಿ ಯೋಜನೆ ಕ್ಷೇತ್ರ ನಿರ್ದೇಶಕರ ಹುದ್ದೆಗೆ ಹಿರಿಯ ಐಎಫ್ಎಸ್ ಅಧಿಕಾರಿಯನ್ನು ನೇಮಿಸಿಕೊಂಡು ಬರಲಾಗುತ್ತಿದೆ. ಈ ಕಚೇರಿ ಮೈಸೂರಿನಲ್ಲಿಯೇ ಇದೆ. ಮೈಸೂರು ಭಾಗದಲ್ಲಿಯೇ ಹೆಚ್ಚು ಹುಲಿಗಳು ಇರುವುದರಿಂದ ಈ ಕಚೇರಿ ಇಲ್ಲೇ ಇರಲಿ ಎನ್ನುವ ಉದ್ದೇಶ ಹೊಂದಲಾಗಿತ್ತು. ಕೆಲವು ವರ್ಷಗಳ ಕಾಲ ಬಂಡೀಪುರ, ನಾಗರಹೊಳೆ ಸಹಿತ ಎಲ್ಲಾ ಹುಲಿ ಯೋಜನೆ ನಿರ್ದೇಶಕರು ಹುಲಿ ಯೋಜನೆ ನಿರ್ದೇಶಕರಿಗೆ ವರದಿ ಮಾಡಿಕೊಳ್ಳುವ ಪರಿಪಾಠವಿತ್ತು. ಕೆಲ ವರ್ಷ ಮೈಸೂರು ಹಾಗೂ ಶಿವಮೊಗ್ಗ ಭಾಗಕ್ಕೆ ಇಬ್ಬರು ಹುಲಿ ಯೋಜನೆ ನಿರ್ದೇಶಕರನ್ನೂ ನಿಯೋಜಿಸಿ ವಿಂಗಡಿಸಲಾಯಿತು.

ಪ್ರತಿ ಮಾಹಿತಿಯೂ ಹುಲಿ ಯೋಜನೆ ನಿರ್ದೇಶಕರ ಸುಪರ್ದಿಯಲ್ಲಿತ್ತು. ಇವರೇ ವೇತನ ಪ್ರಾಧಿಕಾರವೂ ಆಗಿದ್ದರಿಂದ ಆಡಳಿತ ಬಿಗಿಯಾಗಿಯೇ ಇತ್ತು. ಕೆಲ ವರ್ಷಗಳ ಹಿಂದೆ ಈ ಹುದ್ದೆಯ ಅಧಿಕಾರವನ್ನು ಆಯಾ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ವ್ಯಾಪ್ತಿಗೆ ನೀಡಲಾಯಿತು. ಇದರಿಂದ ಹುಲಿ ಯೋಜನೆ ನಿರ್ದೇಶಕರ ಹುದ್ದೆ ಡಮ್ಮಿಯಾಗಿ ಹೋಯಿತು. ಒಬ್ಬ ಹಿರಿಯ ಐಎಫ್‌ಎಸ್ ಅಧಿಕಾರಿಯಂತೂ ಹುಲಿ ಯೋಜನೆ

☞ 11

10 ☜

ಮುಂದಾಗಿಲ್ಲ ನೋಡ್ರಿ. ಇದರ ನಡುವೆ 2 ಕೋಟಿ ರೂ. ಬಾಕಿ ಉಳಿಸಿಕೊಂಡಿದ್ದರೂ ಮತ್ತೊಬ್ಬ ಗುತ್ತಿಗೆದಾರನಿಗೆ ಗುತ್ತಿಗೆ ಕೊಡಲು ಅರಣ್ಯ ಇಲಾಖೆ ಮುಂದಾಗಿದೆಯಂತೆ. ಇದರಲ್ಲಿ ಹಿರಿಯ ಅಧಿಕಾರಿಗಳು ತಪ್ಪೆಸಗಿರುವುದು ಸ್ಪಷ್ಟವಾಗಿದೆ.



ಈಗ ಸಸ್ಪೆಂಡ್ ಆಗಿದ್ದಾರಲ್ಲ ಡಿಸಿಎಫ್ ಚಕ್ರಪಾಣಿ, ಇವರು ಹಿಂದೊಮ್ಮೆ ಕೂಡ ಕರ್ತವ್ಯದಿಂದ ಸಸ್ಪೆಂಡ್ ಆಗಿದ್ದರು! ಇಂಥ ಅಧಿಕಾರಿಯನ್ನು ಸೂಕ್ಷ್ಮ ವಲಯದ ಕಾರ್ಯಕಾರಿ ಹುದ್ದೆಗೆ ನೇಮಿಸಿರುವುದೇ ರಾಜ್ಯ ಸರ್ಕಾರ ಮಾಡಿದ ದೊಡ್ಡ ತಪ್ಪು!! ಡಿಸಿಎಫ್ ಮೇಲಿನ ಅಧಿಕಾರಿ ಸಿಸಿಎಫ್. ಅವರ ಕಚೇರಿ ಚಾಮರಾಜನಗರದಲ್ಲಿದೆ. ಆ ಹುದ್ದೆಯಲ್ಲಿ ಹಿರಾಲಾಲ್ ಇದ್ದಾರೆ.


ಸಿಸಿಎಫ್ ಹಿರಾಲಾಲ್

ಅವರು ಈ ಪ್ರಕರಣದಲ್ಲಿ ಸಮಸ್ಯೆ ಪರಿಹಾರಕ್ಕೆ ಏನಾದರೂ ಮಾಡಬೇಕಿತ್ತಲ್ಲವೇ? ಇವರೆಲ್ಲ ಸೇರಿಕೊಂಡು ಮಾಡಿದ ತಪ್ಪಿನಿಂದ, ವೇತನ ದೊರೆಯದೆ ಹಲವು ಸಮಸ್ಯೆಗಳಿಗೆ ಸಿಲುಕಿದ ಸಿಬ್ಬಂದಿ (ವಾಚರ್ಸ್) ಅರಣ್ಯದ ಮೇಲೆ ಎಂದಿನ ನಿಗಾ ವಹಿಸಲು ಸಾಧ್ಯವಾಗಿಲ್ಲ. ಇದರ ಲಾಭವನ್ನು ದುಷ್ಕರ್ಮಿಗಳು ಬಳಸಿಕೊಂಡಿದ್ದಾರೆ!

**ಸಗಣಿ ಮಾಫಿಯಾ!**

ಐದು ಹುಲಿಗಳ ಮಾರಣ ಹೋಮಕ್ಕೆ ಈ ಭಾಗದ ಸಗಣಿ ಮಾಫಿಯಾ ಹಾಗೂ ಇಲ್ಲಿನ ಜನಪ್ರತಿನಿಧಿಗಳ ಹಸ್ತಕ್ಷೇಪವೇ ಕಾರಣವಾಯಿತೇ? ಎಂಬ ಅನುಮಾನವನ್ನು ವನ್ಯಜೀವಿ ತಜ್ಞ ವಿನೋದ್ ಕುಮಾರ್ ಬಿ. ನಾಯಕ್ ವ್ಯಕ್ತಪಡಿಸಿದ್ದಾರೆ! ಮಲೈ ಮಹದೇಶ್ವರ ವನ್ಯಜೀವಿಧಾಮದಲ್ಲಿ ಐದು ಹುಲಿಗಳಿಗೆ ವಿಷ ಹಾಕಿ ಕೊಂದ ಘಟನೆಯನ್ನು ವಿಶ್ಲೇಷಣೆ ಮಾಡಿದಾಗ ಹೊರಬರುತ್ತಿರುವ ವಿಚಾರ ಏದು!

ಮಲೈ ಮಹದೇಶ್ವರ ಅರಣ್ಯದಲ್ಲಿ ನೂರಾರು ಹಳ್ಳಿಗಳಿವೆ. ಕಾಡಂಚಿನ ಕೆಲ ಹಳ್ಳಿಗಳಲ್ಲಿ ಬೃಹದಾಕಾರದ ಸಗಣಿ ಗುಡ್ಡೆಗಳು ಕಾಣಸಿಗುತ್ತವೆ. ಈ ಕಾಡಿನಲ್ಲಿ ಎಗ್ಗಿಲ್ಲದೇ ಸಾವಿರಾರು ದನಗಳು ಮೇಯುವುದರಿಂದ ಹಳ್ಳಿಗಳಲ್ಲಿ ರಾಶಿ ರಾಶಿ ಸಗಣಿ ಸಂಗ್ರಹವಾಗುತ್ತದೆ. ದುರಂತವೇನೆಂದರೆ, ಈ ದನಗಳು ಕರ್ನಾಟಕದ ದನಗಳಲ್ಲ... ಇವು ಪಕ್ಕದ ತಮಿಳುನಾಡು ರಾಜ್ಯದ ಬರಗೂರು ಎನ್ನುವ ಪ್ರದೇಶದ ತಳಿಗಳು! ಮಹದೇಶ್ವರ ಬೆಟ್ಟದ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ತಮಿಳುನಾಡಿನ ಜನರು, ಆಗಾಗ ತಮ್ಮೂರಿಗೆ ಹೋದಾಗ, ಸಾವಿರಾರು ಸಂಖ್ಯೆಯಲ್ಲಿ ಈ ಬರಗೂರು ದನಗಳನ್ನು ಕರ್ನಾಟಕಕ್ಕೆ ರವಾನೆ ಮಾಡಿಕೊಂಡು ಮಾಡುತ್ತಾರೆ! ಇದೊಂತರ ಸಂಗೋಪನೆ ಮ ಗುತ್ತಿಗೆ!! ಆ ದನಗಳು ಕರ್ನಾಟಕದ ಕಾಡನ್ನು ಯಥೇಚ್ಛವಾಗಿ ಮೇಯುತ್ತವೆ. ಅವುಗಳ ಹಾಲು ಬಳಸಿಕೊಂಡು, ಲಾರಿಗಟ್ಟಲೇ ಸಂಗ್ರಹವಾಗುವ ಸಗಣಿಯನ್ನು ಲಕ್ಷಾಂತರ ರೂಪಾಯಿಗಳಿಗೆ ಮಾರುವ ದಂಧೆ ಇಲ್ಲಿ ಅನೇಕ ವರ್ಷಗಳಿಂದ ನಡೆಯುತ್ತಿದೆ!



ಕೇರಳ ತಮಿಳುನಾಡು ಮಾತ್ರವಲ್ಲ ಕರ್ನಾಟಕದ ಕೊಡಗು, ಸಕಲೇಶಪುರ ಮತ್ತು ಚಿಕ್ಕಮಗಳೂರಿನ ಕಾಫಿ ತೋಟಗಳಿಗೆ ಇಲ್ಲಿಂದ ಸಗಣಿ

☞ 14

# ಬನ್ನೇರುಘಟ್ಟ ಮೃಗಾಲಯದಲ್ಲಿ ಹಸಿವಿನಿಂದ ಬಳಲಿ ಪ್ರಾಣ ಬಿಟ್ಟ 3 ಹುಲಿ ಮರಿಗಳು!

ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಹಸಿವಿನಿಂದ ಬಳಲಿ ಬಳಲಿ ಮೂರು ಹುಲಿ ಮರಿಗಳು ಸಾವನ್ನಪ್ಪಿವೆ! ತಾಯಿ ಹುಲಿ ಮರಿಗಳಿಗೆ ಹಾಲುಣಿಸದೇ ಇರುವುದು ಮತ್ತು ಮೃಗಾಲಯದ ಸಿಬ್ಬಂದಿ ನಿರ್ಲಕ್ಷ್ಯ ಈ ದುರಂತಕ್ಕೆ ಕಾರಣ!ಈ ಹುಲಿ ಮರಿಗಳ ಸಾವಿಗೆ ವೈದ್ಯರ ನಿರ್ಲಕ್ಷ್ಯವೂ ಕೂಡ ಕಾರಣ ಎಂದು ಪರಿಸರ ವಾದಿಗಳು ಪ್ರಾಣಿ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಒಂದು ವಾರದ ಹಿಂದೆ ಹಿಮಾ ಎಂಬ 7 ವರ್ಷದ ಹೆಣ್ಣು ಹುಲಿ 3 ಮರಿಗಳಿಗೆ ಜನ್ಮ ನೀಡಿತ್ತು. ಎರಡು ಗಂಡು ಒಂದು ಹೆಣ್ಣು ಮರಿಗಳಿಗೆ ಜನ್ಮ ನೀಡಿದ್ದ 'ಹಿಮಾ' ಅದೇಕೋ ಏನೋ ತಾನೇ ಜನ್ಮ ನೀಡಿದ ಮರಿಗಳಿಗೆ ಹಾಲುಣಿಸದೇ ಅವುಗಳನ್ನು ಬಿಟ್ಟು ಓಡಾಡತೊಡಗಿದೆ. ಇದಕ್ಕೆ ಮುನ್ನ 2 ಬಾರಿ ಮರಿಗಳಿಗೆ ಜನ್ಮ ನೀಡಿದ್ದ ಇದೇ ಹುಲಿ ಆಗ ಮರಿಗಳಿಗೆ ಹಾಲುಣಿಸಿ ಚನ್ನಾಗಿಯೇ ಪೋಷಿಸಿತ್ತು. ಅದರೀಗ ಮೂರನೇ ಭಾರಿ ಮೂರು ಮರಿಗಳ ಹೆತ್ತು, ತನ್ನ ಮರಿಗಳಿಗೆ ಹಾಲುಣಿಸದೆ ದೂರವಿತ್ತು! ಗಮನಿಯಸಂಗತಿ ಎಂದರೆ, ಹಿಮಾ ಮೃಗಾಲಯದಲ್ಲಿ ಕೂಡಿಟ್ಟಿರುವ ಹುಲಿಯಲ್ಲ, ಅರಣ್ಯ ವಾಸಿ! ಹಿಮಾ, ತನ್ನ ಸುತ್ತಲಿನ ಪರಿಸರದಿಂದ ಮರಿಗಳಿಗೆ ಹಾಲುಣಿಸುವುದನ್ನು ತ್ಯಜಿಸಿರಬಹುದು. ಆದರೆ, ಅಲ್ಲಿ ಲಕ್ಷಾಂತರ ರೂ. ಸಂಬಳವನ್ನು ಪಡೆಯುತ್ತಾ ತಾವು ಜೈವಿಕ ಉದ್ಯಾನದಲ್ಲಿರುವ ಪ್ರಾಣಿಗಳನ್ನು ಜೋಪಾನವಾಗಿ ನೋಡಿಕೊಳ್ಳುತ್ತೇವೆ ಎಂದು ನೇಮಕವಾಗಿರುವ ಸಿಬ್ಬಂದಿ ಹಾಗೂ ವೈದ್ಯರ ಗಮನ ಎಲ್ಲಿ ಹೋಗಿತ್ತು?



ನಮ್ಮ ದೇಶದಲ್ಲಿ ಹುಲಿಗಳ ಸಂಖ್ಯೆ ಕಡಿಮೆಯಿದ್ದು, ಅವುಗಳನ್ನು ಪೋಷಣೆ ಮಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಅದರಲ್ಲಿಯೂ ಜೈವಿಕ ಉದ್ಯಾನದಲ್ಲಿ ಪ್ರಾಣಿಗಳನ್ನು ನೋಡಿಕೊಳ್ಳುವುದಕ್ಕೆಂದೇ ಸರ್ಕಾರದಿಂದ ಸಂಬಳ ಪಡೆಯುವ ಸಿಬ್ಬಂದಿ ತಾಯಿ ಹಾಲು ಸಿಗದ ಹುಲಿ ಮರಿಗಳನ್ನು ಪೋಷಣೆ ಮಾಡಬೇಕಿತ್ತು. ಆದರೆ, ತಮ್ಮ ಜವಾಬ್ದಾರಿಯನ್ನು ಮರೆತು ಹುಲಿ ಮರಿಗಳನ್ನು ಪೋಷಣೆ ಮಾಡದೇ ಕೊಲೆ ಮಾಡಿದ್ದಾರೆ ಎಂಬ ಮಾತು ಸಾರ್ವಜನಿಕ ವಲಯದಿಂದ ಕೇಳಿಬರುತ್ತಿದೆ.

ಹಸಿವಿನಿಂದ ನರಳಿದ ಮರಿಗಳು ಸಾವನ್ನಪ್ಪಿದ ಬಳಿಕ ಇದೀಗ ಮೃಗಾಲಯದ ನಿರ್ವಹಣೆ, ವೈದ್ಯಕೀಯ ಗಮನ ಮತ್ತು ಸಿಬ್ಬಂದಿಯ ಕಾರ್ಯ ನಿರ್ವಹಣೆ ಬಗ್ಗೆ ಪ್ರಶ್ನೆ ಮಾಡಲಾಗುತ್ತಿದೆ. ಕೆಲವೇ ದಿನಗಳ ಹಿಂದೆ ಗರ್ಭಿಣಿ ಜೀಬ್ರಾ ಸಹ ನಿರ್ಲಕ್ಷ್ಯದಿಂದ ಸಾವನ್ನಪ್ಪಿದ್ದ ಹಿನ್ನೆಲೆಯಲ್ಲಿ, ವೈದ್ಯರ ಕೆಲಸದ ಮೇಲಿನ ಅನುಮಾನ ಮತ್ತಷ್ಟು ಗಂಭೀರವಾಗಿದೆ. ಬನ್ನೇರುಘಟ್ಟ ಜೈವಿಕ ಉದ್ಯಾನವನದ ಎಡಿಐ ಸೂರ್ಯ ಸೇನ್ ಅವರು ಈ ಹಿಂದೆ ಸರ್ಕಾರಕ್ಕೆ ಪತ್ರ ಬರೆದು, ಇಲ್ಲಿನ ವೈದ್ಯರು ಅನುಭವವಿಲ್ಲದವರಾಗಿದ್ದು, ಹೊಸ ಅನುಭವಿ ವೈದ್ಯರನ್ನು ನೇಮಿಸುವಂತೆ ಮನವಿ ಮಾಡಿದ್ದರು. ಆದರೆ, ಸರ್ಕಾರದ ಅನುದಾನ ಮತ್ತು ಕಾಲಹರಣದಿಂದಾಗಿ ಇದೀಗ ಜೀವಹಾನಿ ಸಂಭವಿಸಿದೆ ಎಂಬುದು ವನ್ಯಜೀವಿ ಪ್ರಿಯರ ಆಕ್ರೋಶ ಹೆಚ್ಚಾಗಲು ಮತ್ತಷ್ಟು ಕಾರಣವಾಗಿದೆ. ಈ ಘಟನೆಯಿಂದಾಗಿ ಪ್ರಾಣಿ ಪ್ರಿಯರು ಮಾತ್ರವಲ್ಲ, ಸಾರ್ವಜನಿಕರು ಕೂಡ ಮೃಗಾಲಯದ ಕಾರ್ಯಪದ್ಧತಿಗಳಲ್ಲಿ ಸುಧಾರಣೆಯ ಅಗತ್ಯವಿದೆ ಎಂದು ತೀವ್ರವಾಗಿ ಒತ್ತಾಯಿಸುತ್ತಿದ್ದಾರೆ. ಜೀವಿಗಳಿಗೆ ಶ್ರದ್ಧಾಪೂರ್ವಕ ಆರೈಕೆ, ಸಮಯಪಾಲನೆ ಹಾಗೂ ಶಿಷ್ಟ ವಿಧಾನಗಳು ಅನುಸರಿಸುವುದು ಅತ್ಯವಶ್ಯಕ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ತಪ್ಪಿತಸ್ಥ ವೈದ್ಯರು ಹಾಗೂ ನಿರ್ಲಕ್ಷ್ಯವಹಿಸಿದ ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸಲು ಪರಿಸರ ಹಾಗೂ ಅರಣ್ಯ ಇಲಾಖೆ ತ್ವರಿತ ನಿರ್ಧಾರ ಕೈಗೊಳ್ಳಬೇಕು. ಈ ವಿಷಯದಲ್ಲಿ ಪ್ರಾಣಿಪ್ರಿಯರು ಸರ್ಕಾರಕ್ಕೆ ಎಚ್ಚರಿಸಬೇಕು. ☯

10 ☜

ನಿರ್ದೇಶರಾಗಿ ತಮ್ಮ ಕಚೇರಿಯನ್ನು ಸಿಗರೇಟ್ ಸೇದುವ ಕೇಂದ್ರ, ಮಾಡಿಕೊಂಡಿದ್ದರು. ಹುಲಿ ಕುರಿತು ಮಾಹಿತಿ ಕೇಳಿದರೆ ನನ್ನನ್ನು ಕೇಳಬೇಡಿ. ನನ್ನ ಅಧಿಕಾರ ಕಿತ್ತುಕೊಂಡಿದ್ಧಾರೆ ಎಂದು ನಗುತ್ತಲೇ ಅಸಹಾಯಕತೆ ತೋಡಿಕೊಳ್ಳೋರು. ಇನ್ನೊಬ್ಬ ಅಧಿಕಾರಿ ಇಲ್ಲಿಗೆ ಬಂದರು ಅಧಿಕಾರವಿಲ್ಲದ ಸನ್ನಿವೇಶ ನೋಡಿ ಮೂರೇ ತಿಂಗಳಿಗೆ ಮತ್ತೊಂದು ಹುದ್ದೆಗೆ ಹೋದರು. ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯನ್ನು ಈಗ ಅರಣ್ಯ ಸಂರಕ್ಷಣಾಧಿಕಾರಿ ದರ್ಜೆಗೆ ಇಳಿಸಿ ಮಹತ್ವವನ್ನು ಕಡಿಮೆ ಮಾಡಲಾಗಿದೆ. ಈಗ ನಿರ್ದೇಶಕರಾಗಿರುವವರಿಗೆ ಹಿಂದಿನ ಅಧಿಕಾರ ನೀಡುವ ಭರವಸೆ ನೀಡಿ ಪೋಸ್ಟಿಂಗ್ ಮಾಡಿದರೂ ಮೇಲಿನವರ ಲಾಬಿಯಿಂದ ಹಿಂದಿನ ರೀತಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ಸನ್ನಿವೇಶವೇ ನಿರ್ಮಾಣವಾಗಿದೆ.

ಬೇರೆ ರಾಜ್ಯಗಳಲ್ಲಿ ಹುಲಿ ಯೋಜನೆ ನಿರ್ದೇಶಕರ ಹುದ್ದೆಗೆ ಅದರದ್ದೇ ಕಾರ್ಯವ್ಯಾಪ್ತಿ, ಅಧಿಕಾರವಿದೆ. ಇಲ್ಲಿ ಪರಿಸ್ಥಿತಿ ವಿಭಿನ್ನ. ಹುಲಿ ಯೋಜನೆ ನಿರ್ದೇಶಕರನ್ನು ನೇಮಿಸಿ ಹೀಗೆ ಮಾಡಿದರೆ ಏನು ಹೇಳೋದು ಎಂದು ಹಿರಿಯ ಅಧಿಕಾರಿಯೊಬ್ಬರು ಬೇಸರದಿಂದಲೇ ಪ್ರಶ್ನಿಸುತ್ತಾರೆ.

ಹುಲಿ, ಆನೆಗಳು ಹೆಚ್ಚಿರುವ ಪ್ರದೇಶದಲ್ಲಿ ಸಂಘರ್ಷದ ಪ್ರಮಾಣ ಹೆಚ್ಚಿದ್ದರಿಂದ ಪರಿಸ್ಥಿತಿ ನಿಯಂತ್ರಣಕ್ಕೆಂದು ಮೈಸೂರು ಜಿಲ್ಲೆಯ ಎಚ್ ಡಿಕೋಟೆಯಲ್ಲಿ ವಿಶೇಷ ಕಾರ್ಯಪಡೆ ರೂಪಿಸಲಾಯಿತು. ಬಂಡೀಪುರ, ನಾಗರಹೊಳೆ ಸಹಿತ ಈ ಭಾಗದಲ್ಲಿ ಏನೇ ಅರಣ್ಯ ಸಂಘರ್ಷದ ಚಟುವಟಿಕೆ, ಕಾನೂನು ಸುವ್ಯವಸ್ಥೆ ಸನ್ನಿವೇಶ ಇದ್ದರೆ ಕಾರ್ಯಪಡೆ ಅಧಿಕಾರಿ. ಸಿಬ್ಬಂದಿ ಸ್ಥಳಕ್ಕೆ ಧಾವಿಸುತ್ತಿದ್ದರು. ಒಂದು ದಶಕದಿಂದ ಎಸಿಎಫ್ ದರ್ಜೆ ಅಧಿಕಾರಿ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಇಲಾಖೆ ಕೆಲ ಹಿರಿಯ ಅಧಿಕಾರಿಗಳಿಗೆ ಇದು ಬೇಡವಾಯಿತು. ಸಿಬ್ಬಂದಿಯನ್ನು ತಮ್ಮ ಕಚೇರಿಗಳಿಗೆ ನಿಯೋಜಿಸಿಕೊಂಡರು. ವಾಹನಗಳು ಕೆಲವು ಅಧಿಕಾರಿಗಳ ಸ್ವಂತಬಳಕೆಗೆ ನಿಯೋಜನೆಗೊಂಡಿವೆ. 136 ಮಂದಿ ಇದ್ದ ಹುದ್ದೆಗಳಲ್ಲಿ ಈಗ 30 ಮಂದಿಯೂ ಇಲ್ಲ. ಮುಖ್ಯವಾಗಿ ಹುಲಿ ದಾಳಿಯಂತಹ ಸನ್ನಿವೇಶ ನಿಯಂತ್ರಿಸಲು ರೂಪಿಸಿದ ಘಟಕ ನಿತ್ರಾಣಗೊಂಡಿದೆ.

ಅರಣ್ಯ ಇಲಾಖೆಯಲ್ಲಿ ಗಾರ್ಡ್ ಸಹಿತ ಕೆಳ ಹಂತದ ಸಿಬ್ಬಂದಿಗಳಿಲ್ಲ ಎನ್ನುವ ಸಬೂಬನ್ನು ಅಧಿಕಾರಿಗಳು ನೀಡುತ್ತಾರೆ. ಆದರೆ ಬಹುತೇಕ ಸಿಬ್ಬಂದಿಗಳು ಈಗ ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಸೇವಕರಂತೆ ಕೆಲಸ ಮಾಡುವ ಸನ್ನಿವೇಶ ನಿರ್ಮಾಣವಾಗಿದೆ. ಪ್ರಚಾರ ಹಾಗೂ ಮಾಹಿತಿ ತಂತ್ರಜ್ಞಾನ (ಐಸಿಟಿ) ವಿಭಾಗಕ್ಕೆ ನಿಯೋಜಿಸಲಾಗಿದೆ. ಅರಣ್ಯ ಇಲಾಖೆಯಲ್ಲಿ ವಿಶೇಷ ಸೇವೆ, ಸ್ಟ್ರೈಕ್ ಫೋರ್ಸ್ ಎನ್ನುವ ಹೆಸರು ನೀಡಿ ಅವರನ್ನು ನಗರಗಳಿಗೆ ನಿಯೋಜಿಸಿ ಕೆಳ ಹಂತದಲ್ಲಿ ಕೆಲಸ ಮಾಡುವ ಸಿಬ್ಬಂದಿ ಇಲ್ಲದಂತೆ ಮಾಡಲಾಗಿದೆ. ಇದರಿಂದ ಅರಣ್ಯ ಇಲಾಖೆಗೆ ಬಿಳಿಯಾನೆಗಳನ್ನು ಸೃಷ್ಟಿಸಿ ಕೆಳ ಹಂತದ ಕಾಲಾಳುಗಳೇ ಇಲ್ಲದಂತೆ ಮಾಡುವ ಪ್ರಯತ್ನಗಳು ಎಗ್ಗಿಲ್ಲದೇ ನಡೆದಿವೆ. ಇದನ್ನು ಕೇಳಬೇಕಾದ ಹಿರಿಯ ಅಧಿಕಾರಿಗಳು ವೈರಾಗ್ಯದ ಹಂತಕ್ಕೆ ಬಂದಿದ್ದಾರೆ ಎನ್ನುವ ಮಾತುಗಳು ಅರಣ್ಯ ಇಲಾಖೆಯಲ್ಲಿ ಕೇಳಿ ಬರುತ್ತಿವೆ.

ಹಿಂದೆ ಎ.ಸಿ.ಲಕ್ಷ್ಮಣ, ಯಲ್ಲಪ್ಪರೆಡ್ಡಿ, ಬಿ.ಕೆ. ಸಿಂಗ್ ರಂತಹ ದಕ್ಷ ಅಧಿಕಾರಿಗಳಿದ್ದರು. ಖಾಕಿ ಡ್ರೆಸ್ ಹಾಕಿಕೊಂಡೇ ಕ್ಷೇತ್ರ ಕಾರ್ಯಕ್ಕೆ ಬರೋರು. ಕಾಡಲ್ಲಿ ನಡೆದುಕೊಂಡೇ ಹೋಗೋರು. ಹುಲಿ ಸತ್ತರೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಖುದ್ದು ಬರೋರು. ಇದರಿಂದ ಎಲ್ಲಾ ಹಂತದ ಅಧಿಕಾರಿಗಳು, ಸಿಬ್ಬಂದಿಗಳಲ್ಲಿ ಒಂದು ರೀತಿಯ ಭಯವಿತ್ತು. ಕೆಲಸವೂ ಆಗೋದು. ಈಗ ಎಲ್ಲವೂ ಅಯೋಮಯ. ಕರ್ನಾಟಕದಲ್ಲಿ ಐದು ಹುಲಿ ಸತ್ತರೂ ಹುಲಿ ಯೋಜನೆ ನಿರ್ದೇಶಕರಿಗೆ ಇದು ಬೇಕಿಲ್ಲ. ಅವರಿಗೆ ಸರ್ಕಾರ ರಜೆ ನೀಡಿದೆ. ವನ್ಯಜೀವಿ ಮುಖ್ಯ ಪರಿಪಾಲಕರಿಗೆ ಮೂರೂವರೆ ದಶಕ ಅರಣ್ಯ ಇಲಾಖೆಯಲ್ಲಿ ಉಂಡೆದ್ದ ಹಿರಿಯ ಅಧಿಕಾರಿಗೆ ಹುಲಿ ಮೃತಪಟ್ಟ ಸ್ಥಳಕ್ಕೆ ಬರಲು ಸಮಯವೇ ಇಲ್ಲ. ನಿವೃತ್ತಿ ಇರುವ ಕಾರಣದಿಂದ ಈಗ ಬೀಳ್ಕೊಡುಗೆ ಪಡೆಯುವ ಸಮಯ. ಇದು ಈಗಿನ ಸನ್ನಿವೇಶ.


ಕರ್ನಾಟಕದಲ್ಲಿ ಕೆ.ಎಚ್‌ಯ ಪಾಟೀಲ್. ಕೆ.ಎಚ್.ರಂಗನಾಥ್, ಎಚ್. ವಿಶ್ವನಾಥ್, ಸಿ.ಎಚ್.ವಿಜಯಶಂಕರ್, ರಮಾನಾಥ ರೈ ಅವರಂತವರು ಅರಣ್ಯ ಸಚಿವರಾಗಿ ಇಲಾಖೆ ಮೇಲೆ ಹಿಡಿತ ಹೊಂದಿದ್ದರು. ಕೆಲಸ ಕೂಡ ಮಾಡಿದವರು. ಪ್ರಾಮಾಣಿಕತೆ ಜತೆಗೆ ತುರ್ತಾಗಿ ಪ್ರತಿಕ್ರಿಯಿಸಿರುವ ಈಗಿನ ಅರಣ್ಯ ಸಚಿವ ಈಶ್ವರ ಖಂಡ್ರೆ, ಸಕ್ರಿಯ ಸಚಿವ. ಅವರ ಇರುವಿಕೆ ಪರಿಣಾಮಕಾರಿಯಾಗಿದ್ದರೂ ಇಲಾಖೆಯಲ್ಲಿ ದಕ್ಷತೆ, ವೃತ್ತಿಪರತೆ, ಅಧಿಕಾರಿಗಳು ಹಾಗೂ ಸಿಬ್ಬಂದಿಯಲ್ಲಿ ಆಡಳಿತ ಭಯವನ್ನೂ ತರುವಲ್ಲಿ ಸಚಿವರ ಪ್ರಯತ್ನ ಪರಿಣಾಮಕಾರಿಯಾಗಿಲ್ಲ. ಹುಲಿ ನಿರ್ವಹಣೆ ಚಟುವಟಿಕೆಗಳು, ಕಾರ್ಯಪಡೆಗಳಿಗೆ ದಕ್ಷತೆ ತುಂಬಿ, ಕೆಳ ಹಂತದ ಸಿಬ್ಬಂದಿಗಳ ನಿಯೋಜನೆಯಲ್ಲಿ ಆಗುತ್ತಿರುವ ಅವ್ಯವಸ್ಥೆಯನ್ನು ಸರಿಪಡಿಸಿದರೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ರಾಜ್ಯದ ಜನತೆ ಚಿರಕಾಲ ಸ್ಮರಿಸಲಿದೆ! ☯

9 ☞

ಬೆಂಗಳೂರು ಸೆಂಟ್ರಲ್ ಜೈಲಿನಲ್ಲೇ ಹತ್ತಿರತ್ತಿರ ಐದು ಸಾವಿರ ಖೈದಿಗಳಿದ್ದಾರೆ! ದಿನೇ ದಿನೆ ಬಿಡುಗಡೆ ಆಗುವವರಿಗಿಂತ ಜೈಲಿಗೆ ಪ್ರವೇಶಿಸುವ ಆರೋಪಿಗಳ ಸಂಖ್ಯೆಯೇ ಅಧಿಕವಾಗುತ್ತಿದೆ. ನಿಗಧಿಗಿಂತ ಜೈಲಿನಲ್ಲಿ ಒಂದು ಸಾವಿರ ಮಂದಿ ಹೆಚ್ಚಾಗಿದ್ದು, ಬಂಧಿಗಳ ಅಕ್ರಮ ಚಟುವಟಿಕೆ ಮೇಲೆ ಕಣ್ಣಿಡುವುದು ಅಧಿಕಾರಿ ಹಾಗೂ ಸಿಬ್ಬಂದಿಗೆ ಕಷ್ಟವಾಗುತ್ತಿದೆ. ಹೀಗಾಗಿ, ಸರ್ಕಾರ ಆದೇಶದಂತೆ ಸಜಾ ಬಂಧಿ, ವಿಚಾರಣಾಧೀನ ಹಾಗೂ ಮಹಿಳಾ ಕೈದಿ ಎಂಬಂತೆ ಮೂರು ವಿಭಾಗ ಗಳಾಗಿ ವಿಂಗಡಣೆ ಮಾಡಲಾಗುತ್ತಿದೆ.



40 ಎಕರೆ ಪ್ರದೇಶವನ್ನು ಒಳಗೊಂಡಿರುವ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ 1,068 ಸಜಾ ಬಂಧಿ, 3,926 ವಿಚಾರಣಾಧೀನ ಹಾಗೂ 205 ಮಹಿಳಾ ಬಂಧಿ ಸೇರಿ ಒಟ್ಟು 4,994 ಮಂದಿ ಖೈದಿಗಳಿದ್ದಾರೆ. ಭಯೋತ್ಪಾದನೆ ಸೇರಿದಂತೆ ಘೋರ ಅಪರಾಧ ಕೃತ್ಯ ಎಸಗಿರುವವರಿಗಾಗಿ ಪ್ರತ್ಯೇಕ ಹೈ ಸೆಕ್ಯೂರಿಟಿ ಕಾರಾಗೃಹವನ್ನು ಸೆಂಟ್ರಲ್ ಜೈಲಿನ ಪಕ್ಕದಲ್ಲಿ ನಿರ್ಮಿಸಲಾಗುತ್ತಿದೆ. ಮತ್ತೊಂದೆಡೆ, ಪ್ರಸ್ತಾಪಿಸಲಾಗಿರುವ ಶಿಕ್ಷಾ ಬಂಧಿ, ವಿಚಾರಣಾಧೀನ ಹಾಗೂ ಮಹಿಳಾ ಬಂಧಿಗಳನ್ನು ಪ್ರತ್ಯೇಕವಾಗಿ ಇರಿಸಲಾಗುತ್ತಿದೆ. ಇದಕ್ಕಾಗಿ ಕೈದಿಗಳ ನಡುವೆ ತಡೆಗೋಡೆ ನಿರ್ಮಾಣಕ್ಕಾಗಿ ಸರ್ಕಾರ 70 ಲಕ್ಷ ರೂ. ಅನುದಾನ ಮಂಜೂರು ಮಾಡಿದೆ. ಈಗ ಇರುವ ಜೈಲು ಮೂರು ಹೋಳಾಗಿ ವಿಭಜನೆ ಆಗುವುದರಿಂದ ಅಧಿಕಾರಿ ಹಾಗೂ ಸಿಬ್ಬಂದಿಯೂ ಸಹ ಪ್ರತ್ಯೇಕವಾಗಲಿದ್ದಾರೆ. ಇದು ಜೈಲಿನ ಭದ್ರತೆ ಜೊತೆಗೆ ಪಾರದರ್ಶಕತೆಗೆ ಮುನ್ನುಡಿಯಾಗಲಿದೆ. ಪ್ರತ್ಯೇಕ ಮೂರು ವಿಭಾಗವಾದರೆ




ವಿಚಾರಣಾಧೀನ ಕೈದಿಗಳ ವಿಭಾಗಕ್ಕೆ ಮುಖ್ಯ ಅಧೀಕ್ಷಕ, ಖೈದಿ ಹಾಗೂ ಮಹಿಳಾ ಖೈದಿ ವಿಭಾಗಗಳಿಗೆ ಎಸ್ಪಿ ದರ್ಜೆ ಅಧೀಕ್ಷರು ಮುಖ್ಯಸ್ಥರಾಗಲಿದ್ದಾರೆ. ಈ ಮೂರು ವಿಭಾಗಗಳ ಉಸ್ತುವಾರಿಯನ್ನು ಡಿಐಜಿ ವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಹಣ ನೀಡಿದರೆ ಐಷಾರಾಮಿ ಜೀವನ!**

ಹಣ ನೀಡಿದರೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಬೇಕಾದ ವಸ್ತುಗಳು ಹಾಗೂ ಐಷಾರಾಮಿ ಸೌಲಭ್ಯಗಳು ಸಿಗಲಿವೆ ಎಂಬ ಆರೋಪಗಳೂ ಕೇಳಿಬರುತ್ತಿವೆ. ಜೈಲಿನಲ್ಲಿ ಬಹುತೇಕ 5 ಸಾವಿರ ಖೈದಿಗಳಿದ್ದಾರೆ. ಇವರ ಮೇಲೆ ಹದ್ದಿನ ಕಣ್ಣಿಡಬೇಕಾಗಿರುವ ಅಧಿಕಾರಿ ಹಾಗೂ ಸಿಬ್ಬಂದಿಯ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದು, ಇದು ಕೂಡ ಅಕ್ರಮಕ್ಕೆ ದಾರಿಯಾಗುತ್ತಿದೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ಸರ್ಕಾರದಿಂದ ಸುಮಾರು 800 ಹುದ್ದೆಗಳು ಮಂಜೂರಾಗಿದ್ದ ಪೈಕಿ 400 ಮಂದಿ ಮಾತ್ರ ಸಿಬ್ಬಂದಿಗಳಿದ್ದಾರೆ!

ಪರಪ್ಪನ ಅಗ್ರಹಾರ ಜೈಲಿನಲ್ಲಿ ಇತ್ತೀಚೆಗೆ ಆನೇಕಲ್ ಲೋಕೇಶ್ ಮತ್ತು ಮನೋಜ್ ಇಬ್ಬರು ಖೈದಿಗಳ ನಡುವೆ ಹೊಡೆದಾಟ ನಡೆದಿತ್ತು. ಆದರೆ ಜೈಲು ಮುಖ್ಯ ಅಧೀಕ್ಷಕ ಸುರೇಶ್ ಆನೇಕಲ್ ರೌಡಿ ಶೀಟರ್ ಮನೋಜ್‌ನಿಂದ ಹಣ ಪಡೆದುಕೊಂಡು ದೂರು ದಾಖಲಾಗದಂತೆ ನೋಡಿಕೊಂಡರೆಂಬ ಆಪಾದನೆಗಳು ಬಂದಿದ್ದವು.

**ಜೈಲು ದುಡ್ಡಿದ್ದವರಿಗೆ ಸ್ವರ್ಗ...**
**ಕಾಸಿಲ್ಲದವರಿಗೆ ನರಕ...**

ವಿಐಪಿ ಸೆಲ್‌ಗಳನ್ನು ಮಾಸಿಕ ಬಾಡಿಗೆಗೆ ಬಿಡಲಾಗಿದೆ ಎಂಬ ಸುದ್ದಿ ಹರಿದಾಡುತ್ತಿವೆ. ಪ್ರತಿ ಬ್ಯಾರಕ್ಕಿಗೂ ವಿಚಾರಾಣಾಧೀನ ಖೈದಿಗಳು ವಾರಕ್ಕೆ ಇಂತಿಷ್ಟು ಸಾವಿರ ದುಡ್ಡು ಕೊಡಲೇಬೇಕೆಂದು ತಾಕೀತು ಮಾಡಲಾಗಿದೆಯಂತೆ! ಲೂಟಿ ಅವ್ಯಾಹತವಾಗಿ ಸಾಗಿದೆ. ಜೈಲು ಸವೆಸಲು ಕ್ರಿಮಿನಲ್‌ಗಳು ಒಳಗಿನಿಂದಲೇ ದುಡ್ಡಿಗಾಗಿ ಮತ್ತಷ್ಟು ಕ್ರೈಂ ಮಾಡುವ ಅನಿವಾರ್ಯತೆ ಸೃಷ್ಠಿಸಲಾಗುತ್ತಿದೆ! ಈಗಾಗಲೇ ಎರಡು ಸಂಖ್ಯೆಯ ಬ್ಯಾಗೇಜ್ ಸ್ಕ್ಯಾನರ್‌ಗಳ ಸಿಸ್ಟಂಗಳ ಮೂಲಕ ತಪಾಸಣೆ ಕಾರ್ಯ ನಡೆಸಲಾಗುತ್ತಿದೆ.

ಕಾರಾಗೃಹಕ್ಕೆ ಪ್ರವೇಶಿಸುವ ಎಲ್ಲಾ ವಾಹನಗಳನ್ನು ಮುಖ್ಯದ್ವಾರದಲ್ಲಿ ನಿಲ್ಲಿಸಿ ಎಲ್ಲಾ ಆಹಾರ ಮತ್ತು ಇನ್ನಿತರೆ ವಸ್ತುಗಳನ್ನು ಸ್ಕ್ಯಾನ್ ಮಾಡಿದ ನಂತರ ಒಳಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದ್ದರೂ, ಗಾಂಜಾ ಮೊಬೈಲ್, ಆಶಿಸ್ ಆಯಿಲ್ ಡ್ರಗ್ಸ್, ಎಂಡಿಎಂ ಮಾತ್ರೆಗಳು ಒಳ ಬರುತ್ತವೆ! ಮೊಬೈಲ್ ಫೋನ್ ಬಳಸುವುದನ್ನು ತಡೆಯುವ ಸಲುವಾಗಿ ಅಳವಡಿಸಲಾಗಿರುವ ಅತ್ಯಾಧುನಿಕ ಸ್ಥಾವರಗಳು 19 ಸಂಖ್ಯೆ ಮೊಬೈಲ್ ಜಾಮರ್‌ಗಳು ಇದ್ದರೂ ನೆಟ್‌ವರ್ಕ್ ಗೇನೂ ಕೊರತೆಯಿಲ್ಲ! ಅಳವಡಿಸಿರುವ 280 ಸಂಖ್ಯೆ ಸಿಸಿಟಿವಿ ಕ್ಯಾಮರಾಗಳಿಗೆ ಅತ್ಯಾಧುನಿಕ ಎಐ ಆಡಿಯೋ ವೀಡಿಯೋಸ್ ಕಣ್ಗಾವಲು ವ್ಯವಸ್ಥೆ ಇದ್ದರೂ ಟೆರರಿಸ್ಟ್ ರಾಜ್ಯಭಾರ ನಡೆಯುತ್ತಿದೆ.

ಬೆಂಗಳೂರು ಕೇಂದ್ರ ಕಾರಾಗೃಹದ ಭದ್ರತೆಗೆ ಸಂಬಂಧಿಸಿದಂತೆ ಆಂತರಿಕ ಭದ್ರತಾ ಇಲಾಖೆ ಹಾಗೂ ಸ್ಥಳೀಯ ಭದ್ರತಾ ವಿಭಾಗಗಳು ಹಾಗಾದರೆ ಏನು ಮಾಡುತ್ತಿವೆ? ಜೈಲಿನೊಳಗೆ ಮೊಬೈಲ್ ಸೇರಿ ಇತರೆ ನಿಷೇಧಿತ ವಸ್ತುಗಳನ್ನು ಕೊಂಡೊಯ್ಯಲು ಭದ್ರತೆಗೆ ನಿಯೋಜಿಸಲ್ಪಟ್ಟ ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಎಲ್ಲಾ ಅಕ್ರಮಗಳಿಗೂ ಸಹಕಾರ ನೀಡುತ್ತಿರುವುದು, ಮೇಲ್ನೋಟಕ್ಕೆ ಕಂಡು ಬಂದಿದೆ. ಜೈಲಿನ ಮುಖ್ಯ ಅಧೀಕ್ಷಕರಿಂದ ಹಿಡಿದು ಸೂಪರಿಂಟೆಂಡೆಂಟ್‌ಗಳು, ವಾರ್ಡನ್‌ಗಳು ಈ ಅಕ್ರಮಗಳಲ್ಲಿ ಶಾಮೀಲಾಗಿರುವ ಅನುಮಾನವಿದೆ. ಜೈಲಿನಲ್ಲಿ ನಿಷೇಧಿತ ವಸ್ತುಗಳ ಬಳಕೆಗೆ ಜೈಲು ಅಧಿಕಾರಿಗಳು ಅವಕಾಶ ಕಲ್ಪಿಸಿರುವುದು ಕಾನೂನುಬಾಹಿರವಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಆದರೆ ಕರ್ತವ್ಯಲೋಪ ಎಸಗಿರುವ ಅಧಿಕಾರಿಗಳಿಗೂ ಬಿಸಿ ಮುಟ್ಟಿಸಿ ಸಿಬ್ಬಂದಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕು ಇಲ್ಲವೇ ತನಿಖೆ ನಡೆಸಿ ಎತ್ತಂಗಡಿ ಶಿಕ್ಷೆ ನೀಡಬೇಕು. ಪರಪ್ಪನ ಅಗ್ರಹಾರ ಜೈಲಿಗೆ ಪ್ರಾಮಾಣಿಕ ದಕ್ಷ ಅಧಿಕಾರಿಗಳನ್ನು ನೇಮಕ ಮಾಡಬೇಕು. ಆಗಲೇ ಈ ಪರಪ್ಪನ ಅಗ್ರಹಾರ ಜೈಲು ಸುಧಾರಣೆಯಾಗಲು ಸಾಧ್ಯ.



ಕಲಬುರ್ಗಿ ಜೈಲಿನಲ್ಲಿ ತಪಾಸಣೆ ಸಂದರ್ಭ

ಇನ್ನೊಂದು ಗಮನಿಯ ಸಂಗತಿ ಏನೆಂದರೆ, ಕೊಲೆ ಆರೋಪಿ ದರ್ಶನ್‌ಗೆ ರಾಜಾತಿಥ್ಯ ನೀಡಿ ಬೆಂಗಳೂರಿನ ಪರಪ್ಪನ ಅಗ್ರಹಾರದ ಜೈಲು ದೊಡ್ಡ ಮೊಟ್ಟದಲ್ಲಿ ಸುದ್ದಿಯಾಗಿತ್ತು. ನಂತರ ಕಲಬುರಗಿಯ ಕೇಂದ್ರ ಕಾರಾಗೃಹದಿಂದ ವೈರಲ್ ಆಗಿರುವ ವಿಡಿಯೋ ಹಾಗೂ ಫೋಟೋಗಳು ಬೆಚ್ಚಿ ಬೀಳುವಂತಿದ್ದದ್ದು ಇಡೀ ಪ್ರಪಂಚಕ್ಕೆ ಗೊತ್ತಿದೆ. ಈ ಮೂಲಕ ದುಡ್ಡು ಕೊಟ್ಟರೆ ಜೈಲು ಕೂಡ ಅರಮನೆ ಆಗುತ್ತೆ ಅನ್ನೋದು ಪ್ರೂವ್ ಆಗಿತ್ತು. ಜೈಲಿನಲ್ಲಿ ಏನಿದೆ? ಏನಿರಲ್ಲ... ಅಲ್ಲಿ ಎಲ್ಲವೂ ಸಿಗುತ್ತೆ. ಹೇಳೋಕೆ ಅಷ್ಟೇ ಅದು ಜೈಲು, ಸೆರೆವಾಸ! ಆದರೆ ಅಲ್ಲಿ ನಡೆಯುತ್ತಿರೋದೇ ಬೇರೆ!! ಕಳೆದ ವರ್ಷ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಐಷಾರಾಮಿ ಬಿಂದಾಸ್ ಲೈಫ್‌ಗೆ ಸಂಬಂಧಿಸಿದ ಫೋಟೋ ಹಾಗೂ ವಿಡಿಯೋಗಳು ವೈರಲ್ ಆಗಿದ್ದವು.




ಕಾರಾಗೃಹದ ಒಳಗೆ ಸಿಗರೇಟ್, ಬೀದಿ, ತಂಬಾಕು, ರಾಶಿ ರಾಶಿ ಗುಟ್ಕಾ ಪ್ಯಾಕೆಟ್‌ಗಳು ರಾಶಿ ರಾಶಿ ಗುಟ್ಕಾ ಪ್ಯಾಕೆಟ್‌ಗಳು ರಾಶಿ ರಾಶಿ ಗುಡ್ಡೆ ಹಾಕಿದ್ದವು. ಅಷ್ಟೇ ಅಲ್ಲ ಮೊಬೈಲ್, ಸಿಗರೇಟ್, ಎಣ್ಣೆ ಎಲ್ಲವೂ ಕೈದಿಗಳಿಗೆ ಸಿಗುತ್ತಿದ್ದು, ಅದಕ್ಕೆ ಸಂಬಂಧಿಸಿದ ವಿಡಿಯೋಗಳು ಹರಿದಾಡಿದ್ದವು. ಮತ್ತೊಂದೆಡೆ ಕೈದಿಗಳಿಬ್ಬರು ಹಣ ಮುಂದಿಟ್ಟುಕೊಂಡು ಜೈಲು ಮುಖ್ಯ ಅಧೀಕ್ಷಕಿ ಡಾ. ಅನಿತಾ ಮೇಡಂಗೆ ದುಡ್ಡು ಕೊಡೋದಿದೆ ಎಂದಿದ್ದ ವಿಡಿಯೋ ವೈರಲ್ ಆಗಿತ್ತು!

ಈ ವೇಳೆ ಸುರೇಶ್ ಎಂಬಾತನ ಮೂಲಕ ಡೀಲ್ ಕುದುರಿಸಿಕೊಳ್ಳಲು ಮತ್ತೊಬ್ಬ ಖೈದಿ ಸಲಹೆ ನೀಡಿದ್ದಾನೆ. ಈ ಮೂಲಕ 35 ಸಾವಿರ ರೂಪಾಯಿ ಹಣವನ್ನು ಜೈಲು ಅಧಿಕಾರಿಗೆ ನೀಡಲು ಕೈದಿಗಳ ಮಧ್ಯೆ ಮಾತುಕತೆ ನಡೆದಿತ್ತು. ಇದೆಲ್ಲ ಖೈದಿಗಳ ಮೂಲಕವೇ ಹೊರಗಡೆ ಹೋಗಿ, ಭಾರಿ ವೈರಲ್ ಆಗಿ ರಾಜ್ಯದಲ್ಲೇ ದೊಡ್ಡ ಸುದ್ದಿಯಾಗಿತ್ತು! ಈ ವಿಚಾರಗಳು ಗೃಹ ಇಲಾಖೆಯ ಹಿರಿಯ ಅಧಿಕಾರಿಗಳಿಗೆ, ರಾಜ್ಯ ಸರ್ಕಾರಕ್ಕೆ ಗೊತ್ತಿಲ್ವಾ? ಅಥವಾ ಗೊತ್ತಿದ್ದೂ ಸುಮ್ಮನೆ ಕೂತಿದ್ದಾರಾ? ಇದಕ್ಕೆಲ್ಲ ಬ್ರೇಕ್ ಬೀಳೋದು ಯಾವಾಗ??

ಅಂದಹಾಗೆ; ಬೆಳಘಾವಿ ಜೈಲಿನಿಂದ 'ನಾಗೇಂದ್ರ' ಎಂಬ ಸಜಾ ಖೈದಿ ಮುಖ್ಯಮಂತ್ರಿ, ಗೃಹಮಂತ್ರಿ, ಎಸ್‌ಐಟಿ ಚೀಫ್ ಮುಂತಾದವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಒಳಗೆ ನಡೆದಿತ್ತು ಎನ್ನಲಾದ 'ಬಿಟ್ ಕಾಯಿನ್' ಲೂಟಿಯ ಬಗ್ಗೆ ಒಂದು ಪತ್ರ ಬರೆದಿದ್ದ! ಅದರ ತನಿಖೆ ಏನಾಯ್ತು?! ☯

## ಕಡು ಭ್ರಷ್ಟ ಇಲಾಖೆಗೆ ಸವಲತ್ತು ಬೇರೆ ಕೇಡು....

ಬೆಂಗಳೂರಿನ ಗಾಂಧಿನಗರದಲ್ಲಿ ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ಹಳೇ ಕಟ್ಟಡವಿದೆ.ಮತ್ತು ಚನ್ನಾಗಿಯೂ ಇದೆ. ಅದು ಸಾಲದು ಅಂತ ಈಗ ಅಕಾಡೆಮಿ.... ಅಂತ ಕೋಟ್ಯಂತರ ರೂ. ವಿನಿಯೋಗಿಸಿ ಇನ್ನೊಂದು ಹೊಸ ಕಟ್ಟಡ ನಿರ್ಮಿಸಲಾಗಿದೆ!

ಪರಪ್ಪನ ಅಗ್ರಹಾರದಲ್ಲಿ ಕೇಂದ್ರ ಕಾರಾಗೃಹ ಇದೆಯಲ್ಲ, ಅದರ ಆವರಣದಲ್ಲಿ ಕಾರಾಗೃಹಗಳಲ್ಲಿ ಕರ್ತವ್ಯ(?)ನಿಭಾಯಿಸುತ್ತಿರುವ ಸಿಬ್ಬಂದಿಗಳಿಗೆ ಅಂತ 128 ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಇವೆರಡರ ಉದ್ಘಾಟನೆ ಕಾರ್ಯ ಕಳೆದ ಮಂಗಳವಾರ ನೆರವೇರಿದೆ. ಇದು ಸಾಲದು ಅಂತ ಕಾರಾಗೃಹ ಪ್ರಧಾನ ಕಚೇರಿಯ ಪಕ್ಕದಲ್ಲೇ ಅನೆಕ್ಸ್ ಬಿಲ್ಡಿಂಗ್ ನಿರ್ಮಾಣದ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಲಾಗಿದೆ!! ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಸದರಿ ಶಂಕು ಸ್ಥಾಪನ ಕಾರ್ಯ ನೆರವೇರಿಸಿದ್ದಾರೆ. ಈ ಸಂದರ್ಭದಲ್ಲಿ ಗೃಹ ಸಚಿವ ಡಾ.ಜಿಪರಮೇಶ್ವರ್, ಕರ್ನಾಟಕ ರಾಜ್ಯ ಕಾರಾಗೃಹಗಳ ಮಹಾ ಅಧೀಕ್ಷಕರಾದ ಶ್ರೀಮತಿ ಮಾಲಿನಿ ಕೃಷ್ಣಮೂರ್ತಿ ಉಪಸ್ಥಿತರಿದ್ದರು ಎಂಬುದು ಬ್ರೇಕಿಂಗ್ ನ್ಯೂಸ್ ಏನಲ್ಲ! ಜನರ ತೆರಿಗೆ ಹಣದಲ್ಲಿ

ಭ್ರಷ್ಟ ಇಲಾಖೆಗೆ ಇಷ್ಟೆಲ್ಲ ಸವಲತ್ತು ಮಾಡಿಕೊಡ್ತಾ ಇದೆಯಲ್ಲ ಸರ್ಕಾರ,ಇದರಿಂದ ಯಾರಿಗೆ ಉಪಯೋಗ? ಖೈದಿಗಳ ಪಾಡಂತು ಅಯೋಮಯ. ಅಲ್ಲಿ ದುಡ್ಡಿದ್ದವನು ಮಾತ್ರ ರಾಜ. ಇಲ್ಲದವನು ಬೇವರ್ಸಿ! ತಪ್ಪು ಮಾಡಿ ಜೈಲಿಗೆ ಹೋದವರ ಮನ ಪರಿವರ್ತನೆ ಮಾಡುವ ಬದಲು, ಅಲ್ಲಿ ಇನ್ನಷ್ಟು ಕ್ರೈಂ ತರಭೇತಿ ಸಿಗ್ತಾ ಇದೆ! ಇದು ಮಾನ್ಯ ಗೃಹ ಸಚಿವರಿಗಾಗಲಿ ಮಾನ್ಯ ಮುಖ್ಯಮಂತ್ರಿ ಗಳಿಗಾಗಲಿ ಗೊತ್ತಿದೆಯಾ??! ☯



ಹೊಸ ಜೈಲು ಕಟ್ಟಡ, ಸಿಬ್ಬಂದಿ ಕ್ವಾರ್ಟರ್ಸ್ ಉದ್ಘಾಟನಾ ಸಮಾರಂಭದಲ್ಲಿ

# ಪೊಲೀಸ್ ಠಾಣೆಗಳು ಜನಸ್ನೇಹಿಯಾಗಿ ಕಾರ್ಯ ನಿರ್ವಹಿಸಬೇಕು - ಸಿದ್ದರಾಮಯ್ಯ

ಇತ್ತೀಚೆಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಪ್ರಧಾನ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ಮತ್ತು ಪೊಲೀಸ್ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಿಎಂ ಸಿದ್ದರಾಮಯ್ಯ ಸಭೆಯಲ್ಲಿ ಭಾಗವಹಿಸಿ, ಪೊಲೀಸ್ ಅಧಿಕಾರಿಗಳಿಗೆ ಹಿತವಚನ ಹೇಳಿ, ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಮುಖ್ಯಮಂತ್ರಿಗಳು ಮಾತನಾಡುತ್ತ, ಕಳೆದ ಒಂದು ವರ್ಷದ ಪೊಲೀಸ್ ಇಲಾಖೆಯ ಕಾರ್ಯಕ್ಷಮತೆಯ ಮೌಲ್ಯಮಾಪನ, ಇಲಾಖೆಯ ಬೇಡಿಕೆಗಳು, ಸರ್ಕಾರದ ನೆರವಿನ ಸಭೆಯಲ್ಲಿ ಚರ್ಚೆ ನಡೆದಿದೆ. ಅದೇ ರೀತಿ ರಾಜ್ಯದಲ್ಲಿ ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸಲು ಹಲವಾರು ಸೂಚನೆಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

**ವ್ಯವಸ್ಥೆಯನ್ನು ದೂಷಿಸುತ್ತ ಕೂರಬೇಡಿ**

ನಾವು ವ್ಯವಸ್ಥೆಯನ್ನು ದೂಷಿಸಿಕೊಂಡು ಕೈ ಕಟ್ಟಿಕೊಂಡು ಕೂರೋದಲ್ಲ, ಪೊಲೀಸ್ ಠಾಣೆಗಳು ಜನಸ್ನೇಹಿ ಆಗುವ ಜೊತೆಗೆ ಅಪರಾಧ ಮನಸ್ಥಿತಿಯವರಿಗೆ ಕಾನೂನಿನ ಬಗ್ಗೆ ಭಯ ಇರುವ ವಾತಾವರಣ ಸೃಷ್ಟಿಸಬೇಕು ಎಂಬ ಸೂಚನೆಗಳನ್ನು ಪೊಲೀಸ್ ಅಧಿಕಾರಿಗಳಿಗೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ರಾಜ್ಯದಲ್ಲಿ ಜನರ ಕಷ್ಟಸುಖ ಕೇಳುವುದು ಪೊಲೀಸ್ ಇಲಾಖೆಯ ಕರ್ತವ್ಯವಾಗಿದೆ. ಸಾರ್ವಜನಿಕರೊಂದಿಗೆ ಮುಕ್ತವಾಗಿ, ಸ್ನೇಹಮಯಿಗಳಾಗಿ ನಡೆದುಕೊಳ್ಳುವುದು ಪೊಲೀಸ್ ಇಲಾಖೆಯ ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಜವಾಬ್ದಾರಿ. ದೂರುಗಳನ್ನು ಮುಕ್ತವಾಗಿ ಆಲಿಸಿ. ಜನರು ಭಯಭೀತರಾಗುವಂತೆ ನಡೆದುಕೊಳ್ಳಬೇಡಿ. ಸಮಾಜದ ನೆಮ್ಮದಿ ಕಾಪಾಡಲು ಪೊಲೀಸ್ ಅಧಿಕಾರಿಗಳ ಕಾರ್ಯಕ್ಷಮತೆ ಬಹಳ ಮುಖ್ಯ ಎಂಬ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.



**ಅಪರಾಧಗಳ ಪ್ರಮಾಣ ಕಡಿಮೆ ಆಗಿದೆ**

ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಕೊಲೆ, ದರೋಡೆ, ಮನೆಗಳ್ಳತನ ಸೇರಿ ಇತರೆ ಅಪರಾಧಗಳು ಕಡಿಮೆ ಆಗಿರುವುದನ್ನು ಇಲಾಖೆ ಕೊಟ್ಟಿರುವ ಅಂಕಿ ಅಂಶಗಳಿಂದ ಗೊತ್ತಾಗಿದೆ. ಆದರೆ, ಆರೋಪ ಪಟ್ಟಿಯನ್ನು ಸೂಕ್ತ ಸಮಯಕ್ಕೆ ಸಲ್ಲಿಸುವ ಜೊತೆಗೆ FIR ಅನ್ನು ತಕ್ಷಣ ದಾಖಲಿಸಬೇಕು, ತನಿಖೆಯ ಗುಣಮಟ್ಟ ಹೆಚ್ಚಿಸಬೇಕು ಎಂಬ ಸೂಚನೆಗಳನ್ನು ಸಭೆಯಲ್ಲಿ ನೀಡಲಾಗಿದೆ ಎಂದು ತಿಳಿಸಿದರು.

**ಅಪರಾಧಿಗಳನ್ನು ಕ್ಷಿಪ್ರವಾಗಿ ಪತ್ತೆಹಚ್ಚಲು ಸೂಚನೆ**

ಅಪರಾಧ ಪ್ರಕರಣಗಳಲ್ಲಿ ಆರೋಪ ಪಟ್ಟಿಯನ್ನು ಸೂಕ್ತವಾಗಿ, ಪರಿಣಾಮಕಾರಿಯಾಗಿ, ಸರಿಯಾದ ಸಮಯಕ್ಕೆ ಸಲ್ಲಿಸದಿರುವುದೂ ದೊಡ್ಡ ವೈಫಲ್ಯ. ಇಂಥಾದ್ದನ್ನು ಸಹಿಸಲು ಸಾಧ್ಯವಿಲ್ಲ.ಅಪರಾಧ ಪ್ರಕರಣಗಳು ಗಮನಕ್ಕೆ ಬಂದ ತಕ್ಷಣ ಅಗತ್ಯ ಕಾನೂನು ಕ್ರಮ ಕೈಗೊಂಡು ತಕ್ಷಣ ಅಪರಾಧಿಗಳನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಬೇಕು. ಸೈಬರ್ ಅಪರಾಧಗಳು ಹೆಚ್ಚುತ್ತಿದ್ದರೆ, ಇವುಗಳ ಪತ್ತೆಯ ಪ್ರಮಾಣ ಕಡಿಮೆ ಆಗುತ್ತಿದೆ. ಆದ್ದರಿಂದ ತನಿಖೆಯ ಗುಣಮಟ್ಟ ಹೆಚ್ಚಿಸುವ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

**ಹಿರಿಯ ಅಧಿಕಾರಿಗಳು ಆಗಿಂದಾಗ್ಗೆ ಠಾಣೆಗಳಿಗೆ ಭೇಟಿ ಮಾಡಿ**

ಹಿರಿಯ ಅಧಿಕಾರಿಗಳು ಪೊಲೀಸ್ ಠಾಣೆಗಳಿಗೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕಚೇರಿಗಳಲ್ಲೇ ಕುಳಿತಿರಬಾರದು. ತಮ್ಮ ಕೆಳ ಹಂತದ ಸಿಬ್ಬಂದಿಗಳ ಕಾರ್ಯವೈಖರಿಯನ್ನು ಪರಿಶೀಲನೆ ಮಾಡಬೇಕು. ಹೀಗಾದಲ್ಲಿ ಎಲ್ಲರೂ ತಮ್ಮಕೆಲಸಗಳನ್ನು ನಿಷ್ಠೆಯಿಂದ ನಿಭಾಯಿಸುವರು. ರಾಜ್ಯದಲ್ಲಿ ಶಾಂತಿ ಸೌಹಾರ್ದತೆ ಕಾಪಾಡಲು ಹಿರಿಯ ಅಧಿಕಾರಿಗಳಿಂದ ಕಿರಿಯ ಸಿಬ್ಬಂದಿವರೆಗೂ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಯಾವುದೇ ಪ್ರಕರಣದ ತನಿಖೆಯಲ್ಲಿ ನಾನು ತಲೆ ಹಾಕುವುದಿಲ್ಲ ಎಂದು ತಿಳಿಸಿದರು.

**ಡ್ರಗ್ಸ್ ಮುಕ್ತ ರಾಜ್ಯ ಮಾಡಲು ಕ್ರಮ ವಹಿಸಿ**

ಡ್ರಗ್ಸ್ ಮುಕ್ತ ರಾಜ್ಯ ಮಾಡಲು ಅಗತ್ಯ ಎಲ್ಲಾ ಕ್ರಮ ಕೈಗೊಳ್ಳಬೇಕು. ಡ್ರಗ್ಸ್ ಮಾರುವವರ ಅಂಗಡಿ, ವ್ಯಾಪಾರದ ಲೈಸೆನ್ಸ್ ರದ್ದುಗೊಳಿಸುವ ಅಗತ್ಯ ಬಿದ್ದರೆ ರದ್ದು ಮಾಡುವಂತೆ ಸೂಚನೆ ನೀಡಲಾಗಿದೆ.

ದ್ವೇಷ ಭಾಷಣ ಮಾಡುವವರ ವಿರುದ್ಧ, ಜನರ-ರಾಜ್ಯದ ನೆಮ್ಮದಿ ಕೆಡಿಸುವವರ ವಿರುದ್ಧ ಸ್ವಯಂಪ್ರೇರಿತ ಕ್ರಮ ತೆಗೆದುಕೊಳ್ಳಬೇಕು. ಇತ್ತೀಚೆಗೆ ಕೋಮು ಘರ್ಷಣೆ ಮತ್ತು ಕೊಲೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಚ್ಚಾಗಿ ಆಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ನೆಮ್ಮದಿ ಕೆಡಿಸುವವರನ್ನು ಮೂಲದಿಂದಲೇ ಪತ್ತೆಹಚ್ಚಿ ಅವರು ಯಾರೇ ಇದ್ದರೂ ಕಠಿಣ ಕಾನೂನು ಕ್ರಮ ಕೈಗೊಳ್ಳಿ ಎಂದು ಸ್ಪಷ್ಟ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ರೈತರು, ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರ ವಿರುದ್ಧ ದೌರ್ಜನ್ಯಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮವಹಿಸುವಂತೆ ಸೂಚಿಸಲಾಗಿದೆ. ಅಲ್ಲದೆ, ಬಾಲ್ಯವಿವಾಹ, ಪೋಕ್ಸೋ, ಅತ್ಯಾಚಾರ, ಭ್ರೂಣಹತ್ಯೆಗಳನ್ನು ನೂರಕ್ಕೆ ನೂರು ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾಡಳಿತ ಜೊತೆ ಸೇರಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು. ಖಾಲಿ ಹುದ್ದೆಗಳನ್ನು ತುಂಬಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಿದೆ.

ಪೊಲೀಸ್ ಇಲಾಖೆಯಲ್ಲಿ ಹಲವು ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ಒಳ ಮೀಸಲಾತಿ ಬಳಿಕ ಹಂತ ಹಂತವಾಗಿ ಭರ್ತಿ ಮಾಡಲಾಗುವುದು. ಇದಕ್ಕೆ ತಕ್ಕ ಸಿದ್ಧತೆ ಮಾಡಿಕೊಳ್ಳಲು ಹಿರಿಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಹಾಗೂ ಪೊಲೀಸ್ ಇಲಾಖೆಗೆ ಅಗತ್ಯವಾದ ಸವಲತ್ತುಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು. ಈ ಕಾರ್ಯಕ್ರಮ ದಲ್ಲಿ ಸಿಎಂ ಸಿದ್ದರಾಮಯ್ಯ ಜೊತೆ ಗೃಹ ಮಂತ್ರಿ ಜಿ. ಪರಮೇಶ್ವರ್ ಕೂಡ ಭಾಗಿಯಾಗಿದ್ದರು.

# ಕರ್ನಾಟಕ ರಾಜ್ಯ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ತೆಲಂಗಾಣ ಮಾದರಿಯ ನೀಲಿ ಕ್ಯಾಪ್

ನಮ್ಮ ಪೊಲೀಸ್ ಸಿಬ್ಬಂದಿ ಹಾಲಿ ಧರಿಸುತ್ತಿರುವ ಹಳೆಯ ಸ್ಲೋಚ್ ಹ್ಯಾಟ್ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದ ಹಿನ್ನೆಲೆಯಲ್ಲಿ ತೆಲಂಗಾಣ ಮಾದರಿಯ ನೀಲಿ ಕ್ಯಾಪ್‌ಗಳನ್ನು ನೀಡಲು ಸರ್ಕಾರ ತೀರ್ಮಾನಿಸಿದೆ. ಹಳೇ ಸ್ಲೋಚ್ ಹ್ಯಾಟ್ ಸೈಡ್‌ಗೆ ಹೋಗಿ ನ್ಯೂ ಬ್ಲೂ ಕ್ಯಾಪ್ ಸದ್ಯದಲ್ಲಿಯೇ ರಾಜ್ಯ ಪೊಲೀಸ್ ಕಾನ್‌ಸ್ಟೇಬಲ್‌ಗಳ ಮುಡಿಗೇರಲಿವೆ. ಈ ಮೂಲಕ ಬ್ರಿಟೀಷರ ಕಾಲದಿಂದ ಬಳಸುತ್ತಿದ್ದ ಟೋಪಿಗಳು ನೇಪಥ್ಯಕ್ಕೆ ಸರಿಯಲಿವೆ. ಈ ಟೋಪಿ ಬದಲಾವಣೆಗಾಗಿ ಹಲವು ವರ್ಷಗಳಿಂದ ಕೋರಿಕೆ ಇತ್ತು. ಹಲವು ವರ್ಷಗಳಿಂದ ಕೋರಿಕೆ ಇತ್ತು. ಈ ಕೂಗಿಗೆ ಸ್ಪಂದಿಸಿದ್ದ ಪೊಲೀಸ್ ಇಲಾಖೆ, ಹೊಸ ಕ್ಯಾಪ್ ಮಾದರಿ ತಯಾರಿಸಿತ್ತು.

ಜತೆಗೆ ಅನ್ಯ ರಾಜ್ಯಗಳ ಕ್ಯಾಪ್ ಮಾದರಿಗಳನ್ನು ಅಧ್ಯಯನ ಮಾಡಿತ್ತು. ಈ ವಿಷಯದಲ್ಲಿ ಸ್ಪಷ್ಟ ಅಭಿಪ್ರಾಯಕ್ಕೆ ಬರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರ ಪರಿವೀಕ್ಷಣೆಗೆ ಹೊಸ ಕ್ಯಾಪ್ ವಹಿಸಲಾಗಿತ್ತು.

ಪೊಲೀಸ್ ಇಲಾಖೆ ಉದ್ದೇಶಿತ ಹೊಸ ಕ್ಯಾಪ್ ಹಾಗೂ ಮಹಾರಾಷ್ಟ್ರ, ಹೊಸದಿಲ್ಲಿ, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಪೊಲೀಸರ ಕ್ಯಾಪ್‌ಗಳನ್ನು ಪರಿಶೀಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ತೆಲಂಗಾಣ ಮಾದರಿಯ ನೀಲಿ ಕ್ಯಾಪ್ ನಮ್ಮ ಸಿಬ್ಬಂದಿಗೂ ನೀಡುವುದು ಉತ್ತಮ' ಎಂದು ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಗೃಹ ಸಚಿವ ಜಿ. ಪರಮೇಶ್ವರ, ಡಿಜಿಪಿ ಡಾ.ಎಂ.ಎ. ಸಲೀಂ ಸೇರಿದಂತೆ ಉನ್ನತ ಅಧಿಕಾರಿಗಳು ಸಿಎಂ ಮಾತಿಗೆ ದನಿಗೂಡಿಸಿದರು.

ಈ ನಿಟ್ಟಿನಲ್ಲಿ ಸ್ಥಳದಲ್ಲಿಯೇ ಇದ್ದ ಹೆಡ್‌ಕಾನ್‌ಸ್ಟೇಬಲ್ ಒಬ್ಬರಿಗೆ ತೆಲಂಗಾಣ ಮಾದರಿ ಕ್ಯಾಪ್‌ಹಾಕಿಸಿ ಪರಿಶೀಲನೆ ನಡೆಸಲಾಯಿತು. ನೀಲಿ ಮಾದರಿ ಕ್ಯಾಪ್‌ನಲ್ಲಿ ಕರ್ನಾಟಕ ಪೊಲೀಸ್ ಇಲಾಖೆ ಲಾಂಛನ ಹಾಗೂ ಇತರೆ ಕೆಲ ಬದಲಾವಣೆಗಳನ್ನು ಮಾಡಬಹುದು ಎಂಬ ಸಲಹೆಗಳು ಚರ್ಚೆಯಾದವು.

ಮುಖ್ಯಮಂತ್ರಿಗಳ ಒಪ್ಪಿಗೆ ಹಿನ್ನೆಲೆಯಲ್ಲಿ ಸದ್ಯದಲ್ಲೆ ತೆಲಂಗಾಣ ಮಾದರಿಯ ಕ್ಯಾಪ್ಗಳನ್ನು ಇಲಾಖೆಯ ಕಾನ್‌ಸ್ಟೇಬಲ್ ಹಾಗೂ ಹೆಡ್‌ಕಾನ್‌ಸ್ಟೇಬಲ್‌ಗಳ ಮುಡಿಗೇರಿಸಲು ಇಲಾಖೆ ತೀರ್ಮಾನಿಸಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.



ಅಂದಹಾಗೆ, ಪ್ರಸ್ತುತ ಇದ್ದಂತ ಸ್ಲೋಚ್ ಕ್ಯಾಪ್‌ಅನ್ನು ಬದಲಿಸಲು ನಿರ್ಧರಿಸಿದ್ದು ಏಕೆಂದರೆ, ಸ್ಲೋಚ್ ಹ್ಯಾಟ್ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳ ಬಗ್ಗೆ ಇತ್ತೀಚೆಗೆ ಕೇಂದ್ರ ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿತ್ತು. ಅಲ್ಲದೆ ಪ್ರತಿಭಟನೆ, ರ್‍ಯಾಲಿ ಅಪರಾಧಿಗಳನ್ನು ಬೆನ್ನಟ್ಟುವ ಸಂದರ್ಭಗಳಲ್ಲಿ ಸ್ಲೋಚ್ ಹ್ಯಾಟ್ ಧರಿಸಿ ಕರ್ತವ್ಯ ನಿರ್ವಹಿಸುವುದು ಕಿರಿಕಿರಿಯುಂಟು ಮಾಡುತ್ತಿದೆ. ಆದ್ದರಿಂದ ಹಳೆ ಮಾದರಿಯ ಹ್ಯಾಟ್ ಬದಲು ತಲೆಯ ಮೇಲೆ ಗಟ್ಟಿಯಾಗಿ ನಿಲ್ಲುವಂತಹ ಎಲಾಸ್ಟಿಕ್ ಮಾದರಿಯ ಕ್ಯಾಪ್‌ಗಳನ್ನು ನೀಡಿದರೆ ಉತ್ತಮ ಎನ್ನುವುದು ಪೊಲೀಸ್ ಸಿಬ್ಬಂದಿ ಬಹುದಿನಗಳ ಬೇಡಿಕೆಯಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ತೆಲಂಗಾಣ ಮಾದರಿಯ ಪೊಲೀಸ್ ಕ್ಯಾಪ್‌ಅನ್ನು ಧರಿಸಿ ಟ್ರಯಲ್ ನೋಡಿದ್ದು ವಿಶೇಷವಾಗಿತ್ತು.

2 ☞

ದವರ ಮುಂದೆ ನಿಂತು ಸಿದ್ದರಾಮಯ್ಯ ಮುಂದಿನ ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳಿದ್ದಾರೆ.

ಈ ಹೇಳಿಕೆ ಸಿಎಂ ಅಧಿಕಾರ ಹಂಚಿಕೆ ವಿಚಾರಕ್ಕೆ ತಾತ್ಕಾಲಿಕ ಶಮನ ಎಂಬಂತೆ ಕಂಡು ಬಂದರೂ.. ಅದೇ ಅಂತಿಮವಲ್ಲ, ಸಿದ್ದರಾಮಯ್ಯ ಬೆಂಬಲಿಗರು ಮಾತ್ರ ಸಿಎಂ ಹೇಳಿದ ಮೇಲೆ ಮುಗೀತು ಮುಂದೆ ಆ ವಿಚಾರದ ಬಗ್ಗೆ ಮಾತೇ ಇಲ್ಲ ಎನ್ನುತ್ತಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್ ಬೆಂಬಲಿಗರು ಅದನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ, ಬಿಹಾರದ ಚುನಾವಣೆ ಹತ್ತಿರವಾಗುತ್ತಿರುವ ಈ ಸಮಯದಲ್ಲಿ ಕರ್ನಾಟಕದ ಕಾಂಗ್ರೆಸ್ ನಲ್ಲಿ ಉದ್ಭವಿಸಿರುವ ಅಸಮಾಧಾನಗಳು ಹೈಕಮಾಂಡ್ ಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ಬಿಹಾರ ಚುನಾವಣೆ ಕಾಂಗ್ರೆಸ್ ಗೆ ಬಹುಮುಖ್ಯವಾಗಿದೆ. ಈಗಾಗಲೇ ಉತ್ತರ ಭಾರತದಲ್ಲಿ ನಡೆದ ಚುನಾವಣೆಗಳಲ್ಲಿ ಹೀನಾಯ ಸೋಲು ಕಂಡಿರುವ ಕಾಂಗ್ರೆಸ್ ಚೇತರಿಸಿಕೊಳ್ಳುತ್ತಿದೆ ಎಂಬುದನ್ನು ದೇಶದ ಜನತೆಗೆ ತೋರಿಸಬೇಕಾದರೆ ಬಿಹಾರದ ಚುನಾವಣೆಯನ್ನು ಗಂಭೀರವಾಗಿ ಎದುರಿಸಬೇಕಾಗಿದೆ. ಮತ್ತು ಅದಕ್ಕೆ ಕರ್ನಾಟಕದಿಂದ ಸರ್ವ ರೀತಿಯಲ್ಲಿ ಸಹಕಾರ ಬೇಕಾಗಿದೆ. ಹೀಗಾಗಿ ಕರ್ನಾಟಕದತ್ತ ಹೆಚ್ಚಿನ ನಿಗಾವಹಿಸುತ್ತಿರುವ ಹೈಕಮಾಂಡ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರ ಮೂಲಕ ಸರ್ಕಾರದೊಳಗಿರುವ ಸಚಿವರು, ಶಾಸಕರ ನಡುವಿನ ಅಸಮಾಧಾನಕ್ಕೆ ಮುಲಾಮು ಹಚ್ಚುವ ಕೆಲಸ ಮಾಡಿಸುತ್ತಿದೆ.

ಏನೇ ಆದರೂ ಸಿಎಂ ಅಧಿಕಾರ ಹಸ್ತಾಂತರ ವಿಚಾರ ಕಾಂಗ್ರೆಸ್ ನೊಳಗಿನ ಬೂದಿ ಮುಚ್ಚಿದ ಕೆಂಡವಾಗಿದ್ದು ಅದು ಆಗಾಗ್ಗೆ ಹೊಗೆಯಾಡುತ್ತಲೇ ಇರುತ್ತದೆ. ನವೆಂಬರ್ ತನಕವೂ ಇದರ ಬಗ್ಗೆ ಹೀಗೆಯೇ ಆಗುತ್ತದೆ ಎಂದು ಹೇಳುವುದು ಕಷ್ಟವೇ... ಏನೇನು ಬೆಳವಣಿಗೆಗಳು ಆಗುತ್ತವೆ ಎನ್ನುವುದನ್ನು ಕಾದು ನೋಡೋಣ.




# ದೇವರಿದ್ದಾನೆ!

ವೈದ್ಯರು ಮಗು ಸತ್ತಿದೆ ಎಂದು ಘೋಷಿಸಿದರು, ಮತ್ತು ಆಸ್ಪತ್ರೆ ಸಿಬ್ಬಂದಿ ನಾಲ್ಕು ತಿಂಗಳ ಮಾಂಸದ ಮುದ್ದೆಯನ್ನು ಹೂಳಲು ಮಗುವಿನ ತಾಯಿಗೆ 200 ರೂ.ಗಳನ್ನು ನೀಡಿದರು, ಆದರೆ ಮಗು ಸತ್ತಿದೆ ಎಂದು ಘೋಷಿಸಿದ ವೈದ್ಯರನ್ನು ದೇವರು ಸರಿಪಡಿಸಿದನು ಮತ್ತು ಇಂದಿರಾ ಎಂಬ ತಾಯಿಯ ರೂಪದಲ್ಲಿ ನೇರವಾಗಿ ವರಾಂಡಾಗೆ ಬಂದನು....

ಇಂದಿರಾ ತನ್ನ ಸಹೋದರಿಯ ಮಗಳು ಹೆರಿಗೆಯಾದ ವಿಷಯ ತಿಳಿದು ಆಲಪ್ಪುಳ ತಾಲ್ಲೂಕು ಆಸ್ಪತ್ರೆಗೆ ಬಂದಿದ್ದರು. ವರಾಂಡಾಗೆ ಹೋಗಿ ಎರಡೂ ಕಡೆ ನೋಡಿದ ಇಂದಿರಾ, ಮೊದಲು ಆಸ್ಪತ್ರೆಯ ಉದ್ಯೋಗಿಯೊಬ್ಬರು ವರಾಂಡಾದಲ್ಲಿ ಬಕೆಟ್ ಹಿಡಿದು ನಡೆದುಕೊಂಡು ಹೋಗುವುದನ್ನು ನೋಡಿದರು. ಆಸ್ಪತ್ರೆಯ ಉದ್ಯೋಗಿಯ ಕೈಯಲ್ಲಿದ್ದ ಬಕೆಟ್ ಅನ್ನು ನೋಡಿದಾಗ ಅನೇಕ ಜನರು ತಮ್ಮ ಮುಖಗಳನ್ನು ಬದಲಾಯಿಸಿಕೊಂಡರು. ನಂಬಿಕೆಯಿಂದ ತುಂಬಿದ ಇಂದಿರಾ, ಉದ್ಯೋಗಿ ಹತ್ತಿರ ಬಂದಾಗ ಬಕೆಟ್‌ನತ್ತ ನೋಡಿದರು. ಆ ಉದ್ಯೋಗಿ ಇಂದಿರಾಳನ್ನು ನೋಡಿಯೇ ತಾನು ಮೂರ್ಖ ಎಂದು ಹೇಳಿದ.

ಒಂದು ಕ್ಷಣ, ಇಂದಿರಾ ದೈವಿಕ ಆಜ್ಞೆಯಂತೆ ಉದ್ಯೋಗಿಯನ್ನು ಹಿಂಬಾಲಿಸಿದರು, ಮತ್ತು ಅವನನ್ನು ಗುಂಡಿಯಲ್ಲಿ ಹಾಕಿ ಮಣ್ಣಿನಿಂದ ಮುಚ್ಚುವ ಮೊದಲು, ಇಂದಿರಾ ಅನುಮಾನವನ್ನು ನಿವಾರಿಸಲು ಮಗುವಿನ ಪಾದಗಳನ್ನು ಮುಟ್ಟಿದರು. ಶೀತ, ನಡುಗುವ ಪಾದಗಳನ್ನು ಉಷ್ಣತೆಯು ಸ್ಪರ್ಶಿಸುತ್ತಿದ್ದಂತೆ ಮಗುವಿನ ಕಾಲುಗಳು ನಡುಗಿದವು. ಈ ಮಗು ಜೀವಂತವಾಗಿದೆ ಎಂದು ತಿಳಿಯದೆ ಇಂದಿರಾ ದೃಢವಾದ ಧ್ವನಿಯಲ್ಲಿ ಹೇಳಿದರು. ಆಸ್ಪತ್ರೆಯ ಉದ್ಯೋಗಿಯೂ ಆಘಾತಕ್ಕೊಳಗಾದರು, ಮತ್ತು ನಂತರ ವೈದ್ಯರು ಅವನನ್ನು ಸತ್ತಿದ್ದಾನೆಂದು ಘೋಷಿಸಿದ್ದಾರೆ ಮತ್ತು ಅವನ ತಾಯಿ ಅವನನ್ನು ಹೂಳಲು 200 ರೂಪಾಯಿಗಳನ್ನು ನೀಡಿದ್ದಾರೆ ಎಂದು ಹೇಳಿದರು. ಇದನ್ನು ಸಮಸ್ಯೆಯನ್ನಾಗಿ ಮಾಡಬೇಡಿ. ಇದನ್ನು ಕೇಳಿದ ನಂತರ, ಇಂದಿರಾ ಒಂದೇ ಒಂದು ಪ್ರಶ್ನೆಯನ್ನು ಕೇಳಿದರು, ನಾನು ಈ ಅಮೂಲ್ಯವಾದ ಜೀವವನ್ನು ತೆಗೆದುಕೊಳ್ಳಬೇಕೇ? ನಾನು ಅವಳನ್ನು ಬೆಳೆಸುತ್ತೇನೆ, ನನಗೆ ಮಕ್ಕಳಿಲ್ಲ, ನಾನು ಅವಳನ್ನು ಚಿನ್ನದಂತೆ ನೋಡಿಕೊಳ್ಳುತ್ತೇನೆ, ಮತ್ತು ಯಾರಿಗೂ ತಿಳಿದಿಲ್ಲ, ಮತ್ತು ಇಂದಿರಾ ಉದ್ಯೋಗಿಗೆ ತನ್ನ ಮಾತನ್ನು ಮತ್ತು ಕೈಯಲ್ಲಿದ್ದ ಹಣವನ್ನು ನೀಡಿ ಮುಂದೆ ನಡೆದರು..

ಮಗುವನ್ನು ಹಿಡಿದು ತನ್ನ ಗಂಡನ ಬಳಿಗೆ ಹೋಗಿ ಅದರ ಬಗ್ಗೆ ಹೇಳಿದಾಗ, ಗಂಡ ಅವಳನ್ನು ಗಂಡು ಮಗುವೋ ಅಥವಾ ಹೆಣ್ಣುಮಗುವೋ ಎಂದು ಕೇಳಿದಳು, ಅದಕ್ಕೆ ಅವಳು ಹೆಣ್ಣು ಮಗು ಎಂದು ಉತ್ತರಿಸಿದಳು, ಮತ್ತು ಅವಳ ಪತಿ ಸೇತುನಾಥ್ ಅವಳೊಂದಿಗೆ ಎಲ್ಲೊ ಹೋಗಬೇಕೆಂದು ಹೇಳಿದಳು. ಇಂದಿರಾ ಅಕಾಲಿಕ ಶಿಶುವನ್ನು ತೆಗೆದುಕೊಂಡು ಆಟೋರಿಕ್ಷಾ ತೆಗೆದುಕೊಂಡು ಅನೇಕ ಆಸ್ಪತ್ರೆಗಳಿಗೆ ಹೋಗಿ ಬಂದಳು, ಆದರೆ ಯಾರೂ ಸಹಾಯ ಮಾಡಲು ಸಿದ್ಧರಿರಲಿಲ್ಲ, ಅನೇಕ ಆಸ್ಪತ್ರೆಗಳಿಂದ ಅವಳಿಗೆ ಸಿಕ್ಕ ಉತ್ತರವೆಂದರೆ, ಅವಳ ತಾಯಿ ಬಿಟ್ಟುಹೋದ ಈ ಮಗುವನ್ನು ತಂದರೆ, ಅವಳನ್ನು ಪೊಲೀಸರಿಗೆ ಒಪ್ಪಿಸಲಾಗುತ್ತದೆ. ಕೊನೆಗೆ, ಇಂದಿರಾಳ ಸ್ಥಿತಿಯನ್ನು ನೋಡಿದ ಆಟೋ ಚಾಲಕ ಅವಳ ಮೇಲೆ ಕರುಣೆ ತೋರಿ, ಮಕ್ಕಳ ವೈದ್ಯರ ಬಳಿಗೆ ಕರೆದೊಯ್ದನು. ವೈದ್ಯರು ಮಗುವನ್ನು ಪರೀಕ್ಷಿಸಿದರು. ಅದು ಅಕಾಲಿಕ ಶಿಶುವಾಗಿದ್ದರಿಂದ, ಅದಕ್ಕೆ ಅನೇಕ ಸಮಸ್ಯೆಗಳಿದ್ದವು. ಕೊನೆಗೆ, ವೈದ್ಯರು ಸ್ವತಃ ಮಗುವಿಗೆ ಒಂದು ಕೋಣೆಯನ್ನು ಸಿದ್ಧಪಡಿಸಿದರು, ಅದಕ್ಕೆ ಗ್ಲೂಕೋಸ್ ಡ್ರಿಪ್ ಮಾತ್ರ ನೀಡಿ ಕೆಲವು ದಿನಗಳವರೆಗೆ ಅದನ್ನು ರಕ್ಷಿಸಿದರು. ನಂತರ, ಮನೆಗೆ ತಲುಪಿದ ನಂತರ, ಇಂದಿರಾ ಮಗುವನ್ನು ವಜ್ರದಂತೆ ನೋಡಿಕೊಂಡರು. ಅವಳು ಮಗುವನ್ನು ಸ್ವಲ್ಪ ಬೆಚ್ಚಗಿನ ನೀರಿನಿಂದ ಗ್ಲೂಕೋಸ್ ಬಾಟಲಿಯಲ್ಲಿ ತುಂಬಿಸಿ ಬೆಚ್ಚಗೆ ಇಟ್ಟಳು.

ಗರ್ಭಪಾತ ಮಾಡಿಸಿಕೊಂಡ ನಂತರ, ಮಗುವನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಅಥವಾ ಹೊಕ್ಕುಳಬಳ್ಳಿಯನ್ನು ಕತ್ತರಿಸಲಾಯಿತು. ಇಷ್ಟು ಹೆಚ್ಚಿನ ಭದ್ರತೆಯೊಂದಿಗೆ ಮಗುವನ್ನು ಆಸ್ಪತ್ರೆಗೆ ಕರೆದೊಯ್ಯುವುದು ಇಂದಿರಾಗೆ ದೊಡ್ಡ ಸವಾಲಾಗಿತ್ತು. 120 ದಿನಗಳ ನಂತರ, ಅವಳು ಮಗುವಿಗೆ ನೇರವಾಗಿ ಬಾಯಿಯ ಮೂಲಕ ನೀರು ನೀಡಲು ಪ್ರಾರಂಭಿಸಿದಳು. ಆರಂಭದಲ್ಲಿ, ಅವಳು ಅಸಹ್ಯಪಟ್ಟಳು, ಆದರೆ ಅಂತಿಮವಾಗಿ, ಇಂದಿರಾ ಜೊತೆಗೆ, ಅವಳ ಪತಿ ಮಗುವನ್ನು ಪ್ರೀತಿಸಲು ಪ್ರಾರಂಭಿಸಿದರು. ಅವಳಿಗೆ ಕೀರ್ತಿ ಎಸ್. ನೂಪ್ರಿಯಾ ಎಂದು ಹೆಸರಿಸಲಾಯಿತು. ಒಂದು ವರ್ಷದವಳಿದ್ದಾಗಲೂ, ಕೀರ್ತಿ ಇತರ ಮಕ್ಕಳಂತೆ, ಕಮಲನ್ ಕೂಡ ತನ್ನ ಮೊಣಕಾಲುಗಳ ಮೇಲೆ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ, ದೇಹವು ಬಹುತೇಕ ಸಿದ್ಧವಾಗಿದ್ದರೂ, ಕಾಲುಗಳು ಸಾಕಷ್ಟು ಬಲವಾಗಿರಲಿಲ್ಲ. ಅವಳ ಅಂಗವೈಕಲ್ಯಗಳ ಹೊರತಾಗಿಯೂ, ಇಂದಿರಾ ಮತ್ತು ಸೇತುನಾಥ ಕುರುಪ್ ಕೀರ್ತಿಯನ್ನು ಸಮಾನವಾಗಿ ಪ್ರೀತಿಸುತ್ತಿದ್ದರು ಮತ್ತು ಅವಳನ್ನು ಅಧ್ಯಯನ ಮಾಡಲು ಬಿಟ್ಟರು. ಕೀರ್ತಿ ಎಂಟನೇ ತರಗತಿಯಲ್ಲಿ ಓದುತ್ತಿರುವಾಗ ಸೇತುನಾಥ ಕುರುಪ್ ಕ್ಯಾನ್ಸರ್‌ನಿಂದ ನಿಧನರಾದರು.

ಪತಿ ಸೇತುನಾಥ ಕುರುಪ್ ನಿಧನರಾದ ನಂತರ, ಇಂದಿರಾ ಮೂರು ಸೆಂಟ್ಸ್ ಭೂಮಿಯನ್ನು ಖರೀದಿಸಿ ಗುಡಿಸಲು ಕಟ್ಟಿಕೊಂಡರು. ಅಂಗಡಿಯಿಂದ ಬರುವ ಆದಾಯದಲ್ಲಿ ಇಬ್ಬರೂ ಜೀವನ ಸಾಗಿಸುತ್ತಿದ್ದಾರೆ. ಕೀರ್ತಿ ತನ್ನ ಓದನ್ನು ಪೂರ್ಣಗೊಳಿಸಿ ಒಳ್ಳೆಯ ಕೆಲಸ ಪಡೆದು ತಾಯಿಗೆ ಸಹಾಯ ಮಾಡಬೇಕೆಂಬ ಆಸೆ. ಅವರು ಇನ್ನೂ ವೀಲ್‌ಚೇರ್‌ನಲ್ಲಿದ್ದರೂ, 'ಅಮ್ಮ ಇಂದಿರಾ ಅವರೊಂದಿಗಿದ್ದಾರೆ...' ಎಂದು ಅವರು ದೃಢವಾಗಿ ನಂಬುತ್ತಾರೆ. ಈ ಘಟನೆಯನ್ನು ಓದಿದ ನಂತರ, ಪ್ರೀತಿಯ ನಟ ದಿಲೀಪ್ ಸಹಾಯಕ್ಕೆ ಬಂದರು. ಯಾರಾದರೂ ಅವರನ್ನು ಈ ಭೂಮಿಯಿಂದ ಕಿತ್ತುಹಾಕಲು ಪ್ರಯತ್ನಿಸಿದರೂ, ದೇವರು ಅವರ ಜೊತೆಗಿರಬೇಕು ಎಂಬುದಕ್ಕೆ ಇದು ಒಂದು ಉತ್ತಮ ಉದಾಹರಣೆ. ☯

---

11 ☞ ಗೊಬ್ಬರ ರವಾನೆಯಾಗುತ್ತದೆ. ಅದನ್ನು ಮಾರಾಟ ಮಾಡುವ ನೂರಾರು ಬ್ರೋಕರುಗಳು ಇಲ್ಲಿದ್ದಾರೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ದನಗಳನ್ನು ಮೇಯಲು ಬಿಡುವಂತಿಲ್ಲ, ಹಾಗಾಗಿ ಇಲ್ಲಿ ಕಾಡಿಗೆ ದನಗಳನ್ನು ಬಿಡುವವರ ವಿರುದ್ಧ ಅರಣ್ಯ ಸಿಬ್ಬಂದಿ ಕೇಸು ದಾಖಲಿಸುತ್ತಾರೆ. ಅವರನ್ನು ಬಿಡಿಸಲು ಮತ್ತು ಕಾಡಿನಲ್ಲಿ ದನ ಮೇಯಿಸಲು ಅವಕಾಶ ಮಾಡಿಕೊಡಿ ಎಂದು ಒತ್ತಡ ಹಾಕಲು ಸ್ಥಳೀಯ ಜನಪ್ರತಿನಿಧಿಗಳು ಹಸ್ತಕ್ಷೇಪ ಮಾಡುತ್ತಾರೆ. ಅಷ್ಟೇ ಅಲ್ಲ, ಇಂತಹ ಲಾಬಿಗಳೇ ಈ ವನ್ಯಜೀವಿಧಾಮವನ್ನು ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಣೆ ಮಾಡುವುದನ್ನು ತಡೆದು ನಿಲ್ಲಿಸಿವೆ. ಕಾನೂನಿದೆ, ಆದರೆ ಅದನ್ನು ಜಾರಿ ಮಾಡಲು ಅಡ್ಡ ಬರುವ ಅನೇಕ ಅನಿಷ್ಟಗಳು ಸಹ ಇಲ್ಲಿವೆ. ತಮಿಳುನಾಡಿನ ದನಗಳು ಕರ್ನಾಟಕದ ಕಾಡುಗಳನ್ನು ನಾಶ ಮಾಡುವುದು, ಅವುಗಳನ್ನು ಮೇಯಿಸುವವರು ಇಲ್ಲಿನ ಬಡ ಕೂಲಿಗಳು,ಲಾಭ ಮಾಡಿಕೊಳ್ಳೋರು ಪಕ್ಕದ ರಾಜ್ಯದವರು! ಹೇಗಿದೆ ನೋಡಿ ನಮ್ಮ ದುರದೃಷ್ಟ!

ಈ ವ್ಯವಹಾರಕ್ಕೆ ಅಡ್ಡಿಪಡಿಸಿದರೆ ಕಾಡಿಗೆ ಬೆಂಕಿ ಹಚ್ಚುವುದು, ಪ್ರಾಣಿಗಳಿಗೆ ವಿಷ ಹಾಕುವ ಷಡ್ಯಂತ್ರ ಇಲ್ಲಿ ನಡೆದಿದೆ ಎಂದು ಪರಿಸರ ತಜ್ಞ ವಿನೋದ್ ಕುಮಾರ್ ಬಿ ನಾಯಕ್ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಾರೆ! ಅಂದಹಾಗೆ, ಮಾದಪ್ಪನ ಸನ್ನಿಧಿಯಲ್ಲಿ ಅನ್ಯಾಯವಾಗಿ ಐದು ಹುಲಿಗಳನ್ನು ಕೊಂದ ವ್ಯಕ್ತಿ ಶಿವಣ್ಣೆಗೌಡ. ಈತ ವೀರಪ್ಪನ್ ನಂತೆ ವಣ್ಣಿಯಾರ್ ಗೌಂಡರ್.

ಈ ಪಾಪಿಯ ದನವೊಂದನ್ನುನಾಲ್ಕು ಮರಿಗಳ ತಾಯಿ ಹುಲಿ ವಧೆಮಾಡಿತ್ತು. ತನ್ನ ದನವನ್ನು ಕೊಂದ ಹುಲಿಯನ್ನು ಕೊಂದೇ ತೀರಬೇಕೆನ್ನುವ ಹಠಕ್ಕೆ ಬಿದ್ದ ಶಿವಣ್ಣೆಗೌಡ,ಹುಲಿ ತಿಂದು ಬಿಟ್ಟಿದ್ದ ಮಾಂಸಕ್ಕೆ ವಾಸನೆ ಬಾರದ ವಿಶೇಷ ಕೀಟ ನಾಶಕವನ್ನು ಸಿಂಪಡಿಸಿದ್ದ! ಈ ಪಾಪ ಕಾರ್ಯಕ್ಕೆ ಅವನ ಮಗ ಮಾದುರಾಜ್ ಕೂಡ ಕೈ ಜೋಡಿಸಿದ್ದ.

ಅಪ್ಪ ಮಗ ಇಟ್ಟ ವಿಷಕ್ಕೆ ಐದು ಹುಲಿಗಳು ಒಮ್ಮೆಲೆ ಸಾವುಗೀಡಾಗಿವೆ. ತನಿಖಾ ಕಾಲದಲ್ಲಿ ತಮಗೇನು ಗೊತ್ತೇ ಇಲ್ಲಾ... ಹುಲಿಗಳ ಸಾವು ಹೇಗಾಯ್ತೋ ಮಾದಪ್ಪನಿಗೇ ಗೊತ್ತು! ಎಂದಿದ್ದರಂತೆ! ಅನಂತರ ಅರಣ್ಯಧಿಕಾರಿಗಳಿಗೆ ಮಾಧುರಾಜ್ ಮೇಲೆ ಅನುಮಾನ ಬಂದು ಎಡೆಮುರಿ ಕಟ್ಟಿದಾಗ, ಮಗನನ್ನು ರಕ್ಷಿಸಲು ತಾನೇ ವಿಷವಿಟ್ಟಿದ್ದಾಗಿ ಶಿವಣ್ಣೆಗೌಡ ಹೇಳಿ ಅಧಿಕಾರಿಗಳನ್ನು ಧಿಕ್ಕು ತಪ್ಪಿಸಿದ್ದ! ಈ ಪ್ರಕರಣದಲ್ಲಿ ಒಟ್ಟು ಐವರನ್ನು ಬಂಧಿಸಲಾಗಿತ್ತು. ಕಡೆಗೆ, ಮಗ ಮಾಧುರಾಜನೇ ಹುಲಿಗಳಿಗೆ ವಿಷವಿಟ್ಟವನು ಎಂಬುದು ಖಚಿತವಾಗಿತ್ತು. ಸದ್ಯ, ಎಲ್ಲಾ ಆರೋಪಿಗಳು ಜೈಲು ಸೇರಿದ್ದಾರೆ.

ಮುಖ್ಯವಾಗಿ, ಆಗಬೇಕಾದ ಕೆಲಸವೇನೆಂದರೆ, ಮಲೆ ಮಾದೇಶ್ವರ ಬೆಟ್ಟದ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬೀಡು ಬಿಟ್ಟಿರುವ ತಮಿಳು ಜನರನ್ನು ಓಡ್ಡೋಡಿಸುವುದು... ಹನೂರು ಶಾಸಕ ಮಂಜುನಾಥ್ ಅವರೇ ನಿಮ್ಮಿಂದ ಈ ಕೆಲಸ ಸಾಧ್ಯವೇ?! ವೋಟ್ ಬ್ಯಾಂಕ್ ಚಿಂತೆ ನಿಮಗೆ ಬೇಡ... ನಿಮ್ಮ ಗೆಲುವಿಗಾಗಿ ನಾವು ಶ್ರಮಿಸುತ್ತೇವೆ, ಕನ್ನಡಿಗರು!! ☯

---

# ದೇವನಹಳ್ಳಿ ರೈತರ ಹೋರಾಟಕ್ಕೆ ದೊಡ್ಡ ಗೆಲುವು.... ಭೂ ಸ್ವಾಧೀನ ಕೈಬಿಡಲು ರಾಜ್ಯ ಸರ್ಕಾರ ನಿರ್ಧಾರ!

**ಫಾಲೋ ಅಪ್**

ಮಂಗಳವಾರ ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ರೈತರ ಜೊತೆಗಿನ ಸಭೆಯಲ್ಲಿ ದೇವನಹಳ್ಳಿ ತಾಲ್ಲೂಕಿನ ಚನರಾಯಪಟಣ ಹೋಬಳಿಯ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ರಾಜ್ಯ ಸರ್ಕಾರ ನಿರ್ಧರಿಸಲಾಗಿದೆ!





ಕೆಐಎಡಿಬಿಯಿಂದ 13 ಗ್ರಾಮಗಳಲ್ಲಿ 1,777 ಎಕರೆ ಭೂ ಸ್ವಾಧೀನ ವಿರೋಧಿಸಿ ರೈತರು ಸುಮಾರು 1,200 ಕ್ಕೂ ಹೆಚ್ಚು ದಿನಗಳಿಂದ ಹೋರಾಟ ನಡೆಸುತ್ತಿದ್ದರು. ರೈತರ ಹೋರಾಟಕ್ಕೆ ಮಣಿದಿರುವ ರಾಜ್ಯ ಸರ್ಕಾರ ಕೊನೆಗೂ ಭೂ ಸ್ವಾಧೀನ ಪ್ರಕ್ರಿಯೆ ಕೈಬಿಡಲು ನಿರ್ಧರಿಸಿದೆ. ವಿಧಾನಸೌಧದಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ರೈತರ ಜೊತೆಗಿನ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಚನ್ನರಾಯಪಟ್ಟಣ ಸುತ್ತಮುತ್ತಲಿನ 13 ಗ್ರಾಮಗಳ ಭೂ ಸ್ವಾಧೀನಕ್ಕೆ ಕೆಐಎಡಿಬಿಗೆ ಭೂಮಿ ನೀಡಲು ರೈತರು, ಸಂಘಟನೆಗಳು ಒಪ್ಪುತ್ತಿಲ್ಲ, ರಾಜ್ಯ ಸರ್ಕಾರ ಸಾಧಕ-ಭಾದಕಗಳ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ನಾವು 1,777 ಎಕರೆ ಡಿನೋಟಿಫಿಕೇಷನ್‌ಕೈಬಿಟ್ಟಿದ್ದೇವೆ. ಆದರೆ, ಭೂಮಾಲೀಕರು ಸ್ವಯಂ ಪ್ರೇರಿತರಾಗಿ ಭೂಮಿ ನೀಡಲು ಮುಂದಾದರೆ ಖರೀದಿಸುತ್ತೇವೆ. ಬಲವಂತವಾಗಿ ಖರೀದಿಸುವುದಿಲ್ಲ, ಸ್ವಯಂ ಪ್ರೇರಿತರಾಗಿ ಭೂಮಿ ನೀಡುವವರಿಗೆ ಸೂಕ್ತ ಪರಿಹಾರ ನೀಡುತ್ತೇವೆ. ರಾಜ್ಯಕ್ಕೆ ಕೈಗಾರಿಕೆಗಳು ಬರಬೇಕು ಎಂಬುದು ನಮ್ಮ ಆಶಯವಾಗಿದೆ. ಸರ್ಕಾರದ ನಿರ್ಧಾರ ದೇವನಹಳ್ಳಿ ಪ್ರದೇಶಕ್ಕೆ ಮಾತ್ರ ಸಿಮೀತವಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ!!



ಈ ಸಭೆಲ್ಲಿ ಸಚಿವರಾದ ಎಂ.ಬಿ ಪಾಟೀಲ್, ಕೆ. ಎಚ್. ಮುನಿಯಪ್ಪ, ರೈತ ಪರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ನಟ ಪ್ರಕಾಶ್ ರೈ, ಮಾವಳ್ಳಿ ಶಂಕರ್, ಹೊನ್ನೂರ್ ಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು. ರೈತರ ಪರ ಗೆಲುವು ಸಿಕ್ಕ ಬಳಿಕ ಮಾಧ್ಯಮದೊಂದಿಗೆ ಮಾತನಾಡಿದ ನಟ ಪ್ರಕಾಶ್ ರೈ ಅವರು,ಇದು ರೈತರ ಹೋರಾಟಕ್ಕೆ ಸಿಕ್ಕ ಜಯವಾಗಿದೆ. ರೈತರ ಜೊತೆಗೆ ಚರ್ಚಿಸಿದ ಬಳಿಕ ಸಿಎಂ ಸಿದ್ದರಾಮಯ್ಯನವರು ಈ ನಿರ್ಧಾರ ಪ್ರಕಟಿಸಿದ್ದಾರೆ. ರಾಜ್ಯ ಸರ್ಕಾರ ಒಳ್ಳೆಯ ನಿರ್ಧಾರ ಪ್ರಕಟಿಸಿದ್ದಕ್ಕೆ ಧನ್ಯವಾದಗಳು ಎಂದು ಹೇಳಿ ಕೈ ಮುಗಿದು ಧನ್ಯವಾದ ಅರ್ಪಿಸಿದ್ದಾರೆ. ☯






# ಬಿ. ಸರೋಜದೇವಿ-ಎಸ್.ಎಂ. ಕೃಷ್ಣ ಲವ್ ಸ್ಟೋರಿ! ಮದುವೆ ಪ್ರಸ್ತಾಪ ಆಗಿದ್ದು ನಿಜಾನಾ??!


ಪದ್ಮಶ್ರೀ ಬಿ.ಸರೋಜಾದೇವಿ ಮೊನ್ನೆ ವಿಧಿವಶರಾಗಿದ್ದು, ಅವರ ಹುಟ್ಟೂರು ಚನ್ನಪಟ್ಟಣ ತಾಲೂಕಿನ ದಶಾವರದಲ್ಲಿ ಮಣ್ಣಿನ ಕಾರ್ಯ ನೆರವೇರಿದ್ದು, ಇನ್ನೂ ಭೂಶಾಂತಿ ಕಾರ್ಯವಷ್ಟೇ ಬಾಕಿ ಇದೆ. ಅವರ ಸಾಂಸಾರಿಕ ಜೀವನ ಇದೀಗ ಚರ್ಚೆಯಗುತ್ತಿದೆ. ಒಕ್ಕಲಿಗ ಪೊಲೀಸ್ ಭೈರಪ್ಪನವರ ಮಗಳು ಬಿ. ಸರೋಜಾದೇವಿ ಖ್ಯಾತ ಇಂಜಿನಿಯರ್ ಡಾ. ಹರ್ಷ ಅವರನ್ನು ವಿವಾಹವಾಗಿ ಸಂತೃಪ್ತ ಸಾಂಸಾರಿಕ ಜೀವನವನ್ನು ನಡೆಸಿದವರು. ಪತಿ, ಮಕ್ಕಳು ಮತ್ತು ಮೊಮ್ಮಕ್ಕಳ ಜೊತೆ ಸಂತಸದ ಜೀವನ ನಡೆಸಿದ್ದವರು.

ಬಿ. ಸರೋಜಾದೇವಿ ಅವರನ್ನು ಪಕ್ಕದ ಮದ್ದೂರು ತಾಲ್ಲೂಕಿನ ರಾಜಕೀಯ ಕ್ಷೇತ್ರದಲ್ಲಿ ಹೆಮ್ಮರವಾಗಿ ಬೆಳೆದು ಮುಖ್ಯ ಮಂತ್ರಿ, ರಾಜ್ಯಪಾಲ ಎಲ್ಲಾ ಆಗಿದ್ದ ಎಸ್.ಎಂ. ಕೃಷ್ಣ ಬಿ. ಸರೋಜಾದೇವಿ ಅವರನ್ನು ಪ್ರೇಮಿಸುತ್ತಿದ್ದರು, ಮದುವೆ ಪ್ರಸ್ತಾಪ ಕೂಡ ಆಗಿತ್ತು!



ಎಸ್.ಎಂ. ಕೃಷ್ಣಕುಟುಂಬ ಹಾಗೂ ಬಿ. ಸರೋಜಾದೇವಿ ಕುಟುಂಬಗಳ ನಡುವೆ ಪ್ರಾಥಮಿಕ ಮಾತುಕತೆ ನಡೆದಿದೆ. ಆದರೆ, ಇಬ್ಬರ ವಿವಾಹಕ್ಕೆ ಎರಡೂ ಕುಟುಂಬಗಳಲ್ಲಿ ಅಂತಿಮ ಒಪ್ಪಿಗೆ ಸಿಗಲಿಲ್ಲ! ಸಿನಿಮಾ ರಂಗದಲ್ಲಿ ಹೆಸರು ಮಾಡಿದ್ದ ಬಿ. ಸರೋಜಾದೇವಿ ಅವರನ್ನು ತಮ್ಮ ಮನೆಗೆ ಸೊಸೆಯನ್ನಾಗಿ ಮಾಡಿಕೊಳ್ಳಲು ಎಸ್.ಎಂ. ಕೃಷ್ಣ ಕುಟುಂಬದ ಹಿರಿಯರು ಕೂಡ ಒಲವು ತೋರಲಿಲ್ಲ! ಹೀಗಾಗಿ ಬಿ. ಸರೋಜಾದೇವಿ ಹಾಗೂ ಎಸ್.ಎಂ. ಕೃಷ್ಣ ನಡುವೆ ವಿವಾಹ ಸಂಬಂಧ ಏರ್ಪಡಲಿಲ್ಲ, ಇಬ್ಬರೂ ಅಮರ ಪ್ರೇಮಿಗಳಾಗಿದ್ದರಿಂದ ವಿವಾಹೇತರ ಸಂಬಂದವು ಕೂಡ ಏರ್ಪಡಲಿಲ್ಲ!

ಇದನ್ನು ಎಸ್‌ಎಂಕೆ ಸೋದರ ಶಂಕರ್ ಹಾಗೂ ಪತ್ನಿ ಪ್ರೇಮ ಅವರೇ ಹಿಂದೊಮ್ಮೆ ಹೇಳಿದ್ದಾರೆ! ನಮಗೆ ತಿಳಿದ ಪ್ರಕಾರ, ಎಸ್.ಎಂ. ಕೃಷ್ಣ ಅವರು ಪ್ರೇಮಮ್ಮರನ್ನು ಮದುವೆ ಆದ ಬಳಿಕ... ಬಿ. ಸರೋಜಾದೇವಿ ಅವರನ್ನು ಮರೆಯಲಾಗದೆ, ಅವರು ಶೂಟಿಂಗ್‌ನಲ್ಲಿದ್ದ ಸ್ಥಳಕ್ಕೆ ಯಾವುದೋ 'ನೆಪ'ದಲ್ಲಿ ಬಂದು, ನೋಡುತ್ತಾ ಕೂರುತ್ತಿದ್ದರು! ವಿಶೇಷವಾಗಿ, ರಾಜ್‌ಕುಮಾರ್ ಶೂಟಿಂಗ್‌ನಲ್ಲಿ ಇದನ್ನು ಜಾಸ್ತಿಯಾಗಿ ಮಾಡಿದ್ದರಂತೆ ಕೃಷ್ಣ!



ಎಸ್.ಎಂ. ಕೃಷ್ಣ ಅವರ ಒಡನಾಡಿಯಾಗಿದ್ದ ಎಚ್. ವಿಶ್ವನಾಥ್ ಈ ವಿಷಯವನ್ನು ತಮ್ಮ ಹಳ್ಳಿಹಕ್ಕಿ ಹಾಡು ಪುಸ್ತಕದಲ್ಲಿ ಎಸ್‌ಎಂಕೆ ಮತ್ತು ಸರೋಜಾದೇವಿ ಅವರ ಲವ್‌ಸ್ಟೋರಿ ಬಗ್ಗೆ ವಿಶೇಷವಾಗಿ ಬರೆದಿದ್ದರು. ಈ ಪುಸ್ತಕ ಬಿಡುಗಡೆ ಕಾಣುವ ಮುನ್ನವೇ ಈ ವಿಷಯ ಕೆಲ ಮಾಧ್ಯಮಗಳಲ್ಲಿ ಸೋರಿಕೆಯಾಗಿ ದೊಡ್ಡ ರಾದ್ಧಾಂತವೇ ನಡೆದು ಹೋಗಿತ್ತು.

2008ರ ಜನವರಿ 28 ರಂದು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಸಂಜೆ ಪುಸ್ತಕ ಬಿಡುಗಡೆ ಆಗಬೇಕಾಗಿತ್ತು. ಆದರೆ, ಆಗ ಮಾಧ್ಯಮಗಳಲ್ಲಿ ಇದು ಬ್ರೇಕಿಗ್ ನ್ಯೂಸ್ ಆಗಿ ಹೊಳಗಿದ್ದರಿಂದ ಮೈಸೂರು ಜಿಲ್ಲೆಯಲ್ಲಿರೋ ಎಸ್.ಎಂ. ಕೃಷ್ಣರ ಅಭಿಮಾನಿಗಳು ರೊಚ್ಚಿಗೆದ್ದು ಭಾರಿ ಪ್ರತಿಭಟನೆ ನಡೆಸಿದ್ದರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಯು. ಆರ್.ಅನಂತಮೂರ್ತಿ, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಪುಸ್ತಕ ಬಿಡುಗಡೆ ಮಾಡಬೇಕಾಗಿತ್ತು. ಆದರೆ ಎಸ್‌ಎಂಕೆ ಅಭಿಮಾನಿಗಳ ಗಲಾಟೆ, ಪ್ರತಿಭಟನೆ ಕಾರಣದಿಂದ ಅಂದು ಪುಸ್ತಕ ಬಿಡುಗಡೆಯನ್ನ ರದ್ದು ಮಾಡಿದ್ದರು!

ಎಚ್. ವಿಶ್ವನಾಥ್ ಅವರು 55 ವರ್ಷಗಳ ಹಿಂದೆ ಎಸ್.ಎಂ. ಕೃಷ್ಣ ಹಾಗೂ ಬಿ. ಸರೋಜಾದೇವಿ ನಡುವೆ ಪ್ರೇಮ ಇತ್ತು, ಮದುವೆ ಪ್ರಸ್ತಾಪ ಇತ್ತು ಅನ್ನೋದನ್ನು ತಮಗೆ ಎಸ್‌ಎಂಕೆ ಪತ್ನಿ ಪ್ರೇಮಾ ಹಾಗೂ ಸೋದರ ಎಸ್.ಎಂ. ಶಂಕರ್ ಇಬ್ಬರೂ ಖಚಿತಪಡಿಸಿದ್ದರು ಎಂದು ಎಚ್. ವಿಶ್ವನಾಥ್ ಸಮರ್ಥನೆ ನೀಡಿದ್ದರು. ಸ್ವತಃ ಬಿ. ಸರೋಜಾದೇವಿ ಅವರೇ ಮದುವೆ ಪ್ರಸ್ತಾಪ ಇದ್ದಿದ್ದನ್ನು ನಿರಾಕರಿಸಿರಲಿಲ್ಲ! ಎಚ್. ವಿಶ್ವನಾಥ್ ತಮ್ಮ ಹಳ್ಳಿ ಹಕ್ಕಿಯ ಹಾಡು' ಪುಸ್ತಕದಲ್ಲಿ ಬಿ. ಸರೋಜಾ ದೇವಿ ಹಾಗೂ ಎಸ್.ಎಂ. ಕೃಷ್ಣ ಅವರ ಮದುವೆ ಪ್ರಸ್ತಾಪದ ಪ್ರಸಂಗದ ಬಗ್ಗೆ ಬರೆದಿದ್ದು, ಅದು ಅಲ್ಲೋಲ ಕಲ್ಲೋಲ ಸೃಷ್ಟಿಸಿ, ಮುಂದೊಮ್ಮೆ ಆ ಪುಸ್ತಕ ಬಿಡುಗಡೆ ಆದಾಗ ಎಸ್.ಎಂ. ಕೃಷ್ಣ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದರು.

ವಿಶ್ವನಾಥ್ ಅಲ್ಲಿಗೇ ಪುಸ್ತಕಗಳನ್ನು ಕಳಿಸಿಕೊಟ್ಟು, ಫೋನ್ ಮಾಡಿದ್ದರಂತೆ. ಸರ್ ನಿಮಗೇನಾದರೂ ಬೇಜಾರಾಯಿತಾ? ಎಂದು ಕೇಳಿದರಂತೆ. ಅದಕ್ಕೆ ಅವರು, ಯಾಕೆ ಬೇಜಾರು. ಇರೋ ವಿಚಾರ ಬರೆದಿದ್ದೀಯಾ. ಮತ್ತೇನಿದೆ ಅದರಲ್ಲಿ ಎಂದಿದ್ದರಂತೆ! ಈ ರೀತಿ ಇದ್ದ ಮನುಷ್ಯ ಅವರು ಎಂದು ಇಂದಿಗೂ ನೆನಪಿಸಿಕೊಂಡಿದ್ದಾರೆ ವಿಶ್ವನಾಥ್.

ಇನ್ನೂ ಹಳ್ಳಿ ಹಕ್ಕಿ ಹಾಡು ಪುಸ್ತಕದ ಬಗ್ಗೆ ವಿವಾದ ಎದ್ದಾಗ, ಎಸ್.ಎಂ.ಕೃಷ್ಣ ಮಹಾರಾಷ್ಟ್ರ ರಾಜ್ಯಪಾಲರಾಗಿದ್ದರು. ಆಗ ಎಸ್.ಎಂ. ಕೃಷ್ಣ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ, ಆದರೆ, ಆಗ ಎಸ್.ಎಂ. ಕೃಷ್ಣ ಅವರ ಪತ್ನಿ ಪ್ರೇಮಾ ಅವರು ಪತ್ರಿಕಾ ಹೇಳಿಕೆಯ ಮೂಲಕ ಸ್ಪಷ್ಟನೆ ನೀಡಿ ವಿವಾದಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡಿದ್ದರು. ಪ್ರೇಮಾ ಕೃಷ್ಣ ಅವರು ನೀಡಿದ್ದ ಸ್ಪಷ್ಟನೆಯಲ್ಲಿ ಬಿ. ಸರೋಜಾದೇವಿ ಅವರನ್ನು ಎಸ್.ಎಂ. ಕೃಷ್ಣ ಅವರ ಜೊತೆ ಮದುವೆ ಮಾಡುವ ಪ್ರಸ್ತಾಪ ಬಂದಿತ್ತು. ಆದರೆ, ಎಸ್.ಎಂ. ಕೃಷ್ಣ ಮನೆಯಲ್ಲಿ ಸಿನಿಮಾ ಹಿನ್ನಲೆಯವರನ್ನು ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಲು ಹಿರಿಯರು ಒಪ್ಪಲಿಲ್ಲ, ಅಲ್ಲಿಗೆ ಈ ವಿಷಯ ಮುಗಿಯಿತು. ನಂತರ ಮುಂದುವರಿಯಲಿಲ್ಲ ಎಂದು ಸ್ಪಷ್ಟನೆ ನೀಡಿದ್ದರು. ಈ ಮೂಲಕ ಬಿ. ಸರೋಜಾದೇವಿ ಹಾಗೂ ಎಸ್.ಎಂ.ಕೃಷ್ಣ ನಡುವೆ ಮದುವೆ ಪ್ರಸ್ತಾಪ ಇದ್ದಿದ್ದನ್ನು ಪ್ರೇಮಾ ಅವರು ಕೂಡ ಪತ್ರಿಕಾ ಹೇಳಿಕೆಯ ಮೂಲಕ ಒಪ್ಪಿಕೊಂಡಿದ್ದರು!

ಒಂದು ಮೂಲದ ಪ್ರಕಾರ, ಅಮರಶಿಲ್ಪಿ ಜಕ್ಕಣಾಚಾರಿ ಚಿತ್ರದ ಸಂದರ್ಭದಲ್ಲಿ ಎಸ್.ಎಂ. ಕೃಷ್ಣ ಮತ್ತು ಸರೋಜಾದೇವಿ ಅವರ ನಡುವೆ ಪ್ರೇಮಾಂಕುರವಾಗಿತ್ತು! ಈ ವಿಷಯ ಮದುವೆವರೆಗೂ ಬಂದು (ಚಲುವಾಂತ ಚನ್ನಿಗನೆ ನಲಿದಾಡು ಬಾ...) ನಂತರ ಮುರಿದು ಬಿದ್ದಿದ್ದು ಇತಿಹಾಸ... ಬುದ್ಧಿವಂತಿಕೆ, ಶಾಂತಚಿತ್ತದ ಆಕರ್ಷಕ ವ್ಯಕ್ತಿತ್ವ ಹೊಂದಿದ್ದ ಕೃಷ್ಣ ಅವರು ಕರ್ನಾಟಕದ ಜನತೆಯ ಮನಸ್ಸನ್ನು ಮಾತ್ರವಲ್ಲ ಸರೋಜಾದೇವಿಯವರ ಹೃದಯವನ್ನೂ ಗೆದ್ದಿದ್ದರು. ಇವರಿಬ್ಬರ ನಡುವಿನ ಪ್ರೀತಿ ಸಾಕಷ್ಟು ಚರ್ಚೆ ಯನ್ನು ಹುಟ್ಟು ಹಾಕಿತ್ತು.

ರಾಜಕೀಯ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಎಸ್.ಎಂ. ಕೃಷ್ಣ ಯುವನಾಯಕರಾಗಿದ್ದಾಗ ಬಿ. ಸರೋಜಾದೇವಿ ಕನ್ನಡ, ತಮಿಳು, ತೆಲುಗು, ಹಿಂದಿ ಚಿತ್ರರಂಗದ ಖ್ಯಾತ ನಟಿಯಾಗಿ ಬೆಳೆದಿದ್ದರು. ಅವರ ಸೌಂದರ್ಯ ಮತ್ತು ಅಭಿನಯ ಲಕ್ಷಾಂತರ ಅಭಿಮಾನಿಗಳ ಮನಗೆದ್ದಿತ್ತು. ಸರೋಜಾದೇವಿ ಸೌಂದರ್ಯಕ್ಕೆ ಮನಸೋತಿದ್ದ ಎಸ್‌ಎಂಕೆ, ಅವರನ್ನು ಪ್ರೀತಿಸಿದರು. ಸರೋಜಾದೇವಿ ಕೂಡ ಅವರ ಪ್ರೇಮಕ್ಕೆ ಸ್ಪಂದಿಸಿದ್ದರು. ಆದರೆ, ವಿಧಿ ಒಂದಾಗಿ ಸೇರಲು ಬಿಡಲಿಲ್ಲ! ವಿಶೇಷ ಅಂದ್ರೆ, ಇಬ್ಬರೂ ತಮ್ಮ ಜೀವನದಲ್ಲಿ ನಡೆದ ಪ್ರೇಮ ಪ್ರಸಂಗವನ್ನು ಸಾಮಾಜಿಕವಾಗಿ ದೊಡ್ಡದಾಗಿ ಬಿಂಬಿಸಲಿಲ್ಲ!

ಕೃಷ್ಣ ತಮ್ಮ ಪತ್ನಿ ಪ್ರೇಮಾ ಅವರೊಂದಿಗೆ ದಾಂಪತ್ಯ ಜೀವನ ನಡೆಸಿದರೆ, ಸರೋಜಾದೇವಿ ಶ್ರೀಹರ್ಷ ಎಂಬ ಎಂಜಿನಿಯರ್‌ರನ್ನು ಮದುವೆಯಾಗಿ ತುಂಬು ಜೀವನ ನಡೆಸಿದ್ದರು. ಕಡೆಯದಾಗಿ, ಕೃಷ್ಣ-ಸರೋಜದೇವಿ ಜೀವನಪೂರ್ತಿ ದೂರ ದೂರ ಇದ್ದುಕೊಂಡೇ ಒಬ್ಬರನ್ನೊಬ್ಬರು ಗೌರವಿಸುತ್ತಿದ್ದರು ಮತ್ತು ಪ್ರೇಮಿಸುತ್ತಿದ್ದರು, ಥೇಟ್ ರಾಧಾಕೃಷ್ಣರಂತೆ!! ☯

## ನಿರ್ಮಾಪಕ ಚಿನ್ನಪ್ಪ ತೇವರ್ ಅವರ ಮೇಲೆ ಚಿನ್ನ ಸುರಿದಿದ್ದರು!


ಭಾರತೀಯ ಚಲನಚಿತ್ರ ರಂಗದಲ್ಲೇ ದಿ ಮೋಸ್ಟ್ ಸೆಲೆಬ್ರೇಟೆಡ್ ಕ್ವೀನ್ ಎಂದರೆ ಅದು ಬಿ. ಸರೋಜಾ ದೇವಿ. 50-60-70ರ ದಶಕದಲ್ಲಿ ಬ್ಲಾಕ್ ಬಸ್ಟರ್ ಸಿನಿಮಾಗಳನ್ನ ನೀಡಿದವರು ಬಿ ಸರೋಜಾ ದೇವಿ. ಅಂದಿನ ನಿರ್ಮಾಪಕರ ಅಕ್ಷರಶಃ ಚಿನ್ನದ ಮೊಟ್ಟೆ!

ಆಗಿನ ತಮಿಳು ಸೂಪರ್ ಸ್ಟಾರ್ ಎಂಜಿಆರ್ ಜೊತೆ ಬ್ಯಾಕ್ ಟು ಬ್ಯಾಕ್ 26 ಸೂಪರ್ ಹಿಟ್ ಸಿನಿಮಾಗಳನ್ನ ಕೊಟ್ಟ ಖ್ಯಾತಿ ಬಿ. ಸರೋಜಾ ದೇವಿ ಅವರದ್ದು. ಶಿವಾಜಿ ಗಣೇಶನ್ ಜೊತೆ 22 ಸತತ ಹಿಟ್ಸ್ ಕೊಟ್ಟವರು ಬಿ ಸರೋಜಾ ದೇವಿ. ಇನ್ನೂ ಜೆಮಿನಿ ಗಣೇಶನ್ ಜೊತೆಗೆ 17 ಹಿಟ್ ಚಿತ್ರಗಳನ್ನ ಕೊಟ್ಟು ಇತಿಹಾಸ ನಿರ್ಮಿಸಿದ್ದವರು ಬಿ ಸರೋಜಾ ದೇವಿ. ಇಂತಿಪ್ಪ ಬಿ ಸರೋಜಾ ದೇವಿ ಮೇಲೆ ಖ್ಯಾತ ನಿರ್ಮಾಪಕ ಚಿನ್ನಪ್ಪ ತೇವರ್ ಚಿನ್ನದ ನಾಣ್ಯಗಳನ್ನೇ ಸುರಿದಿದ್ದರು ಅನ್ನೋದು ನಿಮಗೆ ಗೊತ್ತಾ? ಈ ಸ್ವರಸ್ಯಕರ ಸಂಗತಿಯನ್ನು ಈಗ ಜಗಜ್ಜಾಹಿರುಗೊಳಿಸಿದ್ದು ಬೇರಾರು ಅಲ್ಲಾ, ಗಿರಿಕನ್ಯೆ ಜಯಮಾಲಾ!

ಅದು 1976ರ ಸಮಯ ಬಿ. ಸರೋಜ ದೇವಿ ಅವರ ಹುಟ್ಟುಹಬ್ಬ ಇತ್ತು. ಅಣ್ಣಾವ್ರು, ಪಾರ್ವತಮ್ಮ ಅವರಿಗೆ ಪಾರ್ವತಿ. ತುಂಬಾ ಒಳ್ಳೆಯ ಉಡುಗೊರೆ ತಗೊಂಡು ಹೋಗು... ಅಂತ ಹೇಳಿದರು. ಅಂದು ಪಾರ್ವತಮ್ಮ ಅವರು ನನ್ನನ್ನೂ ಕರೆದುಕೊಂಡು ಹೋದರು. ಈ ತುದಿಯಿಂದ ಹಿಡಿದು ಆ ತುದಿಯವರೆಗೂ ಅವರ ಮನೆ ಇತ್ತು. ಅದನ್ನ ನೋಡಿ ನಾನು ಬೆರಗಾಗಿಬಿಟ್ಟೆ

ಆ ತಾಯಿ, ಅವರ ಮನೆ... ಎಲ್ಲವೂ ವಜ್ರದಿಂದ ಕೂಡಿತ್ತು.! ಅವತ್ತು ಬಿ. ಸರೋಜಾ ದೇವಿ ಅವರು ಕೆಂಪು ಬಾರ್ಡರ್ ಇರುವ ನೀಲಿ ಸೀರೆಯುಟ್ಟಿದ್ದರು. ಅದು ನನ್ನ ಕಣ್ಣಿಂದ ಇನ್ನೂ ಮಾಸಿಲ್ಲ. ಸಾಕ್ಷಾತ್ ಮಹಾಲಕ್ಷ್ಮೀಯನ್ನೇ ನೋಡಿದ ಅನುಭವ ನನಗೆ

ನಮ್ಮದು ಊಟವೆಲ್ಲಾ ಆಯ್ತು. ಎಲ್ಲಾ ಮುಗಿದ್ಮೇಲೆ ಸ್ವಲ್ಪ ರೆಸ್ಟ್‌ಗೆ ಅಂತ ಹೋಗಿ ಬಿ. ಸರೋಜಾ ದೇವಿ ಅವರು ಮಲಗಿಬಿಟ್ಟರು. ಅಷ್ಟೊತ್ತಿಗೆ ಚಿನ್ನಪ್ಪ ತೇವರ್ (ಸ್ಯಾಂಡೋ ಎಂಎಂಎ ಚಿನ್ನಪ್ಪ ತೇವರ್) ಬಂದರು. ಅವರು ಬಹಳ ದೊಡ್ಡ ನಿರ್ಮಾಪಕರು. ಚಿನ್ನಪ್ಪ ತೇವರ್ ಅಂದ್ರೆ ಎಲ್ಲರಿಗೂ ಲಾಟರಿ ಹೊಡೆದಂಗೆ. ಅವರ ಎಲ್ಲಾ ಸಿನಿಮಾಗಳೂ ಸೂಪರ್ ಡ್ಯೂಪರ್ ಹಿಟ್! ರಾಜೇಶ್ ಖನ್ನಾ ಅವರ ಹಾಥಿ ಮೇರಾ ಸಾಥಿ ಚಿತ್ರವನ್ನ ಅವರೇ ನಿರ್ಮಿಸಿದ್ದು. ಚಿನ್ನಪ್ಪ ತೇವರ್ ಬಂದಾಗ ಬಿ. ಸರೋಜಾ ದೇವಿ ಮಲಗಿಬಿಟ್ಟಿದ್ದರುಅವರು ಬಂಗಾರದ ತಟ್ಟೆ ಮೇಲೆ ಕೆಂಪು



ಬಟ್ಟೆ ಹಾಕಿಕೊಂಡು ತಂದಿದ್ದರು. ಆ ಕೆಂಪು ಬಟ್ಟೆಯನ್ನ ತೆಗೆದರೆ ಚಿನ್ನದ ನಾಣ್ಯಗಳಿದ್ದವು! ಚಿನ್ನಪ್ಪ ತೇವರ್ ಕೈ ಮೊದಲೇ ದೊಡ್ಡದಿತ್ತು. ಎರಡೂ ಕೈಗಳಿಂದ ಬಾಚಿ ಮೂರು ಬೊಗಸೆ ಚಿನ್ನದ ನಾಣ್ಯಗಳನ್ನ ಬಿ. ಸರೋಜಾ ದೇವಿ ಮೇಲೆ ಹಾಕಿ ಅಮ್ಮ... ಏಳಮ್ಮ... ಎಂದು ಎಬ್ಬಿಸಿದರು. ಆ ವೈಭವ.. ಆ ವೈಭೋಗ... ಆ ಸಂಭ್ರಮ... ಆ ಗೌರವ... ಯಾವತ್ತೂ ಯಾವ ಕಲಾವಿದರಿಗೂ ಸಿಕ್ಕಿದ್ದನ್ನ ನಾನು ನೋಡಿಲ್ಲ, ಬಿ. ಸರೋಜಾ ದೇವಿ ನಟಿಸಿದ ಸಿನಿಮಾಗಳೆಲ್ಲವೂ ಸೂಪರ್ ಡ್ಯೂಪರ್ ಹಿಟ್ ಆದವು. ಬಿ ಸರೋಜಾ ದೇವಿ ನಿಜಕ್ಕೂ ಮಹಾಲಕ್ಷ್ಮೀಯೇ. ನಿರ್ಮಾಪಕರು ಚಿನ್ನದ ನಾಣ್ಯಗಳನ್ನ ಸುರಿದು ಗೌರವ ಕೊಟ್ಟಿದ್ದನ್ನ ನಾನು ಮರೆಯೋಕೆ ಸಾಧ್ಯವೇ ಇಲ್ಲಾ... ಮುಂತಾಗಿ ಹೇಳುತ್ತಾ ಹಳೆಯ ಅದ್ಭುತ ಘಟನೆಯನ್ನ ನೆನೆದಿದ್ದಾರೆ ಜಯಮಾಲಾ!! ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 20.7.2025

# ಎಲ್ಲಾ ಭಾಷೆಯ ಸಿನಿಮಾಗಳಿಗೂ ಒಂದೇ ದರ ಫಿಕ್ಸ್, ರಾಜ್ಯ ಸರ್ಕಾರ!

ಜುಲೈ 15, 2025 ರಂದು ರಾಜ್ಯದ ಎಲ್ಲ ಮಲ್ಟಿಪ್ಲೆಕ್ಸ್ ಮತ್ತು ಏಕ ಪರದೆ ಚಿತ್ರಮಂದಿರಗಳಲ್ಲಿ ಮತ್ತು ಏಕ ಪರದೆ ಚಿತ್ರಮಂದಿರಗಳಲ್ಲಿ ಏಕರೂಪದ ದರ ಜಾರಿ ಮಾಡಿ ಸರ್ಕಾರ ಆದೇಶಿಸಿದೆ! ಯಾವುದೇ ಕಾರಣಕ್ಕೂ ಸಿನಿಮಾ ಪ್ರದರ್ಶನದ ಟಿಕೆಟ್ ಬೆಲೆ 200 ರೂ. ಮೀರ ಬಾರದು ಎಂದು ರಾಜ್ಯ ಸರ್ಕಾರ ಕಟ್ಟಪ್ಪಣೆ ಮಾಡಿದೆ! ಈ ಬಗ್ಗೆ ಆಕ್ಷೇಪವಿದ್ದಲ್ಲಿ 15 ದಿನದ ಒಳಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ!


ಇದು ಎಲ್ಲ ಭಾಷೆಯ ಸಿನಿಮಾಗಳಿಗೂ ಅನ್ವಯ ಆಗಲಿದೆ. ಕನ್ನಡದ ಚಿತ್ರಗಳಿಗೆ ನಿರೀಕ್ಷಿತ ಪ್ರಮಾಣದ ಪ್ರೇಕ್ಷಕರು ಬಾರದೇ




ಇರುವುದರಿಂದ ಅನೇಕ ಚಿತ್ರಮಂದಿರಗಳನ್ನು ಮುಚ್ಚಲಾಗಿದೆ. ವಿಚಿತ್ರವೆಂದರೆ, ಇಲ್ಲಿ ಪರಭಾಷೆ ಸಿನಿಮಾಗಳು ಮಾತ್ರ ಬಹುಕೋಟಿ ಕೊಳ್ಳೆ ಹೊಡೆಯುತ್ತಿವೆ! ಹಾಗಾದ್ರೆ ನಮ್ಮಲ್ಲಿ ಒಳ್ಳೆ ಕಂಟೆಂಟ್ ಸಿನಿಮಾ ಬರ್ತಾನೆ ಇಲ್ವಾ? ಕನ್ನಡ ಚಿತ್ರರಂಗವನ್ನು ಉಳಿಸಲು ಯಶ್, ದರ್ಶನ್, ಶಿವರಾಜ್‌ಕುಮಾರ್, ಸುದೀಪೇ ಬರ್ಬೇಕಾ?

ಇದೆಲ್ಲ ಸುಳ್ಳು ಕಣ್ರೀ. ಈಗ ಬಿಡುಗಡೆ ಆಗಿ ಭಜ ರಿ ಪ್ರದಶ ನ ಕಾಣುತ್ತಿರೋ 'ಮಾದೇವ' ಚಿತ್ರದಲ್ಲಿ ಮರಿ ಟೈಗರ್ ವಿನೋದ್ ಪ್ರಭಾಕರ್ ಹೀರೋ. ಇಂಥ ಚಿತ್ರವನ್ನು ಕೊಲೆ ಮಾಡದೇ ಅದರ ಪಾಡಿಗೆ ಅದನ್ನು ನಡೆಯಲು ಬಿಟ್ರೆ 100 ಡೇಸ್ ಗ್ಯಾರಂಟಿ.

ಇಲ್ಲಿರೋ ತೆಲುಗು, ತಮಿಳು ಪ್ರದರ್ಶಕರು ನಮ್ಮ ಕನ್ನಡ ಚಿತ್ರದ ಕೊಲೆ ಮಾಡೋದನ್ನು ಮೊದಲು ನಿಲ್ಲಿಸಬೇಕು. ಯಾರು? ಶಿವಣ್ಣ, ರವಿಚಂದ್ರನ್, ದರ್ಶನ್, ಸುದೀಪ್.... ಇವರೇ ಈ ಕೆಲಸ ಮಾಡ ಬೇಕು. ಅದನ್ನು ಬಿಟ್ಟು ಪ್ಯಾನ್ ಇಂಡಿಯಾ ಪ್ಯಾನ್ ಇಂಡಿಯಾ ಪ್ಯಾನ್ ಇಂಡಿಯಾ ಅಂದ್ಕೊಂಡು ಅವರ ಹಿಂದೆ ಬಿದ್ಕೊಂಡ್ರೆ ?! ಹೀಗೇ ಮಾಡ್ತಾ ಇದ್ರೆ ಒಂದಲ್ಲ ಒಂದಿನ ನಮ್ಮವರಿಂದಲೇ ನಮ್ಮ ಕನ್ನಡ ಚಿತ್ರ ರಂಗ ಬರ್ಬಾದ್ ಆಗುತ್ತದೆ ಆಗುತ್ತದೆ! ಸದ್ಯ... ಸಿದ್ದು ಸರ್ಕಾರ ಇದೀಗ ಎಲ್ಲಾ ಸಿನಿಮಾಗಳಿಗೂ ಏಕರೂಪ ದರ ನಿಗಧಿ ಮಾಡಿದೆ. ಇದರ ಸದುಪಯೋಗ ಪಡಿಸಿಕೊಂಡು ಇನ್ನಾದ್ರೂ ಉದ್ಧಾರ ಆಗ್ರಿ...




# ರಾಮಾಯಣ ಬಜೆಟ್ ನಾಲ್ಕು ಸಾವಿರ ಕೋಟಿ ಅಂತೇ?!

ಅಬ್ಬಬ್ಬಾ.....ಒಂದಲ್ಲ,ಎರಡಲ್ಲ ರಾಮಾಯಣ ಚಿತ್ರದ ಬಜೆಟ್ ನಾಲ್ಕು ಸಾವಿರ ಕೋಟಿ ರೂಪಾಯಿ ಅಂತೇ!ಇದರ ನಿರ್ಮಾಪಕರಲ್ಲಿ ಯಶ್ ಕೂಡ ಒಬ್ಬರು ಎಂಬುದು ಈಗಾಗಲೇ ರಿವೀಲ್ ಆಗಿದೆ. ಹಾಗಾದರೆ ಇದರಲ್ಲಿ ಯಶ್ ಅವರ ಪಾಲೆಷ್ಟು? ಇದೇ ಪ್ರಶ್ನೆ ಈವಾಗ ಭುಗಿಲೆದ್ದು ಕುಂತಿದೆ! ನಿಮಗೆಲ್ಲ ಗೊತ್ತಿರುವಂತೆ, ಈಗ ಬರುತ್ತಿರೋ ಈ 'ರಾಮಾಯಣ' ಚಿತ್ರದಲ್ಲಿ ಯಶ್ ರಾವಣನಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಮತ್ತು ರಣಬೀರ್ ಕಪೂರ್ ರಾಮನ ಪಾತ್ರದಲ್ಲಿದ್ದಾರೆ. ಸಾಯಿ ಪಲ್ಲವಿ ಸೀತಾ ಪಾತ್ರಧಾರಿ.

ರಣಭೀರ್ ಆಗಲಿ ಸಾಯಿ ಪಲ್ಲವಿ ಆಗಲಿ ಈ ಚಿತ್ರಕ್ಕೆ ಹಣ ಹೂಡುತ್ತಿಲ್ಲ, ಯಶ್ ಮಾತ್ರ ಪಾರ್ಟ್‌ನರ್ ಆಗಿದ್ದಾರೆ! ಎರಡು ಭಾಗದಲ್ಲಿ ಬರಲಿರೋ ಚಿತ್ರದ ಬಜೆಟ್ ನಾಲ್ಕು ಸಾವಿರ ಕೋಟಿ ಎಂಬುದಾಗಿ ನಿರ್ದೇಶಕ ನಿತೀಶ್ ತಿವಾರಿ ಬಹಿರಂಗ ಹೇಳಿಕೆ ನೀಡಿದ್ದಾರೆ. ಹಾಗಾದ್ರೆ ಇದರಲ್ಲಿ ಯಶ್ ಪಾಲೆಷ್ಟು? ಒಂದು ಮೂಲದ ಪ್ರಕಾರ, ಯಶ್ ತಮಗೆ ಸಂಭಾವನೆಯಾಗಿ ಬರಬೇಕಾದ ಹಣವನ್ನು ಮಾತ್ರ ಈ ಚಿತ್ರದಲ್ಲಿ ಹೂಡಿಕೆ ಮಾಡಿದ್ದಾರೆ. ಎರಡೂ ಭಾಗ ಸೇರಿ ಯಶ್ ಅವರ ಸಂಭಾವನೆ 300 ಕೋಟಿ ರೂಗಳಂತೆ! ರಾಮಾಯಣ ಶುರುವಾದ ಸಂದರ್ಭದಲ್ಲಿ 1000 ಕೋಟಿ ಬಜೆಟ್ ಎಂದು ನಿರ್ಧರಿಸಲಾಗಿತ್ತಂತೆ. ಆಮೇಲೆ ಲೆಕ್ಕಾಚಾರ ಉಲ್ಟಾ ಆಗಿ ಈಗ ನಾಲ್ಕು ಸಾವಿರ ಕೋಟಿ... ಎಂದು ತಿವಾರಿ ಹೇಳಿದ್ದಾರೆ.

ಇದನ್ನು ಕೇಳಿ ಜನರಷ್ಟೇ ಅಲ್ಲಾ, ಭಾರತೀಯ ಚಲನಚಿತ್ರ ರಂಗದ ದಿಗ್ಗಜರೆಲ್ಲಾ ಶಾಕ್ ಆಗಿರುವುದು ಸುಳ್ಳಲ್ಲ, ಹಾಗೇನೇ, ನಾಲ್ಕು ಸಾವಿರ ಕೋಟಿ ರೂ. ಸುರಿದು ಸಿನಿಮಾ ಮಾಡಿದರೆ ಅದರಿಂದ ಲಾಭ ಕಂಡುಕೊಳ್ಳು ವುದು ಹೇಗೆ ಎಂಬ ಪ್ರಶ್ನೆ ಅನೇಕರಿಗೆ ಮೂಡಿರುವುದು ಸುಳ್ಳಲ್ಲ! ಬಿಗ್ ಬ್ರೇಕಿಂಗ್ ನ್ಯೂಸ್ ಏನೆಂದರೆ... ನಮ್ಮ ಯಶ್ ರಜನಿ ಕಾಂತ್ ಅವರ ಮಟ್ಟಕ್ಕೆ ಬೆಳೆದು ನಿಂತಿದ್ದಾರಲ್ಲ.... ಎಂಬುದು!! ಅಂದಹಾಗೆ, 'ರಾಮಾಯಣ' ಮುಗಿದ ಕೂಡಲೇ ಯಶ್ ಕೆಜಿಎಫ್-3 ನಲ್ಲಿ ಬ್ಯುಸಿ ಆಗಲಿದ್ದಾರೆ. ಇದರಲ್ಲಿ ಯಶ್ ಜೊತೆ ಇನ್ನೊಬ್ಬ ಇಂಟರ್ ನ್ಯಾಷನಲ್ 'ಡಾನ್' ಆಗಿ ಪ್ರಭಾಸ್ ನಟಿಸಲಿದ್ದಾರೆ ಎಂಬ ಸುದ್ದಿಯಿದೆ!!!

# ಮಹೇಶ್ ಬಾಬುಗೆ ಇ.ಡಿ. ನೋಟಿಸ್!




ಟೋಲಿವುಡ್‌ನಲ್ಲಿ ವಿವಾದಗಳಿಂದ ದೂರವೇ ಇರುವ ಏಕೈಕ ನಟ ಅಂದ್ರೆ ಅದು ಮಹೇಶ್ ಬಾಬು! ಇದೀಗ ಅವರ ಮೇಲೆ ಒಂದು ಆರೋಪ ಕೇಳಿ ಬಂದಿದ್ದು, ಪೊಲೀಸ್ ನೋಟೀಸ್ ಕೂಡ ನೀಡಲಾಗಿದೆ. ಸಿನಿಮಾ ಆಯ್ತು, ತಮ್ಮ ಕುಟುಂಬವಾಯ್ತು ಎಂದು ಆರಾಮಾಗಿದ್ದ ಮಹೇಶ್ ಬಾಬು ಅವರಿಗೆ ಇದರಿಂದ ಮುಜುಗರವಾಗಿರಬಹುದು. ಮಹೇಶ್ ಬಾಬು ಸಿನಿಮಾ ಮಾತ್ರವಲ್ಲದೆ ಜಾಹೀರಾತುಗಳಲ್ಲಿಯೂ ನಟಿಸಿದ್ದಾರೆ. ಇವರು ನಟಿಸಿರುವ ಜಾಹೀರಾತನ್ನು ನೋಡಿ, ಅಭಿಮಾನಿ ಯೊಬ್ಬರು ಒಂದು ದೊಡ್ಡ ಪ್ರಾಪರ್ಟಿಯನ್ನು ಖರೀದಿಸಿದ್ದರು. ಅದೇ ಈಗ ವಿವಾದದ ಕೇಂದ್ರಬಿಂದು ವಾಗಿದ್ದು ಮಹೇಶ್ ಬಾಬು ಕೋರ್ಟ್‌ಗೆ ಅಲೆಯುವಂತೆ ಮಾಡಿದೆ! ನಡೆದಿರುವುದೇನೆಂದರೆ, ಸಾಯಿ ಸೂರ್ಯ ಡೆವೆಲಪರ್ಸ್ ಹೆಸರಿನ ರಿಯಲ್ ಎಸ್ಟೇಟ್ ಸಂಸ್ಥೆಗೆ ಮಹೇಶ್ ಬಾಬು ರಾಯಭಾರಿ ಆಗಿದ್ದಾರೆ. ಅವರು ಅಂದ್ರೆ ಸಾಯಿ ಸೂರ್ಯ.... ರವರು, ತಮ್ಮ ರಾಯಭಾರಿ ಮಹೇಶ್ ಬಾಬು ಅವರ ಚಿತ್ರವನ್ನು ಬಳಸಿಕೊಂಡು ಅಸ್ತಿತ್ವದಲ್ಲೇ ಇಲ್ಲದ ಲೇಔಟ್‌ನಲ್ಲಿ ಸಾವಿರಾರು ಸೈಟ್ ಗಳನ್ನು ಗ್ರಾಹಕರಿಗೆ ಮಾರಾಟ ಮಾಡಿದೆಯಂತೆ!

ಹೈದರಾಬಾದ್ ಸಮೀಪದ ಬಾಲಾಪುರ ವ್ಯಾಪ್ತಿಯಲ್ಲಿ ಲೇಔಟ್ ಇದೆ ಎಂದು ಗ್ರಾಹಕರನ್ನು ನಂಬಿಸಿದ್ದ ಸಾಯಿ ಸೂರ್ಯ ಡೆವೆಲಪರ್ಸ್‌ನವರು ಸಾವಿರಾರು ಗ್ರಾಹಕರಿಗೆ ಪ್ರತಿ ಸೈಟಿಗೆ ಸುಮಾರು 45 ಲಕ್ಷದಂತೆ ಮಾರಾಟ ಮಾಡಿದ್ದಾರಂತೆ! ಆದರೆ ತಡವಾಗಿ ಗೊತ್ತಾಗಿದ್ದೆಂದರೆ ಸಾಯಿ ಸೂರ್ಯ ಡೆವೆಲಪರ್ಸ್ ಮಾರಾಟ ಮಾಡಿದ್ದ ಆ ಲೇಔಟ್ ಅಸ್ಥಿತ್ವದಲ್ಲೇ ಇಲ್ಲಾ!! ಸಾಯಿ ಸೂರ್ಯ ಡೆವಲಪರ್ಸ್‌ನವರು ಲೇಔಟ್‌ಗೆ ಸಂಬಂಧಿಸಿದ ಬ್ರೋಚರ್‌ಗಳನ್ನು ತಯಾರು ಮಾಡಿ ಗ್ರಾಹಕರಿಗೆ ನೀಡಿದ್ದು, ಅದರಲ್ಲಿ ಮಹೇಶ್‌ಬಾಬು ಅವರ ಚಿತ್ರ ರಾರಾಜಿಸಿತ್ತು! ತಮ್ಮ ಆರಾಧ್ಯ ದೈವ ಮಹೇಶ್ ಬಾಬು ಚಿತ್ರಪಟ ನೋಡಿಯೇ ಮುಗಿಬಿದ್ದು ಲಕ್ಷ ಲಕ್ಷ ಸುರಿದು ಸೈಟ್ ಖರೀದಿಸಿದ್ದ ಜನರು, ಇದೀಗ ಸಾಯಿ ಸೂರ್ಯ ಡೆವಲಪರ್ಸ್ ಜೊತೆ ಮಹೇಶ್ ಬಾಬು ವಿರುದ್ಧವೂ ಪೊಲೀಸ್ ದೂರು ದಾಖಲಿಸಿದ್ದಾರೆ! ಈ ಫ್ರಾಡ್ ಕೇಸ್ ನಲ್ಲಿ ಕೋಟ್ಯಾಂತರ ಹಣದ ವಹಿವಾಟು ನಡೆದಿರುವುದರಿಂದ ಇ.ಡಿ. ಪ್ರವೇಶವಾಗಿದ್ದು, ಮಹೇಶ್ ಪಡೆದುಕೊಂಡಿದ್ದ 60 ಕೋಟಿ ರೂ ವಿಷಯ ಮುನ್ನಲೆಗೆ ಬಂದಿದೆ!! ಗ್ರಾಹಕರ ವೇದಿಕೆ ಸೇರಿದಂತೆ ಇನ್ನೂ ಕೆಲವು ಕಡೆಗಳಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿದೆಯಂತೆ!!!


## ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೋರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666, 8884452699 policenewsreporter@gmail.com


Vol. 41 No. 07 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com